UNIVERSAL
LIBRARY
OU_200458
UNIVERSAL
LIBRARY

ಮನೋರಂಜನ ಪ್ರಕಾಶನ:

# ಶ್ರೀಕಾಂತ

( ದ್ವಿತೀಯ ಭಾಗ )

ಮೂಲ ಲೇಖಕರು .

ದಿ ಶರಚ್ಚಂದ್ರ ಚಟ್ಟೋಪಾಧ್ಯಾಯರು

ಅನುವಾದಕರು :

ಶ್ರೀ. ಗುರುನಾಥ ಜೋಶಿ

★

ಪ್ರಥಮ ಮುದ್ರಣ ] [ ಒಂದು ರೂಪಾಯಿ.

೧೯೪೪

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ.

ಮುದ್ರಕರು
ಸಕೀಶಪ್ಪಾ ಮಲ್ಲಪ್ಪಾ ಮುಂತಗುಪ್ಪಿ
ರವೀಂದ್ರ ಮುದ್ರಣಾಲಯ
( ಮನೆ ನಂ. ೭೮೭೪ )
ಧಾರವಾಡ

( ಈ ಗ್ರಂಥದ ಸರ್ವಾಧಿಕಾರವು ಪ್ರಕಾಶಕರದು )

---

ಪ್ರಕಾಶಕರು

ಶ್ರೀ. ಎಚ್. ಬಿ. ನವಲೂರ

ಮನೋರಂಜನ ಪ್ರಕಾಶನ ಸಮಿತಿ

ಧಾರವಾಡ

# ಪ್ರಕಾಶಕರ ಮಾತು

ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರ ಶ್ರೇಷ್ಠ ಕಾದಂಬರಿಯಾದ ಶ್ರೀಕಾಂತದ ಎರಡನೆಯ ಭಾಗವನ್ನು—ಮೊದಲನೆಯ ಭಾಗದ ಎಲ್ಲ ಪ್ರತಿಗಳು ಎರಡು ತಿಂಗಳದ ಅಲ್ಪಾವಧಿಯಲ್ಲಿಯೇ ಮಾರಾಟವಾಗಿ ಹೋದ ಬಳಿಕ—ಕನ್ನಡ ನಾಡಿನ ವಾಚಕವೃಂದದ ಕೈಗೆ ಕೊಡಲು ನಮಗೆ ಸಂತೋಷವೆನಿಸುತ್ತದೆ

ಉಳಿದ ಆರು ಭಾಗಗಳನ್ನು ಪ್ರತಿ ಮೂರು ತಿಂಗಳಿಗೊಂದು ಭಾಗದಂತೆ ಪ್ರಕಟಿಸಲು ನಿಶ್ಚಯಿಸಿರುವೆವು ಈಗಿನ ಕಾಗದದ ಅಭಾವದ ಕಾಲದಲ್ಲಿ ಈ ಕಾರ್ಯಕ್ಕೆ ಕೈಹಾಕುವುದೆಂದರೆ ಒಂದು ಸಾಹಸದ ಕಾರ್ಯವೇ ಸರಿ ಆದಾಗ್ಯೂ ನಾವು ಮುನ್ನಡೆಯನ್ನು ಇಡುತ್ತ ಸಾಗಿದ್ದೇವೆ ಈವರೆಗೆ ವಾಚಕರು ಇತ್ತ ನೆರವು—ಸಹಕಾರಗಳು ನಮ್ಮ ಕಾರ್ಯದಲ್ಲಿ ಹೆಚ್ಚುಹೆಚ್ಚಾಗಿ ದೊರೆತಲ್ಲಿ ನಾವು ಇನ್ನೂ ಹೆಚ್ಚು ದೃಢ ಸಂಕಲ್ಪದಿಂದ ಮುಂದುವರಯುವೆವು ತಮ್ಮ ನೆರವು ಸಹಕಾರಗಳನ್ನು ಇತ್ತು ನಮ್ಮಿಂದ ಇದಕ್ಕೂ ಹೆಚ್ಚು ಸೇವೆಯನ್ನು ಕನ್ನಡಿಗರು ತೆಗೆದುಕೊಳ್ಳುವರೆಂಬ ಭರವಸೆ ನಮಗಿದೆ ಶ್ರೀ ಗುರುನಾಥ ಜೋಶಿ ಅವರು ನಮಗೆ ಈ ಪುಸ್ತಕವನ್ನು ಸಕಾಲಕ್ಕೆ ಒದಗಿಸಿಕೊಟ್ಟು ನೆರವಾದುದಕ್ಕಾಗಿ 'ಜಯಕರ್ನಾಟಕ' ಕಾರ್ಯಾಲಯದ ಮತ್ತು ರವೀಂದ್ರ ಮುದ್ರಣಾಲಯದ ಕಾರ್ಯಕರ್ತರೂ ಸಕಾಲಕ್ಕೆ ಮುದ್ರಿಸಿ ಕೊಟ್ಟುದಕ್ಕಾಗಿ, ಹುಬ್ಬಳ್ಳಿಯ ಸಾಹಿತ್ಯ ಭಂಡಾರದವರು ಶರತ್ ಬಾಬುಗಳ ಬ್ಲಾಕನ್ನು ಕೊಟ್ಟು ಪುಸ್ತಕದ ಅಂದವನ್ನು ಬೆಳೆಯಿಸಲು ನೆರವಾದುದಕ್ಕಾಗಿ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು

ಎಚ್. ವಿ ನವಲೂರ.

# ನಿವೇದನ

★

ಶ್ರೀಕಾಂತದ ಎರಡನೆಯ ಭಾಗವನ್ನು ಕನ್ನಡವಾಚಕರ ಕೈಗೆ ಅರ್ಪಣಮಾಡುವ ಸಮಯವು ಒದಗಿದುದಕ್ಕಾಗಿ ಸಂತೋಷವೆನಿಸುತ್ತದೆ. ಒಂದನೆಯ ಭಾಗದ ಎಲ್ಲ ಪ್ರತಿಗಳೂ ಬೇಗನೇ ಮಾರಾಟವಾಗಿಹೋದುವು. ಅದರ ದ್ವಿತೀಯ ಮುದ್ರಣ ನಡೆದಿರುವುದು ಇದೂ ಸಂತೋಷದ ಸಂಗತಿಯೆ

ಇನ್ನು ಉಳಿದ ಆರು ಭಾಗಗಳನ್ನು ಮೂರು ಮೂರು ತಿಂಗಳಿಗೆ ಒಂದರಂತೆ-ಕೊಡುವ ನಿಶ್ಚಯ ಮಾಡಲಾಗಿದೆ ವಾಚಕರಿಂದ ಈ ವರೆಗೆ ದೊರೆತಂತೆ ಸಹಾನುಭೂತಿಯು ದೊರೆತರೆ ಒಂದೇ ವರ್ಷದಲ್ಲಿ ಆರು ಭಾಗಗಳನ್ನು ವಾಚಕರಿಗೆ ಸಲ್ಲಿಸಬೇಕೆಂದು ನಮ್ಮ ಆಸೆ

ಈ ದ್ವಿತೀಯ ಭಾಗವನ್ನು ರವೀಂದ್ರ ಮುದ್ರಣಾಲಯದವರು ಅಂದವಾಗಿ ಮುದ್ರಿಸಿಕೊಟ್ಟುದಕ್ಕಾಗಿ, ಶ್ರೀ ಎಚ್ ಬಿ. ನವಲೂರ, ಮನೋರಂಜನ ಪ್ರಕಾಶನ ಸಮಿತಿ, ಅವರು ಪ್ರಕಾಶಿತಗೊಳಿಸಿದುದಕ್ಕಾಗಿ, ಇವರೆಲ್ಲರೂ ನನ್ನ ಅಭಿನಂದನೆಗೆ ಪಾತ್ರರು

-ಗುರುನಾಥ ಜೋಶಿ.

# ಪ್ರಸ್ತಾವನೆ

ಬಹಳ ದಿನಗಳಾದ ಬಳಿಕ ನಡೆದ ಸಂಗತಿಗಳ [illegible] ಆಗ ಜೀವಿಯ ನೆನಪು ಸಹ ಮಸಕಾಗುತ್ತ ನಡೆದಿದ್ದಿತು [illegible] ನೋಡಿದ ಕೂಡಲೆ ಅಷ್ಟೆ ಏಕೆ, ನೆನಪು ಬಂದೊಡನೆಯು [illegible] ಪಾಂಡಿತ್ಯದ ಉಚ್ಛೃಂಖಲತೆಯಿಂದ ತನ್ನಷ್ಟಕ್ಕೆ ತಾನೆ ತಲೆಬಾಗಿಸುತ್ತಿದ್ದಿತು. ಅಂಥ ಜೀಜೀಯ ನೆನಪು ಆಗಿರಲಿಲ್ಲ. ಈ ಕತೆಯು ಆಗಿನ ಕಾಲದ್ದು. ಒರ್ವ ಅರಸು ಮಗನಿಂದ ಆಮಂತ್ರಿಸಲ್ಪಟ್ಟು ನಾನು ಅವನ ಬೇಟೆಯ ದಳದಲ್ಲಿ ಸೇರಿಕೊಂಡಿದ್ದೆ. ಅವನ ಕೂಡ ನಾನೂ ಬಹಳ ಕಾಲ ಸ್ಕೂಲಿನಲ್ಲಿ ಓದಿದ್ದಿನೊ ಅಥವಾ ಯಾರಿಗೂ ತಿಳಿಯದಂತೆ - ಅವನ ಗಣಿತದ ಪ್ರಶ್ನೆಗಳನ್ನು ಬಿಡಿಸಿಕೊಟ್ಟಿದ್ದೆನೆ ಎಂಬೆನೊ ಚೆನ್ನಾಗಿ ನೆನಪಿಲ್ಲ; ಆದರೆ ಅವನು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದ. ಬಳಿಕ ನಾವಿಬ್ಬರೂ ಎಂಟ್ರನ್ಸ್ ಕ್ಲಾಸಿನಲ್ಲಿ ಬೇರೆಬೇರೆಯಾದೆವು. ಅರಸುಮಕ್ಕಳ ಸ್ಮರಣ-ಶಕ್ತಿಯು ಕಡಮೆ ಇರುವುದೆಂದು ನಾನು ತಿಳಿದುಕೊಂಡಿರುವೆ; ಆದರೆ ಅವನು ನನ್ನನ್ನು ನೆನಸಿಕೊಂಡು ನನ್ನೊಡನೆ ಪತ್ರ-ವ್ಯವಹಾರವನ್ನು ಮಾಡಬಲ್ಲ

ಎಂಬುದನ್ನು ಮಾತ್ರ ನಾನು ಯೋಚಿಸಿರಲಿಲ್ಲ ಒಮ್ಮೆ ಅವನೊಡನೆ ಅಕಸ್ಮಾತ್ ಭೆಟ್ಟಿಯಾಯಿತು; ಆಗ ಅವನು ಪ್ರಾಯಕ್ಕೆ ಬಂದಿದ್ದ. ಸಂಚಿತ ಅಪಾರ ಸಂಪತ್ತು ಅವನ ಕೈಸೇರಿತು. ಒಳಿಕ..... ಇತ್ಯಾದಿ ಇತ್ಯಾದಿ. ಅರಸನ ಕಿವಿಗೂ ಮಾತು ಹೋಗಿದ್ದಿತು—ನಾನು ಗುರಿಹೊಡೆಯುವುದರಲ್ಲಿ ಅತ್ಯಂತ ನಿಪುಣನು, ಅಲ್ಲದೆ ಇನ್ನೂ ಎಷ್ಟೋ ಗುಣಗಳಿಂದ ಪರಿಪೂರ್ಣನು ಆಗಿರುವೆ, ಅರಸನ ಅಂತರಂಗದ ಮಿತ್ರನಾಗಲಿಕ್ಕೆ ನಾನು ಸರ್ವಥಾ ಯೋಗ್ಯನು ಎಂದು. ಈ ಮಾತು ಅತಿರಂಜಿತವಾಗಿ ಹೋಗಿದ್ದಿತು ನನ್ನವರು, ಬಂಧುಬಳಗದವರು ತಮ್ಮ ಮನುಷ್ಯನ ಪ್ರಶಂಸೆಯನ್ನು ಹೆಚ್ಚಾಗಿಯೆ ಮಾಡುವರು, ಆದರೆ ನನ್ನಲ್ಲಿ ಅಷ್ಟು ಚಿಕ್ಕ ವಯಸ್ಸಿನಲ್ಲಿ ಅವರು ವರ್ಣಿಸಿದಷ್ಟು ಪ್ರಮಾಣದಲ್ಲಿ ಗುಣಗಳು ತುಂಬಿದ್ದವು ಎಂದು ಜಂಭಕೊಚ್ಚಿಕೊಳ್ಳುವುದು ನನಗೆ ಶೋಭಿಸುವುದಿಲ್ಲ ಸ್ವಲ್ಪ ವಿನಯವಿರುವುದು ಒಳ್ಳೆಯದು. ವಿದ್ಯೆಗೆ ವಿನಯವಿದ್ದರೇ ಶೋಭೆ ಇರಲಿ ಈ ಮಾತು. ಅರಸರಿಂದ ಬಂದ ಆಮಂತ್ರಣವನ್ನು ಅಮಾನ್ಯ ಮಾಡಬಾರದೆಂದು ಶಾಸ್ತ್ರಕಾರರು ಹೇಳಿರುವರು. ನಾನು ಹಿಂದೂ ಹುಡುಗ, ಶಾಸ್ತ್ರಕ್ಕೆ ಹೇಗೆ ಅಪಮಾನ ಮಾಡಲಿ? ಅರಸರ ಕರೆಯನ್ನು ಮನ್ನಿಸಿ ಹೊರಟುಹೋದೆ ಸ್ಟೇಶನಿನಿಂದ ಹತ್ತುಹನ್ನೆರಡು ಹರದಾರಿ ಆನೆಯ ಮೇಲೆ ಕುಳಿತು ಹೋದೆ. ನೋಡಿದೆ, ನಿಸ್ಸಂದೇಹವಾಗಿಯೂ ರಾಜ-ಪುತ್ರನು ಪ್ರಾರ್ಥನೀಯನೆಂದುದರ ಸರ್ವ ಲಕ್ಷಣಗಳೂ ಅಲ್ಲಿದ್ದುವು! ಐದು ತಂಬೂಗಳಿದ್ದುವು ಒಂದು ಅವರಿಗಾಗಿ, ಒಂದು ಮಿತ್ರರಿಗಾಗಿ, ಒಂದು ಆಳುಮಕ್ಕಳಿಗಾಗಿ, ಒಂದು ಅಡಿಗೆಗಾಗಿ. ಇವುಗಳಲ್ಲದೆ ಸ್ವಲ್ಪ ದೂರದಲ್ಲಿ ಇನ್ನೊಂದು ತಂಬೂ ಇದ್ದಿತು. ಆದರಲ್ಲಿಯೆ ಎರಡು ಭಾಗಗಳನ್ನು ಮಾಡಿಕೊಂಡು ಇಬ್ಬರು ವೇಶ್ಯೆಯರು ತಮ್ಮ ಹಿಮ್ಮೇಳದವರೊಡನೆ ಬೀಡು ಬಿಟ್ಟಿದ್ದರು.

ಹೊತ್ತು ಮುಳುಗಿದೆ. ಅರಸುಮಗನ ಸ್ವಂತ ತಂಬೂದಲ್ಲಿ ಬಹಳ ಹೊತ್ತಿನಿಂದ ಸಂಗೀತಕಚೇರಿಯು ನಡೆದುದನ್ನು ಹೋದಕೂಡಲೆ ಕಂಡೆ. ಅರಸುಮಗನು ಅತ್ಯಂತ ಆದರದಿಂದ ನನ್ನನ್ನು ಸ್ವಾಗತಿಸಿದನು. ಅತಿ ಆದರವನ್ನು ವ್ಯಕ್ತಮಾಡುವದಕ್ಕಾಗಿ ಎದ್ದು ನಿಲ್ಲಹೋದವನು ದಿಂಬಿಗೆ

ಒರಗಿ ಕುಳಿತನು! ಗೆಳೆಯರು 'ಬನ್ನಿ, ಬನ್ನಿ, ಬನ್ನಿ' ಎಂದು ವಿಹ್ವಲ ದನಿಯಿಂದ ಬರಮಾಡಿಕೊಂಡರು ನಾನು ಅವರಿಗೆ ಪೂರ್ಣ ಅಪರಿಚಿತ. ಆದರೆ ಅದೆಲ್ಲವೂ ಆಗ ಆಗಬೇಕಾದುದೇ; ಅಪರಿಚಯದಿಂದ ನಿಲ್ಲುವಂತ ಹುದಲ್ಲ.

ಈ ಬಾಯೀಗೆ* ಹೆಚ್ಚು ಹಣಕೊಡುವುದನ್ನು ಗೊತ್ತುಪಡಿಸಿ ಕೊಂಡು ಎರಡು ವಾರಗಳ ಮಟ್ಟಿಗೆ ಪಾಟಣಾದಿಂದ ಕರೆಯಿಸಿಕೊಳ್ಳಲಾ ಗಿದೆ ಈಕೆಯನ್ನು ತರುವಾಗ ತೋರಿಸಿದ ಅರಸುಕುಮಾರರ ವಿವೇಚನೇ ಚಾಣಾಕ್ಷತೆ ವರ್ಣನೀಯವಾಗಿದೆ. ಬಾಯೀಯ ರೂಪವೂ ನಯನ ಮನೋಹರ, ಕಂಠ ಮೋಹಕ, ಮಧುರ ಮತ್ತು ಇಂಪು

ನಾನು ತಂಬೂರದಲ್ಲಿ ಕಾಲಿಡುತ್ತಲೇ ಹಾಡುಗಾರಿಕೆಯು ನಿಂತಿತು. ಬಳಿಕ ಸಮಯೋಚಿತ ವಾರ್ತಾಲಾಪ ಮತ್ತು ಶಿಷ್ಟಾಚಾರಗಳಲ್ಲಿ ಸ್ವಲ್ಪ ಹೊತ್ತು ಕಳೆಯಿತು. ಬಳಿಕ ಅರಸು ಮಗನು ಹಾಡನ್ನು ಪ್ರಾರಂಭಿಸಲು ನನಗೆ ಆಜ್ಞಾಪಿಸಿದನು ರಾಜಾಜ್ಞೆಯನ್ನು ಹೊಂದಿ ನಾನು ಅತ್ಯಂತ ಕುಂಠಿತನಾದೆ, ಆದರೆ ಕೊಂಚ-ಕಾಲದಲ್ಲಿಯೆ ಆ ಸಭೆಯಲ್ಲಿ ನಾನೊಬ್ಬನೇ ಸ್ವಲ್ಪ ಸಂಗೀತ ತಿಳಿದವನೆಂದೂ ಉಳಿದವರೆಲ್ಲರೂ ಔರಂಗಜೇಬನ ಒಕ್ಕಲು ಎಂಬುದನ್ನೂ ಅರಿತುಕೊಂಡೆ

ಬಾಯೀಗೆ ಅತ್ಯಂತ ಆನಂದವಾಯಿತು; ಅರಳಿದಳು ದುಡ್ಡಿನಿಂದ ಬೇಕಾದಷ್ಟು ಕೆಲಸಗಳನ್ನು ಮಾಡಿಸಬಹುದೆಂಬುದನ್ನು ನಾನು ಬಲ್ಲೆ; ಆದರೆ ಈ ಮೂರ್ಖಮಂಡಳಿಯ ಮಧ್ಯದಲ್ಲಿ ವೀಣೆ ನುಡಿಸುವುದು ವಾಸ್ತ-ವಿಕವಾಗಿಯೂ ಆಕೆಗೆ ಕಠಿನವೆನಿಸುತ್ತಿದ್ದಿತು ಈ ಬಾರಿ ಬಲ್ಲವನೊಬ್ಬನು ದೊರೆತುದರಿಂದ ಆಕೆಯು ಬದುಕಿಕೊಂಡಳು. ಬಳಿಕ ಬಹಳ ರಾತ್ರಿಯ ವರೆಗೆ ಕೇವಲ ನನಗಾಗಿಯೇ ಏನೊ, ಆಕೆಯು ತನ್ನ ಸಮಸ್ತ ವಿದ್ಯೆ, ಸಮಸ್ತ ಸೌಂದರ್ಯ ಮತ್ತು ದನಿಯ ಸಮಸ್ತ ಮಾಧುರ್ಯದಲ್ಲಿ ನಮ್ಮ ಸುತ್ತಲಿನ ಆ ಯಃಕಶ್ಚಿತ ಮಹೋನ್ಮತ್ತತೆಯನ್ನು ಮುಳುಗಿಸಿದಳು ಮತ್ತು ಕೊನೆಗೆ ಸುಮ್ಮಗಾದಳು.

---

* ಉತ್ತರ ಭಾರತೀಯರಲ್ಲಿ ಹೆಂಗುಸಿನ ಹೆಸರಿನ ಕೊನೆಯಲ್ಲಿ 'ಬಾಯೀ' ಇದ್ದರೆ ಆಕೆ ವೇಶ್ಯೆಯೆಂದು ತಿಳಿಯಬೇಕು, ಕೇವಲ 'ಬಾಯೀ' ಎಂದರೂ ವೇಶ್ಯೆ.

ಬಾಯೀ ಪಾಟಣಾ ನಿವಾಸಿ; ಹೆಸರು 'ಪ್ಯಾರೀ' ಆ ರಾತ್ರಿಯಲ್ಲಿ ಆಕೆಯು ತನ್ನ ಸರ್ವಶಕ್ತಿಯನ್ನು ಉಪಯೋಗಿಸಿ ಹಾಡಿದಂತೆ ಮೊದಲು ಎಲ್ಲಿಯೂ ಬಹುಶಃ ಹಾಡಿರಲಿಕ್ಕಿಲ್ಲ ನಾನು ಮುಗ್ಧನಾಗಿಬಿಟ್ಟಿದ್ದೆ. ಹಾಡು ನಿಲ್ಲುತ್ತಲೇ ನನ್ನ ಬಾಯಿಂದ ಇಷ್ಟೇ ಬಂದಿತು "ಬಹು ನೊಗಸು! ಇಂಪು!"

ಪ್ಯಾರಿಯು ಮುಖ ತಗ್ಗಿಸಿಕೊಂಡು ನಕ್ಕಳು ಬಳಿಕ ಎರಡೂ ಹಸ್ತಗಳನ್ನು ಜೋಡಿಸಿ ಹಣೆಗೆ ಹಚ್ಚಿ ನಮಸ್ಕರಿಸಿದಳು; ಸಲಾಮು ಮಾಡಲಿಲ್ಲ. ಆ ದಿನದ ಸಂಗೀತ ಕಚೇರಿಯು ಮುಗಿದಿತು.

ಆ ಸಂಗೀತ ಕಚೇರಿಯಲ್ಲಿ ಕೆಲವು ಜನ ದರ್ಶಕರು ಒರಗಿ ನಿದ್ರೆ ಮಾಡುತ್ತಿದ್ದರು ಕೆಲವರು ತೂಕಡಿಸುತ್ತಿದ್ದರು, ಕೆಲವರು ಸ್ಮೃತಿದಪ್ಪಿ ಬಿದ್ದಿದ್ದರು; ಬಾಯೀಯು ತನ್ನ ಸರಂಜಾಮುದೊಂದಿಗೆ ತನ್ನ ತಂಬೂ ಸೇರಲು ಹೊರಟಾಗ ನಾನು ಆನಂದಾತಿರೇಕದಿಂದ ಹಿಂದುಸ್ತಾನಿಯಲ್ಲಿ "ಬಾಯೀಜೀ, ಮೇರಾ ಬಡಾ ಸೌಭಾಗ್ಯ ಹೈ ಕಿ ರೋಜ ದೋ ಸಪ್ತಾಹ ತಕ್ ತುಮ್ಹಾರಾ ಗಾನಾ ಸುನನೇಕೊ ಮಿಲೇಗಾ" * ಎಂದು ನುಡಿದುಬಿಟ್ಟೆ ಬಾಯೀಜೀ ಮೊದಲು ಸ್ವಲ್ಪ ಬೆದರಿದಂತೆ ನಿಂತಳು ಮತ್ತು ಸ್ವಲ್ಪ ಸಮಯದ ನಂತರ ನನ್ನ ಸಮೀಪಕ್ಕೆ ಬಂದು, ತನ್ನ ಕೋಮಲ ಕಂಠದಿಂದ ಅಚ್ಚ ಬಂಗಲಾ ಭಾಷೆಯಲ್ಲಿ "ರೂಪಾಯಿ ತೆಗೆದುಕೊಂಡಿರುವೆನಾದ್ದರಿಂದ ನಾನು ಹಾಡಲೇಬೇಕಾಗುವುದು; ಆದರೆ ತಾವು ಈ ಎರಡು ವಾರಗಳ ವರೆಗೆ ಇಲ್ಲಿಯೇ ಇದ್ದುಕೊಂಡು ರಾಜಕುಮಾರರಿಗೆ ಮಂತ್ರಾಲೋಚನೆಯನ್ನು ಹೇಳುವಿರಾ? ತಾವು ಹೋಗಿರಿ, ನಾಳೆಯೇ ನಿಮ್ಮ ಮನೆಗೆ ಹೊರಟು ಹೋಗಿರಿ" ಎಂಬಾಶಯದ ಮಾತುಗಳನ್ನು ಆಡಿದಳು.

ಈ ಮಾತುಗಳನ್ನು ಕೇಳಿ ನಾನು ಗೊಂಬೆಯಂತೆ ಹತಬುದ್ಧಿಯವನಂತಾಗಿ ನಿಂತುಬಿಟ್ಟೆ 'ಏನೆಂದು ಉತ್ತರಕೊಡಲಿ?' ಎಂದು ನಾನು

---

* "ಬಾಯೀಜೀ, ಎರಡು ವಾರಗಳ ವರೆಗೆ ನಿಮ್ಮ ಹಾಡು ಕೇಳಲು ದೊರೆತುದು ನನ್ನ ಸೌಭಾಗ್ಯ"

ಯೋಚಿಸುತ್ತ ನಿಂತಿರುವಾಗಲೇ ಬಾಯೀಜೀಯು ತಂಬೂದಿಂದ ಹೊರಗೆ ಹೋಗಿಬಿಟ್ಟಿದ್ದಳು.

ಮರುದಿನ ಮುಂಜಾನೆ ಅರಸುಮಕ್ಕಳು ಗಲಭೆಯೆಬ್ಬಿಸಿ ಬೇಟೆಗೆ ಹೊರಟರು. ಮದ್ಯ ಮಾಂಸದ ಸಿದ್ಧತೆಯೂ ಚೆನ್ನಾಗಿಯೆ ಆಗಿದ್ದಿತು. ಜೊತೆಯಲ್ಲಿ ಬೇಟೆಗಾರ ಆಳುಮಕ್ಕಳೂ ಇದ್ದರು. ಹದಿನೈದು ಬಂದೂಕುಗಳು ಇದ್ದುವು; ಅವುಗಳಲ್ಲಿ ಆರು ರೈಫಲ್ಲುಗಳು. ಅರ್ಧಬತ್ತಿದ ನದಿಯ ಎರಡೂ ದಂಡೆಗಳು ಬೇಟೆಯ ಸ್ಥಾನ. ನದಿಯ ಈಚೆಯ ದಂಡೆಗೆ ಊರು ಇದ್ದಿತು, ಆಚೆಯ ದಂಡೆಗೆ ಉಸುಕಿನ ದಿನ್ನೆ, ಈಚೆಯ ದಂಡೆಯ ಮೇಲೆ ಹರದಾರಿಯವರೆಗೆ ಅನೇಕ ಎತ್ತರವಾದ ಮರಗಳಿದ್ದುವು, ಆಚೆಯ ದಂಡೆಯ ಮೇಲೆ ಅಲ್ಲಲ್ಲಿ ಉಸುಕಿನ ಮೇಲೆ ಕಂಟಿಗಳು ಬೆಳೆದಿದ್ದುವು. ಈ ಸ್ಥಾನದ ಮೇಲೆಯೆ ಹದಿನೈದು ಬಂದೂಕುಗಳನ್ನು ತೆಗೆದುಕೊಂಡು ಬೇಟೆಯಾಡುವುದಾಗಿದ್ದಿತು. ಈಚೆಯ ದಂಡೆಯ ಮೇಲೆ ಇದ್ದ ಗಿಡದ ಮೇಲೆ ಮಾರಿವಾಳ ಜಾತಿಯ ಒಂದು ಹಕ್ಕಿಯ ಜೋಡಿ ಕುಳಿತಿರುವುದು ಕಾಣಿಸಿತು; ಸ್ವಲ್ಪ ದೂರದಲ್ಲಿ ನದಿಯೊಳಗೆ ಚಕ್ರವಾಕಗಳು ಈಜುತ್ತಿರುವಂತೆಯೂ ಕಾಣಿಸಿತು.

ಯಾರು ಎತ್ತ ಹೋಗಬೇಕೆನ್ನುವುದನ್ನು ಉತ್ಸಾಹದಿಂದ ಚರ್ಚಿಸುತ್ತ ಎಲ್ಲರೂ ಎರಡೆರಡು ಬಟ್ಟಲು ಮದ್ಯವನ್ನೀಂಟಿ ಮನವನ್ನ ವೀರರೋಪಾದಿಯಲ್ಲಿ ಮಾಡಿಕೊಂಡಿದ್ದರು. ನಾನು ಬಂದೂಕನ್ನು ಕೆಳಗಿಟ್ಟೆನು. ಮೊದಲೇ ಬಾಯೀಜೀಯ ಮಾತಿನ ಪೆಟ್ಟನ್ನು ತಿಂದು ಮನಸ್ಸು ವ್ಯಗ್ರವಾಗಿದ್ದಿತು, ಈಗ ಬೇಟೆಯ ಸ್ಥಾನವನ್ನು ನೋಡಿ ಮೈಯೆಲ್ಲ ಉರಿಯತೊಡಗಿತು.

ಅರಸುಮಗನು "ಏಕೊ ಶ್ರೀಕಾಂತ, ನೀನು ಬಹಳ ಸುಮ್ಮಗಿರುವೆ? ಇದೇನು! ಬಂದೂಕನ್ನೇ ಕೆಳಗಿಟ್ಟುಬಿಟ್ಟೆಯಲ್ಲ?" ಎಂದು ಕೇಳಿದ.

"ನಾನು ಪಕ್ಷಿಗಳನ್ನು ಕೊಲ್ಲುವುದಿಲ್ಲ."

"ಇದೇನು? ಏಕೆ, ಏಕೊ?"

"ಪರಿನೀಸ್ ಒಡೆದಾಗಿನಿಂದ ನಾನು ಚರಿಯ ಬಂದೂಕನ್ನು ಹಾರಿಸಿಲ್ಲ. ಅದನ್ನು ಮರೆತು ಬಿಟ್ಟಿರುವೆ."

ಅರಸುಮಗನು ಬಿದ್ದು ಬಿದ್ದು ನಕ್ಕನು. ಆದರೆ ನಗುವಿಗೂ ನನ್ನ ಮಾತಿಗೂ ಯಾವ ಸಂಭಂಧವಿತ್ತೋ ಏನೋ, ನಾನು ನಗುವಂತಹ ಯಾವ ಮಾತನ್ನು ಆಡಿದೆನೋ? ಅಂತೂ ಅರಸುಮಗನು ನಕ್ಕುದು ನಿಜ

ಸರಜೂಗೆ ಮಾತ್ರ ಕೋಪಬಂದಿತು. ಅವನು ಈ ದಳದ ಮುಖ್ಯ ಬೇಟೆಗಾರ ಮತ್ತು ಅರಸುಮಗನ ಪ್ರಿಯ ಪಾರ್ಶ್ವಚರ ಗುರಿಹೊಡೆಯುವುದರಲ್ಲಿ ಅತ್ಯಂತ ನಿಪುಣನೆಂಬುದನ್ನು ನಾನು ಬಂದೊಡನೆಯೇ ಕೇಳಿದ್ದೆ ಅವನು ಸಿಟ್ಟಿನಿಂದ "ಹಕ್ಕಿಗಳ ಬೇಟೆಯಾಡುವುದು ನಾಚಿಕೆಗೇಡಿತನದ್ದೇನೆಂದು ತಿಳಿದಿರುವಿರೇನು?" ಎಂದು ಕೇಳಿದ

ನನ್ನ ಮನಸ್ಸೂ ನನ್ನ ವಶದಲ್ಲಿರಲಿಲ್ಲ. ಆದುದರಿಂದಲೇ ಉತ್ತರ ಇತ್ತೆ "ನನಗಾಗಿ ಮಾತ್ರ, ಇತರರಿಗಲ್ಲ! ಒಳ್ಳೇದು, ದೊರೆಕುಮಾರರೇ, ನನ್ನ ಮೈಯಲ್ಲಿ ಚೆನ್ನಾಗಿಲ್ಲ" ಎಂದು ಹೇಳಿ ನನ್ನ ತಂಬೂಕ್ಕ ತಿರುಗಿ ಬಂದೆ. ಇದನ್ನು ಕಂಡು ಯಾರು ಮೂಗು ಮುರಿದರು, ಬಾಯನ್ನು ಸೊಟ್ಟಮಾಡಿದರು, ಕಣ್ಣನ್ನು ಕಿಸಿದರು, ಹಲ್ಲುಬಿರಿದರು ಮುಂತಾದುದನ್ನು ನಾನು ಕಣ್ಣೆತ್ತಿ ಕೂಡ ನೋಡಲಿಲ್ಲ

ಒಂದು ಕಪ್ಪು ಚಹಾ ಸಿದ್ಧಮಾಡಿ ತರಲು ಹೇಳಿ ನಾನು ತಂಬೂದಲ್ಲಿ ಕೆಳಗೆ ಜಮಖಾನೆಯ ಮೇಲೆ ಅಂಗಾತ ಮಲಗಿಕೊಂಡು ಸಿಗರೇಟು ಸೇದುತ್ತಿದ್ದೆ, ಇಷ್ಟರಲ್ಲಿ ಬೈರಾ ಬಂದು ವಿನಯದಿಂದ "ಬಾಯೀಜೀ ಅವರು ತಮ್ಮನ್ನು ಕಾಣ ಬಯಸಿರುವರು" ಎಂದು ಹೇಳಿದ. ಸರಿಯಾಗಿ ನಾನೂ ಇದನ್ನೇ ಯೋಚಿಸುತ್ತಿದ್ದೆ. ಕೇಳಿದೆ "ಏಕೆ ಕಾಣ ಬಯಸಿರುವಳು?" ಎಂದು

"ನನಗೆ ತಿಳಿಯದು"

"ನೀನಾರು?"

"ನಾನು ಬಾಯೀಜೀಯ ಅಡಿಗೆಯವ."

"ಬಂಗಾಲಿಯೇನು?"

"ಹೌದರಿ, ಜಾತಿಯಿಂದ ಕೆಲಸಿಗ. ನನ್ನ ಹೆಸರು ರತನ"

"ಬಾಯೀಜೀ ಹಿಂದೂ ಏನು?"

ರತನ ನಕ್ಕು "ಇಲ್ಲದಿದ್ದರೆ ನಾನು ಹೇಗೆ ಇರುತ್ತಿದ್ದೆ ಬಾಬೂಜೀ?" ಎಂದು ನುಡಿದ.

ನನ್ನನ್ನು ಸಂಗಡ ಕರೆದುಕೊಂಡು ಹೋಗಿ ಆತ ತಂಬೂದ ಬಾಗಿಲು ತೋರಿಸಿ ಹೊರಟು ಹೋದ. ಪರದೆಯನ್ನೆತ್ತಿ ಒಳಗೆ ನೋಡಲಾಗಿ ಬಾಯೀಜೀಯು ಒಬ್ಬಳೇ ಕುಳಿತುಕೊಂಡು ದಾರೀ ನೋಡುತ್ತಿರುವ ಳೆಂಬಂತೆ ತೋರಿತು ನಿನ್ನೆಯ ದಿನ ಆಕೆಯ ಉಡುಪಿನ ರೀತಿಯ ಕಾರಣದಿಂದ ಸರಿಯಾಗಿ ಗುರುತಿಸದಾಗಿದ್ದೆ; ಆದರೆ ಈ ದಿನ ನೋಡು ತ್ತಲೇ ಗುರುತಿಸಿದೆ. ಬಾಯೀಜೀ ಯಾರೇ ಇದ್ದರೂ ಬಂಗಾಲಿಯ ಮಗಳು ಇರುವಳು. ಬಾಯೀಜೀ ಸಾಧಾರಣವಾದ ಬಟ್ಟೆಯನ್ನು ಧರಿಸಿ ಕೊಂಡು ಬೆಲೆಯುಳ್ಳ ಕಂಬಳಿಯ ಮೇಲೆ ಕುಳಿದ್ದಳು. ಒದ್ದೆಯಾದ ಕೂದಲು ಬೆನ್ನಮೇಲೆ ಹರವಿದ್ದುವು ಹತ್ತಿರದಲ್ಲಿ ತಾಂಬೂಲ ತಟ್ಟೆಯು ಇದ್ದಿತು; ಎದುರಿನಲ್ಲಿ ಗುಡಗುಡಿ. ನನ್ನನ್ನು ನೋಡಿ ಎದ್ದು ನಿಂತಳು ಮತ್ತು ಎದುರಿಗಿನ ಆಸನವನ್ನು ತೋರಿಸುತ್ತ "ಕುಳಿತುಕೊಳ್ಳಿರಿ. ತಮ್ಮ ಎದುರಿನಲಿ ಇನ್ನು ತಂಬಾಕು ಸೇವಿಸುವುದಿಲ್ಲ — ಓ ರತನ್ ಗುಡಗುಡಿ ತೆಗೆದುಕೊಂಡು ಹೋಗು ಇದೇನು? ನಿಂತಿರುವಿರಲ್ಲ, ಕುಳಿತುಕೊಳ್ಳಿರಿ" ಎಂದಳು.

ರತನ ಬಂದು ಗುಡಗುಡಿಯನ್ನು ತೆಗೆದುಕೊಂಡು ಹೋದ. ಬಾಯೀಜೀ "ತಾವು ತಂಬಾಕು ಸೇವಿಸುವಿರೆಂಬುದನ್ನು ನಾನು ಬಲ್ಲೆ; ಆದರೆ ನಾನು ಹೇಗೆ ಕೊಡಲಿ? ಅನ್ಯತ್ರ ತಾವು ಹೇಗೆ ಬೇಕಾದರೂ ಮಾಡಿ, ಆದರೆ ನಾನು ಮಾತ್ರ ನನ್ನ ಗುಡಗುಡಿಯನ್ನು ತಿಳಿದೂ ತಿಳಿದೂ ಕೊಡಲಾರೆ ಒಳ್ಳೇದು ಚುರೂಟು ತಂಡುಕೊಡುವೆ. ಅರೇ ಓ ...." ನುಡಿಯುತ್ತಿರುವಾಗಲೇ ನಾನು ಬಾಯಿ ಹಾಕಿ "ತಡೆ, ನನ್ನ ಜೇಬಿನಲ್ಲಿ ಚುರುಟು ಇದೆ; ತರಿಸುವದು ಅಗತ್ಯವಿಲ್ಲ" ಎಂದೆ.

"ಸರಿ, ಸ್ವಲ್ಪ ಚೆನ್ನಾಗಿ ಹಾಯಾಗಿ ಕುಳಿತುಕೊಳ್ಳಿರಿ. ಬಹಳ ಮಾತುಗಳನ್ನಾಡುವುದಿದೆ, ದೇವರು ಯಾವಾಗ ಯಾರನ್ನು ಭೇಟಿ ಮಾಡಿ-ಸುವನೆಂಬುದನ್ನು ಯಾರೂ ಹೇಳಲಾರರು. ಇದು ಸ್ವಪ್ನಕ್ಕಿಂತಲೂ ಅಗೋಚರವಾದುದು ಬೇಟೆಗೆ ಹೋದವರು ಒಮ್ಮೆಲೇ ಏಕೆ ಹಿಂತಿರು ಗಿದಿರಿ?"

"ಹೋಗಲು ಮನಸ್ಸಾಗಲಿಲ್ಲ"

"ಹೌದು, ಹಾಗೆಯೇ ಇದೆ. ಎಷ್ಟು ನಿಷ್ಠುರ ಈ ಪುರುಷರ ಜಾತಿ! ನಿರರ್ಥಕವಾಗಿ ಪ್ರಾಣಿಹತ್ಯೆಯನ್ನು ಮಾಡುವುದರಲ್ಲಿ ಇವರಿಗೇನು ಆನಂದವೋ? ತಂದೆಯವರು ಚೆನ್ನಾಗಿರುವರೇ?"

"ತಂದೆಯವರು ಸ್ವರ್ಗಸ್ಥರಾದರು."

"ಹಾ! ಇದೇನು? ತಾಯಿ?"

"ಆಕೆಯು ಅವರಿಗಿಂತ ಮೊದಲೇ ಹೊರಟು ಹೋಗಿದ್ದಳು—"

"ಓಹೋ! ಅದಕ್ಕೆಯೇ!" ಎಂದು ಬಾಯಿಜೀಯು ಒಂದು ನೀಳವಾದ ಉಸಿರ್ಗರೆದು ನನ್ನನ್ನು ನೋಡತೊಡಗಿದಳು. ಒಮ್ಮೆ ಆಕೆಯ ಕಣ್ಣುಗಳು ಹನಿದುಂಬಿದಂತೆ ಕಂಡವು. ಅದು ನನ್ನ ನೋಟದ ತಪ್ಪಿರಬಹುದು. ಕ್ಷಣಮಾತ್ರದ ನಂತರ ಆಕೆಯು ಮಾತನಾಡಿದಾಗ ತಪ್ಪಿಗೆ ಎಡೆಯಿರಲಿಲ್ಲ. ಆ ನಾರಿಯ ಚಂಚಲ, ಲಘುಪರಿಹಾಸಯುಕ್ತ ಕಂಠಸ್ವರವು ನಿಜವಾಗಿಯೂ ನೀರೊದೆದಿದ್ದಿತು. ಅವಳು "ಹಾಗಾದರೆ ನಿಮ್ಮನ್ನು ನೋಡಿಕೊಳ್ಳುವವರು ಈಗ ಯಾರೂ ಇಲ್ಲವೆಂದಾಯಿತು. ಅತ್ತೆಯವರ ಬಳಿಯಲ್ಲಿಯೇ ಇರುವಿರಲ್ಲವೆ? ಇಲ್ಲವಿದ್ದರೆ ಎಲ್ಲಿರುವಿರಿ? ಮದುವೆಯಾಗಿಲ್ಲವೆಂಬುದನ್ನು ನಾನು ನೋಡುತ್ತಲೇ ಇರುವೆ, ಓದು ಬರೆಹ ಮುಂದುವರಿದಿದೆಯೊ ಅಥವಾ ಅದರ ಕೂಡ ಮುಗಿದೇ ಹೋಯಿತೋ?" ಎಂದು ನುಡಿದಳು.

ಇದುವರೆಗೆ ನಾನು ಆಕೆಯ ಕುತೂಹಲಪೂರ್ಣ ಪ್ರಶ್ನಮಾಲೆಯನ್ನು ಸಹಿಸಿಕೊಂಡಿದ್ದೆ. ಆದರೆ ಅದೇಕೋ ನನಗೆ ಕೊನೆಯ ಮಾತು ಸಹ್ಯವಾಗಲಿಲ್ಲ. ನಾನು ಸ್ವಲ್ಪ ಒಣದನಿಯಿಂದ "ಒಳ್ಳೇದು, ನೀನಾರು? ನಿನ್ನನ್ನು ಜೀವನದಲ್ಲಿ ನಾನು ಎಲ್ಲಿಯಾದರೂ ನೋಡಿದುದು ನೆನಪಿಲ್ಲ, ನನ್ನ ಸಂಬಂಧವಾಗಿ ಇಷ್ಟು ಏಕೆ ತಿಳಿದುಕೊಳ್ಳಬಯಸುತ್ತಿರುವಿ? ತಿಳಿದುಕೊಳ್ಳುವುದರಿಂದ ನಿನಗೆ ಲಾಭವಾದರೂ ಏನು?" ಎಂದು ಕೇಳಿದೆ.

ಬಾಯೀಜೀಗೆ ಕೋಪ ಬರಲಿಲ್ಲ. ನಸುನಕ್ಕು "ಲಾಭಹಾನಿಯಷ್ಟೆ ಈ ಪ್ರಪಂಚದಲ್ಲಿ ಇರುವುದು? ಮಾಯಾ, ಮಮತಾ, ಪ್ರೀತಿ-ಸ್ನೇಹ ಎಂಬುದೇನೂ ಇಲ್ಲವೆ? ನನ್ನ ಹೆಸರು ಪ್ಯಾರೀ. ಆದರೆ ನನ್ನ ಮುಖವನ್ನು ನೋಡಿಯೂ ನನ್ನನ್ನು ಗುರುತಿಸದೇ ಹೋದಮೇಲೆ ನನ್ನ

ಬಾಲ್ಯದ ಹೆಸರನ್ನು ಹೇಳಿದ ಬಳಿಕಾದರೂ ಹೇಗೆ ಗುರ್ತಿಸಬಲ್ಲಿರಿ? ಮೇಲಾಗಿ ನಾನು ನಿಮ್ಮ ಆ ಊರಿನ ಹುಡುಗಿಯೂ ಇರುವುದಿಲ್ಲವಲ್ಲ" ಎಂದಳು.

"ಒಳ್ಳೇದು ನಿನ್ನ ಮನೆಯೆಲ್ಲಿರುವುದು?"

"ಇಲ್ಲ, ಅದನ್ನು ನಾನು ಹೇಳುವುದಿಲ್ಲ."

"ಹಾಗಾದರೆ ನಿನ್ನ ತಂದೆಯವರ ಹೆಸರನ್ನು ಹೇಳು"

ಬಾಯೀಜೀ ನಾಲಿಗೆಯನ್ನು ಕಚ್ಚಿ "ಅವರು ಸ್ವರ್ಗಸ್ಥರಾಗಿರುವರು.—ರಾಮ, ರಾಮ, ಅವರ ಹೆಸರನ್ನು ಈ ಬಾಯಿಂದ ತೆಗೆದುಕೊಳ್ಳಬಲ್ಲೆನೆ?" ಎಂದಳು.

ನಾನು ಅಧೀರನಾದೆ. "ತೆಗೆದುಕೊಳ್ಳಲಾರೆಯಾದರೆ ನನ್ನನ್ನು ಗುರುತಿಸಿದುದಾದರೂ ಹೇಗೆ? ಇದನ್ನು ಹೇಳುವದರಲ್ಲಿ ಏನೂ ದೋಷವೂ ಇಲ್ಲ" ಎಂದು ನಾನು ನುಡಿದೆ.

ಪ್ಯಾರಿಯು ನನ್ನ ಭಾವವನ್ನು ಅರಿತು ನಸುನಕ್ಕಳು. "ದೋಷವೇನೂ ಇಲ್ಲ. ಆದರೆ ನೀವು ವಿಶ್ವಾಸವಿಡುವಿರಾ?" ಎಂದು ಕೇಳಿದಳು.

"ಹೇಳಿ ನೋಡು"

"ನಿಮ್ಮನ್ನು ಗುರುತಿಸಿದ್ದೆ ರಾಯರೆ, ದುರ್ಬುದ್ಧಿಯು ಹೊಡೆತದಿಂದ—ಹೇಗೆ? ನೀವು ನನ್ನ ನಯನಗಳಿಂದ ಹರಿಯಿಸಿದಷ್ಟು ನೀರನ್ನು ಸೌಭಾಗ್ಯದಿಂದ ಸೂರ್ಯದೇವನು ಒಣಗಿಸಿಬಿಟ್ಟಿರುವನು. ಇಲ್ಲದೆ ಹೋಗಿದ್ದರೆ, ಆ ಕಂಬನಿಗಳಿಂದ ಒಂದು ಕೊಳ್ಳವೇ ತುಂಬಿ ಹೋಗಬಹುದಾಗಿದ್ದಿತು. ಈ ಮಾತಿನ ಮೇಲೆ ನೀವು ವಿಶ್ವಾಸವಿಡುವಿರಾ? ಎಂದು ಕೇಳುವೆ."

ನಿಜವಾಗಿಯೂ ನಾನು ವಿಶ್ವಾಸವಿಡದಾದೆ. ಆದರೆ ಇದು ನನ್ನ ತಪ್ಪು. ಆಕೆಯು ಪ್ರತಿಯೊಂದು ಮಾತನ್ನೂ ವ್ಯಂಗ್ಯವಾಗಿ ಮಾತನಾಡಿ ಮನದಲ್ಲೇ ನಗಲು ಬರುವಂತೆ ಪ್ಯಾರಿಯ ತುಟಿಗಳ ಮಾಟವಿರುವುದೆಂಬುದು ಆಗ ನನ್ನ ಗಮನಕ್ಕೆ ಬರಲಿಲ್ಲ. ನಾನು ಸುಮ್ಮನಿದ್ದೆ. ಅವಳೂ ಸ್ವಲ್ಪ ಹೊತ್ತು ಸುಮ್ಮನಿದ್ದು ಈ ಬಾರಿ ನಿಜವಾಗಿಯೂ ನಕ್ಕುಬಿಟ್ಟಳು. ಆದರೆ ಇಷ್ಟೊತ್ತಿಗೆ ಆಕೆಯು ತನ್ನ ಲಜ್ಜಿತ ಅವಸ್ಥೆಯನ್ನು ಅರಿತುಕೊಂಡು

ತನ್ನನ್ನು ಸಂಬಾಳಿಸಿಕೊಂಡಳೋ ಏನೋ ಎಂದೆನಿಸಿತು. ಆಕೆಯು ನಕ್ಕು "ಇಲ್ಲ ರಾಯರೆ, ನಾನು ನಿಮ್ಮನ್ನು ಎಷ್ಟು ಸಭ್ಯ-ಭೋಳೆ ಎಂದು ತಿಳಿದುಕೊಂಡಿದ್ದೆನೋ ಅಷ್ಟು ನೀವಿಲ್ಲ. ನಾನು ಹೇಳುವ ಈ ರೀತಿಯನ್ನು ನೀವು ಸರಿಯಾಗಿ ತಿಳಿದುಕೊಂಡಿರುವಿರಿ. ಆದರೆ, ನಿಮಗಿಂತ ಹೆಚ್ಚು ಬುದ್ಧಿವಂತರಿದ್ದವರೂ ಈ ನಾತಿನ ಮೇಲೆ ವಿಶ್ವಾಸ ವಿಡರು ಎಂಬುದನ್ನು ನಾನು ಹೇಳುವೆ ನೀವು ಹೆಚ್ಚು ಬುದ್ಧಿವಂತರಾಗಿದ್ದರೆ ಈ ಸಲಹೆಗಾರ—ಉದ್ಯೋಗವನ್ನು ಏತಕ್ಕೋಸ್ಕರ ಕೈಕೊಂಡಿರುವಿರಿ? ಈ ಉದ್ಯೋಗ—ನೌಕರಿ ನಿಮ್ಮಂತಹವರಿಂದ ಆಗುವುದಿಲ್ಲ. ಹೋಗಿರಿ, ಇಲ್ಲಿಂದ ಬೇಗ ಜಾರಿಕೊಂಡು ಹೋಗಿರಿ!" ಎಂದಳು.

ಸಿಟ್ಟಿನಿಂದ ನನ್ನ ಸರ್ವಾಂಗವು ಕಿಡಿಕಿಡಿಯಾಯಿತು. ಆದರೆ ನಾನದನ್ನು ಹೊರತೋರಗೊಡಲಿಲ್ಲ ಸಹಜವಾಗಿ "ನೌಕರಿಯು ಎಷ್ಟು ದಿನ ಇರುವುದೋ ಅಷ್ಟೇ ದಿನ ಒಳಿತಾದುದು. ಕುಳಿತುಕೊಂಡಿರುವುದಕ್ಕಿಂತ ನಿರುದ್ಯೋಗಿತನವು ಒಳಿತಾದುದು— ತಿಳಿಯಿತೇ? ಒಳ್ಳೇದು, ಇನ್ನು ನಾನು ಹೊರಡುವೆ ಹೊರಗಿನವರು ಮತ್ತೇನಾದರೂ ತಿಳಿದುಕೊಂಡಾರು" ಎಂದೆ.

"ತಿಳಿದುಕೊಂಡರೆ ಇದು ನಿಮಗೆ ಸೌಭಾಗ್ಯದ ಮಾತು ರಾಯರೆ! ಇದು ದುಃಖದ ಮಾತೇನು ರಾಯರೆ?"

ಉತ್ತರವೀಯದೆ ನಾನು ಬಾಗಿಲ ಬಳಿಯವರೆಗೆ ಬಂದು ನಿಂತಾಗ ಆಕೆಯು ನಗುವಿನ ಕಾರಂಜಿಯನ್ನು ಪುಟಿಸಿ "ಆದರೆ ರಾಯರೆ, ಆ ನನ್ನ ಕಂಬನಿಗಳ ಮಾತನ್ನು ಮರೆತುಬಿಡಬೇಡಿರಿ; ಗೆಳೆಯರಲ್ಲಿ ಕುಮಾರ ಸಾಹೇಬರ ದರ್ಬಾರದಲ್ಲಿ ಪ್ರಕಟ ಮಾಡಿಬಿಟ್ಟರೆ ನಿಮ್ಮ ಭಾಗ್ಯತೆರೆಯುವ ಸಂಭವವುಂಟು." ಎಂದು ಹೇಳಿದಳು.

ನಾನು ಉತ್ತರವೀಯದೆ ಹೊರಗೆ ಹೋಗಿಬಿಟ್ಟೆ. ಆದರೆ ಆ ನಿರ್ಲಜ್ಜೆಯ 'ನಗೆ', ಆ ಪರಿಹಾಸ ನನ್ನ ಅಂಗಅಂಗಗಳಲ್ಲಿ ವ್ಯಾಪ್ತವಾಗಿ ಸಾವಿರಾರು ಚೇಳುಗಳು ಕಡಿದಹಾಗೆ ನನಗೆನಿಸತೊಡಗಿತು.

ನಾನು ನನ್ನ ಸ್ಥಳಕ್ಕೆ ಬಂದು ಒಂದು ಬಟ್ಟಲು ಚಹಾ ಕುಡಿದು, ಚುರುಟನ್ನು ಸೇದುತ್ತ ಶಾಂತಚಿತ್ತದಿಂದ ವಿಚಾರ

ಮಾಡತೊಡಗಿದೆ—ಇವಳಾರು? ಹೆಚ್ಚು ಹೆಚ್ಚೆಂದರೆ ನಾನು ನನ್ನ ಹಿಂದಿನ ಐದು ವರ್ಷಗಳಲ್ಲಿ ಜರುಗಿದ ಸಂಗತಿಗಳನ್ನು ಚೆನ್ನಾಗಿ ನೆನಪು ಮಾಡಿಕೊಳ್ಳಬಲ್ಲೆ ನಾನು ನನ್ನ ಹಿಂದಿನ ಜೀವನದಲ್ಲಿ ಎಷ್ಟು ದೂರದ ವರೆಗೆ ದೃಷ್ಟಿಹೋಗಬಲ್ಲದೊ ಅಷ್ಟು ದೂರದ ವರೆಗೆ ನೋಡಿದೆ. ಆದರೆ ನನಗೆ ಎಲ್ಲಿಯೂ ಈ ಪ್ಯಾರಿಯು ಕಾಣಿಸಲಿಲ್ಲ ಆದರೂ ಇವಳು ನನ್ನನ್ನು ಗುರ್ತಿಸುತ್ತಿರುವಳು. ಅತ್ತೆಯನ್ನು ಕೂಡ ಬಲ್ಲಳು, ನಾನು ದರಿದ್ರನೆಂಬುದನ್ನು ಕೂಡ ಬಲ್ಲಳು ಆದುದರಿಂದ ಈಕೆಯ ವ್ಯವಹಾರ ದಲ್ಲಿ ಆಳವಾದ ರಹಸ್ಯವೇನೂ ಇರಲಾರದು. ಆದಾಗ್ಯೂ ನನ್ನನ್ನು ಇಲ್ಲಿಂದ ಆದಷ್ಟು ಬೇಗ ಓಡಿಸಬಯಸುವಳು ಆದರೆ ಇದು ಏತಕ್ಕಾಗಿ? ನಾನು ಇಲ್ಲಿದ್ದರೇನು? ಇಲ್ಲದಿದ್ದರೇನು ಇವಳಿಗೆ? ಮಾತು ಮಾತಿನಲ್ಲಿ ಆಗ ಅವಳು ಎಂದು ಬಿಟ್ಟಿದ್ದಳು— ಪ್ರಪಂಚದಲ್ಲಿ ಲಾಭ ಮತ್ತು ಹಾನಿಯು ಮಾತ್ರ ಇರುವುದೇ? ಪ್ರೀತಿ, ಸ್ನೇಹ, ಮಮತೆ ಎಂಬುದು ಇಲ್ಲವೇ ಇಲ್ಲವೆ? ಇದು ವರೆಗೆ ನನ್ನ ಕಣ್ಣುಗಳಿಂದ ನೋಡದಿವಳ ಬಾಯಿಂದ ಬಂದ ಈ ಮಾತುಗಳನ್ನು ನೆನಿಸಿಕೊಂಡು ನಕ್ಕೆ. ಆದರೆ ಇವಳ ಎಲ್ಲ ಮಾತುಗಳನ್ನು ಬದಿಗೆ ಇಟ್ಟುಬಿಟ್ಟೆ. ಅವಳ ಆ ಕೊನೆಯ ಕೊಂಕು ನುಡಿಯೇ ನನ್ನನ್ನು ಒಂದೇಸಮನಾಗಿ ಚುಚ್ಚತೊಡಗಿತು

ಸಾಯಂಕಾಲ ಬೇಟೆಗೆ ಹೋದವರ ದಳವು ಹಿಂತಿರುಗಿ ಬಂದಿತು. ಎಂಟು ಹಕ್ಕಿಗಳನ್ನು ಹೊಡೆದು ತಂದಿರುವರೆಂಬುದನ್ನು ಆಳುಮಕ್ಕಳಿಂದ ಅರಿತುಕೊಂಡೆ ಕುಮಾರರು ನನ್ನನ್ನು ಕರೆಕಳುಹಿದರು ಮೈಯಲ್ಲಿ ಆರೋಗ್ಯವಾಗಿಲ್ಲವೆಂಬ ನೆವ ಮಾಡಿಕೊಂಡು ಹಾಸಿಗೆಯ ಮೇಲೆ ಬಿದ್ದು ಕೊಂಡೆ. ಹೀಗೆಯೆ ಬಿದ್ದುಕೊಂಡು ಇಡಿ ರಾತ್ರಿ ಪ್ಯಾರಿಯ ಸಂಗೀತ ವನ್ನೂ ಸಾರಾಯಿ ಕುಡುಕರ ಪ್ರಶಂಸೋದ್ಗಾರಗಳನ್ನೂ ಆಲಿಸುತ್ತಿದ್ದೆ.

ಬಳಿಕ ಸುಮಾರು ಹೀಗೆಯೆ ಮತ್ತೆ ಮೂರು ನಾಲ್ಕು ದಿನಗಳು ಕಳೆದುವು 'ಸುಮಾರು' ಎಂದು ಏಕೆ ಹೇಳುವೆನೆಂದರೆ ಬೇಟೆಯ ಹೊರತಾಗಿ ಅಲ್ಲಿ ನಡೆಯುವ ಮಾತುಗಳಲ್ಲಿ ವಿಶೇಷತೆಯೇನೂ ಇರುತ್ತಿರ ಲಿಲ್ಲ ಎಂದು. ಪ್ಯಾರಿಯ ಶಾಪ ತಟ್ಟಿತೋ ಏನೊ, ಪ್ರಾಣಿಹತ್ಯೆಗಾಗಿ ಯಾರಲ್ಲಿಯೂ ಉತ್ಸಾಹವಿರಲಿಲ್ಲ ಯಾರಿಗೂ ತಂಬೂ ಬಿಟ್ಟು ಹೊರಗೆ

ಹೋಗಲು ಮನಸ್ಸಾಗುತ್ತಿರಲಿಲ್ಲ ಆದಾಗ್ಯೂ ಅವರು ನನ್ನನ್ನು ಬಿಡಲಿಲ್ಲ. ನಾನು ಆ ಸ್ಥಳಬಿಟ್ಟು ಓಡಿ ಹೋಗಬೇಕೆಂದು ಮನಸ್ಸು ಮಾಡುವಂತಹ ಘಟನೆಯೂ ನಡೆಯಲಿಲ್ಲ. ಆದರೂ ಈ ಬಾಯಿಯ ವಿಷಯದಲ್ಲಿ ನನಗೆ ತಿರಸ್ಕಾರವುಂಟಾಗುತ್ತಿದ್ದಿತು. ಅವಳನ್ನು ಕಂಡೊಡನೆಯೆ ನನಗೆ ಯಾರೊ ಹೊಡೆದಂತೆ ಎನಿಸುತ್ತಿದ್ದಿತು. ಆದುದರಿಂದ ಆಕೆಯು ಬಂದ ಕೂಡಲೆ ನಾನು ಎದ್ದು ಹೊರಗೆ ಹೋಗುತ್ತಿದ್ದೆ; ಆಗ ಸ್ವಲ್ಪ ಮನಸ್ಸು ಶಾಂತವಾಗುತ್ತಿದ್ದಿತು ಪುನಃ ಒಳಗೆ ಹೋದ ಬಳಿಕ ಬೇರೆಯವರೊಡನೆ ಮಾತನಾಡುತ್ತ ಅವಳ ಮಾತನ್ನು ಮರೆಯಲು ಪ್ರಯತ್ನಿಸುತ್ತಿದ್ದೆ. ಆದಾಗ್ಯೂ ಅವಳು ನನ್ನನ್ನು ನೋಡಿ ನಗಲು ಯತ್ನಿಸುತ್ತಿದ್ದಳು; ಆದರೆ ನನ್ನ ಸ್ಥಿತಿಯನ್ನು ಕಂಡು ದಿಙ್ಮೂಢಳಾಗುತ್ತಿದ್ದಳು.

ಶನಿವಾರ ನಾನು ಹೊರಡಲೇಬೇಕಾಗಿತ್ತು. ಯಾವ ನೆವದಿಂದಲೂ ನಾನು ಅಲ್ಲಿ ನಿಲ್ಲುವಂತಿರಲಿಲ್ಲ. ಊಟವಾದೊಡನೆಯೆ ನಾನು ಹೊರಡು-ವವನಿದ್ದುದರಿಂದ ಬೆಳಗಿನಿಂದಲೇ ಸಂಗೀತ ಕಚೇರಿಯು ನಡೆದಿದ್ದಿತು. ದಣಿದು ಬಾಯಿಯು ಸಂಗೀತವನ್ನು ನಿಲ್ಲಿಸಿದಳು ಇಷ್ಟರಲ್ಲಿ ಎಲ್ಲ ಕತೆಗಳಲ್ಲಿಯೂ ಅತ್ಯಂತ ಶ್ರೇಷ್ಠವಾದ ಭೂತಗಳ ಕತೆಯು ಸುರುವಾಯಿತು. ಕ್ಷಣಮಾತ್ರದಲ್ಲಿ ಎಲ್ಲರೂ ಭೂತದ ಕತೆಗಾರನನ್ನು ಮುತ್ತಿಕೊಂಡು ಕುಳಿತರು.

ಮೊದಲು ನಾನು ಅಲಕ್ಷ್ಯದಿಂದ ಆಲಿಸುತ್ತಿದ್ದೆ. ಆದರೆ ಈಗ ಸ್ವಲ್ಪ ಗಮನಕೊಟ್ಟು ಕೇಳತೊಡಗಿದೆ. ಕತೆ ಹೇಳುವವರು ಒಬ್ಬರು ಹಿಂದುಸ್ತಾನೀ ಮುದಕರು. ಕತೆ ಹೇಳುವ ಕಲೆಯನ್ನು ಅವರು ಬಲ್ಲವ-ರಿದ್ದರು ಅವರು ಅನ್ನುತ್ತಿದ್ದರು “ಪ್ರೇತಯೋನಿಯ ವಿಷಯವಾಗಿ ಯಾರಿಗಾದರೂ ಸಂದೇಹವಿದ್ದರೆ ಅವರು ಈ ದಿನ—ಶನಿವಾರ ಅಮಾವಾಸ್ಯೆಯ ತಿಥಿಯ ದಿನ—ಈ ಊರಿಗೆ ಬಂದು ಕಣ್ಣು ಕರ್ಣಗಳ ಮೇಲಿನ ಪರದೆಯನ್ನು ದೂರ ಮಾಡಿಕೊಳ್ಳಲಿ. ಅವರು ಯಾವ ಜಾತಿಯವರೇ ಇರಲಿ, ಹೇಗೆಯೆ ಇರಲಿ, ಎಷ್ಟು ಮನುಷ್ಯರನ್ನಾದರೂ ಸಂಗಡ ಕರೆದುಕೊಂಡು ಹೋಗಲಿ, ಅವರಿಗೆ ಈ ದಿನ ಮಹಾಶ್ಮಶಾನದಲ್ಲಿ ಪ್ರೇತಾತ್ಮಗಳು ಗೋಚರವಾಗುವುವು; ಅಲ್ಲದೆ ಅವುಗಳ ನುಡಿಯೂ ಕೇಳಿಸುವುದು,

ಮನಸ್ಸು ಬಂದರೆ ಅವುಗಳ ಕೂಡ ಮಾತನಾಡಲೂಬಹುದು.'' ನಾನು ನನ್ನ ಬಾಲ್ಯದ ಮಾತುಗಳನ್ನು ನೆನೆಸಿಕೊಂಡು ನಕ್ಕುಬಿಟ್ಟೆ. ಮುದುಕರು ಇದನ್ನು ನೋಡಿ '' ತಾವು ನನ್ನ ಹತ್ತಿರ ಬನ್ನಿರಿ '' ಎಂದರು. ನಾನು ಅವರ ಬಳಿಗೆ ಹೋದೆ. ಅವರು ಕೇಳಿದರು " ತಾವು ಭೂತಗಳ ಮೇಲೆ ವಿಶ್ವಾಸವಿಡುವುದಿಲ್ಲವೆ ? "

'' ಇಲ್ಲ. "

'' ಏಕೆ ? ವಿಶ್ವಾಸವಿಡದಿರುವುದಕ್ಕೇನಾದರೂ ವಿಶೇಷ ಕಾರಣ ಇರುವುದೆ? ''

" ಇಲ್ಲ. "

" ಹಾಗಾದರೆ? ಈ ಊರಲ್ಲಿ ತಮ್ಮ ಕಣ್ಣಿಂದ ನೋಡಿದ ಸಿದ್ಧಪುರುಷರು ಒಬ್ಬಿಬ್ಬರೇ ಇರುವರು. ಆದಾಗ್ಯೂ ತಾವು ನಂಬುವುದಿಲ್ಲ ನಗೆಯಾಡುವಿರಿ, ಇದು ಒಂದೆರಡು ಇಂಗ್ಲಿಷು ಪುಸ್ತಕ ಓದಿದುದರ ಫಲ. ವಿಶೇಷತಃ ಬಂಗಾಲಿಗಳು ಈಗ ನಾಸ್ತಿಕರೂ, ಮ್ಲೇಚ್ಛರೂ ಆಗಿಹೋಗಿರುವರು " ಎಲ್ಲಿಯದೋ ಮಾತು ಎಲ್ಲಿಯವರೆಗೊ ಬಂದು ಮುಟ್ಟಿತು ! ನಾನು ಅವಾಕ್ಕಾದೆ. ಬಳಿಕ " ನೋಡಿರಿ, ಈ ವಿಚಾರವಾಗಿ ನಾನು ತರ್ಕಿಸಲು ಬಯಸುವುದಿಲ್ಲ, ನನ್ನ ನಂಬಿಗೆ ನನಗೆ. ನಾನು ನಾಸ್ತಿಕನೇ ಆಗಿರಲಿ, ಮ್ಲೇಚ್ಛನೇ ಆಗಿರಲಿ, ಆದರೆ ಭೂತಗಳಲ್ಲಿ ನನಗೆ ವಿಶ್ವಾಸವಿಲ್ಲ. ನಾನು ಕಣ್ಣಾರೆ ನೋಡಿರುವೆನೆಂದು ಹೇಳಿದವರೆಲ್ಲರೂ 'ಮೋಸ ಹೋಗಿರಬೇಕು. ಇಲ್ಲವೆ ಸಟೆಯಾಡುವವರು ಇರಬೇಕು.', ಎಂದು ನನ್ನ ತಿಳಿವಳಿಕೆ '' ಎಂದು ನುಡಿದೆ.

ಆ ಭದ್ರಪುರುಷನು ಕೂಡಲೆ ನನ್ನ ಕೈಹಿಡಿದು '' ಈ ದಿನ ರಾತ್ರಿ ತಾವು ಸ್ಮಶಾನಕ್ಕೆ ಹೋಗಬಲ್ಲಿರಾ? '' ಎಂದು ಕೇಳಿದನು. ನಾನು '' ಹೋಗಬಲ್ಲೆ; ಚಿಕ್ಕಂದಿನಿಂದ ಅನೇಕ ರಾತ್ರಿ ಸ್ಮಶಾನಕ್ಕೆ ಹೋಗಿಬರುತ್ತಿರವೆ. ''ಎಂದೆ "ಪಂಟು ಹೊಡೆಯಬೇಡರಿ ಮಹಾಶಯರೇ'' ಎಂದು ಆ ಮುದುಕರು ಶ್ರೋತೃಗಳನ್ನು ಸ್ತಂಭಿತಮಾಡುವಂತಹ ಆ ಸ್ಮಶಾನದ ಭಯಾನಕವಾದ ವಿವರಣೆಯನ್ನು ಹೇಳತೊಡಗಿದರು " ಈ ಸ್ಮಶಾನವು ಅಂತಿಂತಹುದಲ್ಲ ಇದು ಮಹಾಸ್ಮಶಾನ. ಸಾವಿರಾರು ನರಮುಂಡಗಳನ್ನು

ಎಣಿಸಬಹುದು ಈ ಮಹಾಸ್ಮಶಾನದಲ್ಲಿ ಪ್ರತಿ ರಾತ್ರಿ ಮಹಾಭೈರವಿಯು ತನ್ನ ಒಡನಾಡಿಗಳೊಡನೆ ನರಮುಂಡಗಳ ಕೂಡ ಚೆಂಡಾಟವಾಡುವಳು; ಮತ್ತು ಕುಣಿಯುತ್ತಾ ತಿರುಗುವಳು. ಅವರ ಉಚ್ಚ ನಗೆಯ ದನಿಯನ್ನು ಕೇಳಿ ಎಷ್ಟೋ ಅವಿಸ್ವಾಸೀ ಯುರೋಪಿಯನ್ ಜಜ್ಜರ, ಕಲೆಕ್ಟರರ ಹೃದಯದ ಹಾರಿಕೆಯು ನಿಂತುಹೋಗಿದೆ.'' ಈ ಬಗೆಯ ಭಯಾನಕ ರೌದ್ರ ಕಥೆಯನ್ನು ಆ ವೃದ್ಧರು ಬಣ್ಣಿಸುವ ಶೈಲಿಯು ಹಗಲು ಹೊತ್ತಿನಲ್ಲೇ ಕೇಳಿದವರ ಮೈಮೇಲೆ ನವಿರೇಳುವಂತೆ ಮಾಡಿತು ಇಷ್ಟರಲ್ಲಿ ಪ್ಯಾರಿಯು ಬಳಿಯಲ್ಲಿ ಬಂದು ಕುಳಿತುಕೊಂಡಿರುವುದನ್ನು ಕಂಡೆ, ಯಾವಾಗ ಇಲ್ಲಿ ಬಂದು ಕುಳಿತಿದ್ದಳೊ ! ವೃದ್ಧರ ಎಲ್ಲ ಮಾತುಗಳನ್ನು ಅವಳು ಸರ್ವ ಸಾಹಸದಿಂದ ನುಂಗಿಕೊಳ್ಳುತ್ತಿದ್ದಳು

ಮಹಾಸ್ಮಶಾನದ ಇತಿಹಾಸವು ಈ ರೀತಿಯಾಗಿ ಕೊನೆಗಂಡ ಮೇಲೆ ವೃದ್ಧರು ನನ್ನ ಕಡೆಗೆ ನೋಡಿ ಅಭಿಮಾನ ಪೂರಿತವಾದ ದನಿಯಿಂದ "ಮಹಾಶಯರೇ, ತಾವು ಹೋಗುವಿರಾ ?" ಎಂದು ಕೇಳಿದರು.

"ಅದೇಕೆ ಹೋಗುವುದಿಲ್ಲ? "

"ಹೋಗುವಿರಾ ? ಒಳ್ಳೇದು, ತಮ್ಮ ಇಷ್ಟ ಜೀವ ಹೋದರೆ ?"

ನಾನು ನಕ್ಕು "ಇಲ್ಲ, ಮಹಾಶಯರೆ, ಜೀವ ಹೋದರೂ ನಾನು ನಿಮಗೆ ದೋಷ ಕೊಡಲಾರೆ. ತಾವು ನಿಶ್ಚಿಂತರಾಗಿರಿ ಅಪರಿಚಿತ ಸ್ಥಳಕ್ಕೆ ನಾನು ಬರಿಗೈಯಿಂದ ಹೋಗುವುದಿಲ್ಲ ಈ ಬಂದೂಕು ಜೊತೆಯಲ್ಲಿ ಹೋಗುವುದು ! " ಎಂದೆ.

ವಿಚಾರಗಳು ಉದ್ದೀಪ್ತವಾಗಿದ್ದುದರಿಂದ ನಾನು ಅಲ್ಲಿ ನಿಲ್ಲದೆ ಹೊರಟೆ. "ಹಕ್ಕಿಯನ್ನು ಹೊಡೆಯುವಷ್ಟು ಶಕ್ತಿಯಿಲ್ಲ; ಬಂದೂಕಿನಿಂದ ಭೂತಗಳನ್ನು ಹೊಡೆಯುವರಂತೆ ಮಹಾಶಯರು ! ಬಂಗಾಲೀ ಜನರು ಇಂಗ್ರೇಜಿ ಓದಿ ಹಿಂದೂ ಶಾಸ್ತ್ರಗಳನ್ನು ಮನ್ನಿಸುವರೇ ? ಬಾಯಿಂದ ಇವರು ಇಷ್ಟು ಜಂಬ ಕೊಚ್ಚಿಕೊಂಡರೂ ಸಮಯ ಬಂದಾಗ ಓಡಿ ಹೋಗುವರು. ಒಂದು ಗುದಿಕೆ ಬಿದ್ದೊಡನೆಯೇ ಕಣ್ಣೀರು ಕಪಾಳಕ್ಕೆ ಬರುವುವು " ಇದೇ ಬಗೆಯ ವಿಚಾರಗಳು ಅಲ್ಲಿ ನಡೆದಿದ್ದುವು. ಈ ಬಗೆಯ ವಿಚಾರ ಪ್ರದರ್ಶನ, ತರ್ಕದಿಂದ ನಮ್ಮ ನಾಡಿನ ರಾಜರು-

ಮಹಾರಾಜರುಗಳಿಗೆ, ಸಾಹುಕಾರರಿಗೆ ಆನಂದವು ದೊರೆಯುವುದು. ಇಂತಹ ವಿಷಯಗಳಲ್ಲಿ ಅವರು ಅತಿಕ್ರಮವನ್ನು ಮಾಡಲಾರರು. ವಿಶೇಷ ಕಷ್ಟವಿಲ್ಲದೆ ತರ್ಕ ಮಾಡಲು ಬರುವ ವಿಷಯಗಳಲ್ಲಿ ಅವರಿಗೆ ಆನಂದ.

ಈ ಜನರ ಗುಂಪಿನಲ್ಲಿ ಒಬ್ಬನೇ ಗುರಿ ಹೊಡೆಯಲು ನನಗೆ ಬರುವುದಿಲ್ಲವೆಂದೂ ಮಾತು ಬಹಳ ಕಡಿಮೆಯಾಡುವೆನೆಂದೂ ಸಾರಾಯಿಯನ್ನು ಬಹಳ ಕಡಮೆ ಕುಡಿಯುವೆನೆಂದೂ ಒಪ್ಪಿಕೊಂಡನು. ಅವನ ಹೆಸರು ಪುರುಷೋತ್ತಮ ಸಾಯಂಕಾಲ ಬಂದು ಅವನು ನನ್ನನ್ನು ಹಿಡಿದು "ನಾನೂ ಸಂಗಡ ಬರುವೆ ನಾನು ಹಿಂದೆಂದೂ ಭೂತವನ್ನು ನೋಡಿರುವುದಿಲ್ಲ. ಈ ಸುಸಂಧಿಯನ್ನು ವೃಥಾ ಕಳೆದುಕೊಳ್ಳಲಾರೆ." ಎಂದು ನಗತೊಡಗಿದನು. ನಾನು ಕೇಳಿದೆ "ನಿಮಗೆ ಭೂತದಲ್ಲಿ ವಿಶ್ವಾಸ ವಿಲ್ಲವೋ?"

"ಎನಿತೂ ಇಲ್ಲ."

"ಏಕೆ?"

"ಭೂತ ಇಲ್ಲ, ಆದಕಾಗಿ ವಿಶ್ವಾಸವಿಲ್ಲ" ಎಂದು ಅವನು ಪ್ರಚಲಿತ ತರ್ಕಗಳನ್ನು ಎತ್ತಿಕೊಂಡು ಭೂತಗಳ ಅಸ್ತಿತ್ವವನ್ನು ಅಸ್ವೀಕರಿಸತೊಡಗಿದ. ಆದರೆ ನಾನು ಇಷ್ಟರಿಂದಲೇ ಅವನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಒಪ್ಪಲಿಲ್ಲ. ಏಕೆಂದರೆ ಇದೆಲ್ಲವೂ ಯುಕ್ತಿ ತರ್ಕದ ವ್ಯಾಪಾರವಲ್ಲ—ಇದು ಸಂಸ್ಕಾರ ಎಂಬುದನ್ನು ಬಹಳವಾಗಿ ಅಭ್ಯಾಸಿಸಿ ಅರಿತುಕೊಂಡಿದ್ದೆ ಬುದ್ಧಿಯ ಬಲದಿಂದ ಒಪ್ಪದಿದ್ದವರೂ ಭಯಸ್ಥಾನಕ್ಕೆ ಬಂದರೆ ಮೂರ್ಛಿತರಾಗುವರು.

ಪುರುಷೋತ್ತಮ ಇಷ್ಟರಿಂದಲೇ ನನ್ನನ್ನು ಬಿಡಲಿಲ್ಲ ತಾನೂ ಬರುವೆನೆಂದು ಹಟ ಹಿಡಿದು ಕೈಯಲ್ಲಿ ಒಂದು ಬಡಿಗೆಯನ್ನು ತೆಗೆದುಕೊಂಡು ಹೊರಡಲು ಸಿದ್ಧನಾಗಿಯೇ ನಿಂತು "ಶ್ರೀಕಾಂತ ಬಾಬೂ, ತಾವು ಬಂದೂಕು ತೆಗೆದುಕೊಂಡರೆ ನಾನು ಈ ಬಡಿಗೆ ತೆಗೆದುಕೊಂಡಿರುವೆ. ಇದು ನನ್ನ ಕೈಯಲ್ಲಿ ಇರುವ ವರೆಗೆ ಭೂತ ಪ್ರೇತಗಳು ನನ್ನ ಬಳಿಗೆ ಬರುವುದೇ ಇಲ್ಲ." ಎಂದ.

"ಆದರೆ ಅವು ಬಂದಾಗ ಕೈಯಲ್ಲಿ ಬಡಿಗೆ ಉಳಿದೀತೇನು?"

"ಇದೇ ರೀತಿಯಾಗಿರುವುದು ನೋಡಿರಿ. ಮೂರು ಮೈಲಿನ ದಾರಿ. ರಾತ್ರಿ ಹನ್ನೊಂದಕ್ಕೆ ಹೊರಟರಾಯಿತು."

ಅವನ ಆಗ್ರಹ ಸ್ವಲ್ಪ ವಿಚಿತ್ರವೇ ಆಗಿರುವುದನ್ನು ಕಂಡೆ.

ಸ್ಮಶಾನಕ್ಕೆ ಹೊರಡಲು ಇನ್ನೂ ಒಂದು ಗಂಟೆಯ ಸಮಯ ವಿದ್ದಿತು! ನಾನು ತಂಬೂದ ಹೊರಗೆ ಅಲೆದಾಡುತ್ತ 'ಭೂತ ವಾಸ್ತವಿಕ ವಾಗಿ ಇರುವುದಾದರೂ ಏನು?' ಎಂಬುದನ್ನು ಕುರಿತು ಮನದಲ್ಲಿಯೇ ಯೋಚಿಸುತ್ತಿದ್ದೆ. ಈ ವಿಷಯದಲ್ಲಿ ನಾನು ಯಾರ ಶಿಷ್ಯತ್ವವನ್ನು ವಹಿಸಿದ್ದೆನೊ ಅವನಿಗೆ ಭೂತಗಳ ಭಯವೇ ಇರಲಿಲ್ಲ. ಬಾಲ್ಯದ ಮಾತುಗಳು ನೆನಪಿಗೆ ಬರುತ್ತಿದ್ದುವು — "ಆ ರಾತ್ರಿ ಇಂದ್ರ ಎಂದಿದ್ದ ಶ್ರೀಕಾಂತ, ರಾಮನಾಮವನ್ನು ಜಪಿಸುತ್ತಿರು; ಆ ಬಾಲಕ ಹಿಂದೆಯೆ ಕುಳಿತಿರುವ—." ಅದೊಂದೇ ದಿನ ನಾನು ಭಯದಿಂದ ಮೂರ್ಛಿತ ನಾಗಿದ್ದೆ, ಮತ್ತೆಂದೂ ಇಲ್ಲ. ಪುನಃ ಭಯಪಡಲಿಕ್ಕೆ ಸಮಯವೇ ಸಿಕ್ಕ ಲಿಲ್ಲ. ಆದರೆ ಇಂದಿನ ಮಾತು ಸತ್ಯವಿದ್ದರೆ ಭೂತ ಎಂದರೇನು? ಇಂದ್ರನೂ ಭೂತದಲ್ಲಿ ನಂಬಿಕೆಯಿಡುತ್ತಿದ್ದ. ಆದರೆ ಅವನೂ ಕಣ್ಣಿಂದ ಭೂತವನ್ನು ಎಂದೂ ನೋಡಲಿಲ್ಲ. ನಾನು ಬುದ್ಧಿ-ತರ್ಕದಿಂದ ಭೂತ ವನ್ನು ಒಪ್ಪದಿದ್ದರೂ ಸ್ಥಾನ-ಸಮಯ ಸನ್ನಿವೇಶದಿಂದ ನನ್ನ ಮೈಮೇಲೆ ಸಹ ನವಿರೇಳದೆ ಇರಲಿಕ್ಕಿಲ್ಲ ಎಂದು ಇಲ್ಲಿ ಹೇಳದೆ ಇರಲಾರೆ. ಅಕ- ಸ್ಮಾತ್ ಎದುರಿಗೆ ಆ ದುರ್ಭೇದ್ಯ ಅಮಾವಾಸ್ಯೆಯ ಅಂಧಕಾರದ ಕಡೆಗೆ ನೋಡಿ ನನಗೆ ಮತ್ತೊಂದು ಅಮಾವಾಸ್ಯೆಯ ರಾತ್ರಿಯ ನೆನಹು ಬಂದಿತು. ಆ ದಿನವೂ ಇಂದಿನಂತೆಯೆ ಶನಿವಾರವಿದ್ದಿತು

ಐದಾರು ವರ್ಷಗಳ ಹಿಂದಿನ ಮಾತು. ನಮ್ಮ ನೆರೆಹೊರೆಯಲ್ಲಿದ್ದ ನೀರೂ ಜೀಜೀಯು ಬಾಲವಿಧವೆಯಾಗಿಯೂ ಪ್ರಸೂತಿ ರೋಗದಿಂದ ಪೀಡಿತಳಾಗಿ ಆರು ತಿಂಗಳ ವರೆಗೆ ದುಃಖವನ್ನು ಸಹಿಸಿ ತೀರಿಕೊಂಡಳು, ಆಕೆಯ ಮೃತ್ಯುಶಯ್ಯೆಯ ಬಳಿಯಲ್ಲಿ ನಾನೊಬ್ಬನೇ ಇದ್ದೆ. ತೋಟದೊ ಳಗೆ ಒಂದು ಗುಡಿಸಲಲ್ಲಿ ಅವಳು ಇರುತ್ತಿದ್ದಳು. ರೋಗ-ಶೋಕಗಳಲ್ಲಿ, ಆಪತ್ತು-ವಿಪತ್ತುಗಳಲ್ಲಿ ಆಕೆಯಷ್ಟು ಪರರ ಸೇವೆ ಮಾಡುವಂಥ ನಿಸ್ವಾರ್ಥ ಪರೋಪಕಾರಿ ಸ್ತ್ರೀಯು ನಮ್ಮ ಬೀದಿಯಲ್ಲಿ ಮತ್ತಾರೂ ಇರಲಿಲ್ಲ.

ಎಷ್ಟೋ ಹೆಣ್ಣುಮಕ್ಕಳಿಗೆ ಓದುಬರೆಹ, ಹೊಲಿಗೆ, ಅಡಿಗೆ ಕಲಿಸಿದ್ದಳು; ಮನುಷ್ಯರನ್ನಾಗಿ ಮಾಡಿದ್ದಳು. ಆಕೆಯನ್ನು ಎಲ್ಲರೂ ಪ್ರೀತಿಸುತ್ತಿದ್ದರು ಆಕೆಯ ಸ್ವಭಾವ ಶಾಂತ, ಸ್ನೇಹಪೂರಿತವಾದುದು; ಚರಿತ್ರೆಯೂ ನಿರ್ಮಲವಾದುದು ಆದರೆ ಅದೇ ನೀರೂ ಜೀಜೀಯ ಕಾಲು ಆಕೆಯ ಮೂವತ್ತನೆಯ ವರ್ಷದಲ್ಲಿ ಕೊಂಚ ಅಕಸ್ಮಾತ್ ಜಾರಿದ್ದರಿಂದ ಭಗವಂತನು ಆಕೆಯ ಜೀವನವನ್ನು ಈ ಮಹಾವ್ಯಾಧಿಯಿಂದ ಭಾರವಾಗಿಸಿದ್ದನು. ಬೀದಿಯ ಒಬ್ಬನೂ ಆಕೆಯ ಉದ್ಧಾರಕ್ಕಾಗಿ ಮುಂದೆ ಬರಲಿಲ್ಲ ಪಾಪ-ಸ್ಪರ್ಶ-ಲೇಶ ಹೀನ ನಿರ್ಮಲ ಹಿಂದೂ ಸಮಾಜವು ಆ ನತದೃಷ್ಟಳ ಎದುರಿಗೇ ತನ್ನ ಕಿಡಿಕೆ, ಬಾಗಿಲುಗಳನ್ನು ಮುಚ್ಚಿಕೊಂಡಿತು. ಅದೇ ಸಮಾಜದಲ್ಲಿ ನೀರೂ ಜೀಜೀಯ ಪ್ರೇಮಪೂರ್ಣ ಸೇವೆಯ ಫಲವನ್ನು ಉಣ್ಣದಿದ್ದವರೊಬ್ಬರೂ ಇರಲಿಲ್ಲ. ಅದೇ ಸಮಾಜದಲ್ಲಿ ತನ್ನ ಮೃತ್ಯುಶಯ್ಯೆಯ ಮೇಲೆ ನಾಚಿಕೆ, ತಿರಸ್ಕಾರ, ಅಪಮಾನದಿಂದ ಮುಖ ಕೆಳಗೆ ಮಾಡಿಕೊಂಡು ಚಿಕಿತ್ಸೆಯಿಲ್ಲದೆ ಆರು ತಿಂಗಳುಗಳ ವರೆಗೆ ತನ್ನ ಕಾಲು ಜಾರಿಕೆಯ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತ ಶ್ರಾವಣಮಾಸದ ಒಂದು ದಿನ ಅರ್ಧ ರಾತ್ರಿಯ ಸುಮಾರಿಗೆ ಈ ಲೋಕವನ್ನು ಬಿಟ್ಟು ಹೋದಳು ಅವಳು ಯಾವ ಲೋಕಕ್ಕೆ ಹೋದಳೆಂಬ ಸಂಗತಿಯನ್ನು ವಿವರವಾಗಿ ಒರ್ವ ಪುರೋಹಿತರಿಂದ ಕೇಳಿ ತಿಳಿದುಕೊಳ್ಳಿರಿ.

ನನ್ನ ಅತ್ತೆಯು ಆಕೆಗೆ ಗುಪ್ತವಾಗಿ ಸಹಾಯ ಮಾಡುತ್ತಿದ್ದಳು. ಇದು ಸಮಾಜದ ಯಾವ ವ್ಯಕ್ತಿಗೂ ಗೊತ್ತಿರಲಿಲ್ಲ. ನನಗೊಬ್ಬನಿಗೆ ಮಾತ್ರ ಗೊತ್ತಿದ್ದಿತು. ಏಕೆಂದರೆ ನನ್ನ ಅತ್ತೆಯು ನನಗೆ ಒಂದು ದಿನ ಹೀಗೆ ಎಂದಿದ್ದಳು "ಶ್ರೀಕಾಂತ, ನೀನು ಇಂಥಹ ಎಷ್ಟೋ ಜನರ ಸೇವೆಯನ್ನು ಯಾವ ವಿಧಿ ನಿಷೇಧವಿಲ್ಲದೆ ಮಾಡಿರುವೆ. ಈ ಹುಡುಗಿಯನ್ನೊಂದೆರಡು ಬಾರಿ ಏಕೆ ನೋಡಿ ಬರುವುದಿಲ್ಲ?" ಅಂದಿನಿಂದ ನಾನು ದಿನಾಲು ಆಕೆಯ ಗುಡಿಸಲಿಗೆ ಹೋಗಿಬರುತ್ತಿದ್ದೆ. ದುಡ್ಡಿನಿಂದ, ವಸ್ತುಗಳಿಂದ ಸಹಾಯ ಮಾಡುತ್ತಿದ್ದೆ. ಆಕೆಯ ಸಾವಿನ ದಿನ ಹಾಸಿಗೆಯ ಬಳಿ ನಾನೊಬ್ಬನೇ ಇದ್ದೆ. ಆಕೆ ಸಾಯುವಾಗ ಪರಿಪೂರ್ಣ ವಿಕಾರ ಮತ್ತು

ಪರಿಪೂರ್ಣ ಜ್ಞಾನವನ್ನೂ ಕಂಡಷ್ಟು ಮತ್ತೆಂದೂ ನಾನು ಕಂಡಿಲ್ಲ! ವಿಶ್ವಾಸವಿಡದಿದ್ದರೂ ಮೈಮೇಲೆ ಭಯದಿಂದ ಮುಳ್ಳುಬರುವುವು ಎಂಬುದಕ್ಕೆ ಉದಾಹರಣ ಸ್ವರೂಪವಾಗಿ ಆ ಸನ್ನಿವೇಶವನ್ನು ಕುರಿತು ನಾನು ಹೇಳುತ್ತಿರುವೆ.

ಅಂದು ಶ್ರಾವಣಮಾಸದ ಅಮಾವಾಸ್ಯೆಯ ದಿನ. ರಾತ್ರಿ ಹನ್ನೆರಡು ಬಾರಿಸಿದ್ದುವು. ಬಿರುಗಾಳಿ ಮತ್ತು ಮಳೆಯ ಪ್ರಕೋಪದಿಂದ ಪೃಥ್ವಿಯು ಕೂಡ ಸ್ಥಾನ ಪರಿವರ್ತನೆ ಮಾಡಬೇಕೆನ್ನುವ ಸಿದ್ಧತೆಯಲ್ಲಿದೆಯೊ ಏನೊ ಎಂಬಂತೆ ತೋರುತ್ತಿದ್ದಿತು. ಎಲ್ಲ ಕಿಡಿಕಿಗಳೂ ಬಾಗಿಲಗಳೂ ಮುಚ್ಚಿದ್ದುವು. ನಾನು ಮಂಚದ ಬಳಿಯಲ್ಲಿ ಒಂದು ಅರ್ಧಮುರಿದ ಆರಾಮ-ಕುರ್ಚಿಯ ಮೇಲೆ ಕುಳಿತಿದ್ದೆ. ನೀರೂ ಜೀಜೀಯು ನನ್ನನ್ನು ತನ್ನ ಬಳಿಗೆ ಸನ್ನೆಯಿಂದ ಕರೆದು ಮೆಲ್ಲಗೆ ನನ್ನ ಕಿವಿ ಹಿಡಿದು ತನ್ನ ಬಾಯ ಬಳಿಯವರೆಗೆ ಬಾಗಿಸಿ ಕಿವಿಯಲ್ಲಿ ತನ್ನ ಸ್ವಾಭಾವಿಕ ಸ್ವರದಿಂದ "ಶ್ರೀಕಾಂತ, ನೀನು ನಿನ್ನ ಮನೆಗೆ ಹೋಗು." ಎಂದಳು.

"ಏಕೆ ನೀರೂ ಜೀಜೀ, ಇಂತಹ ಬಿರುಗಾಳಿ ಮತ್ತು ಮಳೆಯಲ್ಲಿ?"

"ಇರಲಿ, ಪ್ರಾಣ ಮೊದಲು." ಆಕೆಯು ಭ್ರಮದಿಂದ ಪ್ರಲಾಪಿಸುತ್ತಿರುವಳು ಎಂಬುದನ್ನು ತಿಳಿದುಕೊಂಡು "ಮಳೆ ನಿಲ್ಲಲಿ, ಹೋಗುವೆ" ಎಂದೆ.

"ಇಲ್ಲ, ಇಲ್ಲ. ಈಗಲೇ ಹೋಗು. ಇನ್ನು ಒಂದು ನಿಮಿಷವೂ ಇಲ್ಲಿ ನಿಲ್ಲಬೇಡ, ಹೋಗು, ಬೇಗ ಓಡಿ ಹೋಗು." ಎಂದು ಹೇಳುವಾಗ ಆಕೆಯ ಸ್ವರ ಬದಲಾಗಿದ್ದಿತು. ಅದನ್ನು ಕೇಳಿ ನನ್ನ ಎದೆ ನಡುಗಿತು. ನಾನು "ಅದೇಕೆ ಹೋಗಲು ಹೇಳುವೆ ಜೀಜೀ?" ಎಂದು ಕೇಳಿದೆ.

ಪ್ರತ್ಯುತ್ತರವಾಗಿ ಆಕೆಯು ಕಿಡಿಕೆಯ ಕಡೆಗೆ ಸನ್ನೆಮಾಡಿ ಚೀರಿ ಹೇಳತೊಡಗಿದಳು "ಹೋಗುವುದಿಲ್ಲವೆ? ಪ್ರಾಣ ಕೊಡುವೆಯಾ? ನೋಡುವುದಿಲ್ಲವೇನು ಅಲ್ಲಿ? ನನ್ನ ಪ್ರಾಣವನ್ನು ಒಯ್ಯಲು ಬಂದಿರುವರು—ಕಪ್ಪು ಕಪ್ಪು ಸಿಪಾಯರು. ನೀನು ಇಲ್ಲಿ ಇರುವೆ. ಆದುದ

ರಿಂದ ಅವರು ಕಿಡಿಕಿಯೊಳಗಿಂದಲೇ ನನ್ನನ್ನು ಬೆದರಿಸುತ್ತಿರುವರು." ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ "ಈ ಮಂಚದ ಕೆಳಗೆ ಇರುವರು, ತಲೆಯ ಮೇಲೆ ಇರುವರು! ಕೊಲ್ಲುವರು! ಇಗೋ ಹಿಡಿದರು! ಹಿಡಿದೇ ಬಿಟ್ಟರು!" ಎಂದು ಚೀರತೊಡಗಿದಳು. ಈ ಚೀರುವಿಕೆಯು ಆಕೆಯ ಪ್ರಾಣ ಹೊರಟುಹೋದ ಬಳಿಕ ರಾತ್ರಿಯ ಕೊನೆಯ ಯಾಮದಲ್ಲಿ ನಿಂತಿತು.

ಈ ಸನ್ನಿವೇಶವು ಇಂದಿಗೂ ನನ್ನ ಅಂತರಾಳದಲ್ಲಿ ಭದ್ರವಾಗಿ ಮನೆ ಮಾಡಿಕೊಂಡಿದೆ. ಆ ದಿನ ರಾತ್ರಿ ನನಗೆ ಅಂಜಿಕೆ ಬಂದಿದ್ದಿತು; ಮತ್ತು ಕೆಲವು ಮುಖಗಳೂ ಕಾಣಿಸಿದಂತಿದೆ. ಆದರೆ ಈ ದಿನ ಆ ಸನ್ನಿವೇಶವು ನೆನಪಿಗೆ ಬಂದರೆ ನಗೆಯು ಬರುವುದು; ಒಂದು ವೇಳೆ ಬಾಗಿಲ ತೆರೆದು ನಾನು ಹೊರಗೆ ಹೋದ ಬಳಿಕ ನೀರೂ ಜೀಜೀಯ ಕಪ್ಪು ಸಿಪಾಯರ ಮಧ್ಯದಲ್ಲಿ ನಾನು ಸಿಗುವೆನು ಎಂದು ಎನಿಸಿದ್ದರೆ ನಿಜ ವಾಗಿಯೂ ನಾನು ಆ ಅಮಾವಾಸ್ಯೆಯ ಘೋರ ಕತ್ತಲೆಯನ್ನು ಲೆಕ್ಕಿಸದೆ ಓಡಿ ಹೋಗುತ್ತಿದ್ದೆನೆಂಬುದರಲ್ಲಿ ಸಂದೇಹವಿಲ್ಲ. ಏನೂ ಇಲ್ಲ, ಏನೂ ಇದ್ದಿಲ್ಲ ಎಂಬುದನ್ನೂ ಬಲ್ಲವನಾಗಿದ್ದೆ. ರೋಗಿಯು ರೋಗದ ಹೊಡೆತವನ್ನು ಸಹಿಸದೆ ಮಾಡುತ್ತಿರುವ ಪ್ರಲಾಪವು ಅದು, ಎಂಬುದನ್ನೂ ಬಲ್ಲವನಾಗಿದ್ದೆ. ಇಷ್ಟರಲ್ಲಿ "ಬಾಬೂ!" ಎಂದು ಯಾರೋ ಕೂಗಿದರು. ಹೊರಳಿ ನೋಡಿದೆ—ರತನ

"ಏನೊ?"

"ಬಾಯೀಜೀಯು ನಮಸ್ಕಾರ ಹೇಳಿದ್ದಾರೆ"

ನನಗೆ ವಿಸ್ಮಯವಾದಷ್ಟೇ ಕೋಪವೂ ಬಂದಿತು ಇಷ್ಟು ರಾತ್ರಿಯಲ್ಲಿ ಕರೆಕಳುಹುವುದೆಂದರೆ ಅಪಮಾನಕಾರಕವಾದ ಸ್ಪರ್ಧೆಯೆಂದಷ್ಟೇ ಅಲ್ಲ, ಮೂರು ನಾಲ್ಕು ದಿನಗಳ ವರೆಗಿನ ಎರಡೂ ಕಡೆಯ ವ್ಯವಹಾರವನ್ನು ಕಂಡೂ ಕಂಡೂ ಕರೆಕಳುಹುವುದು ನಾಚಿಕೆಗೇಡಿತನವೆಂದು ಎನಿಸಿತು. ಆದರೆ ನಾನು ಆಳುಮಗನ ಎದುರಿಗೆ ನನ್ನ ರೋಷವನ್ನು ಪ್ರಕಟಿಸದೆ ನನ್ನನ್ನು ಸಂಬಾಳಿಸಿಕೊಂಡು "ಇವೊತ್ತು ವೇಳೆಯಿಲ್ಲ; ರತನ, ನಾನು ಹೊರಗೆ ಹೋಗಬೇಕಾಗಿದೆ ನಾಳೆ ಭೆಟ್ಟಿಯಾಗುವೆ" ಎಂದೆ.

ರತನ ಶಿಕ್ಷಿತ ಆಳುಮಗ. ಶಿಷ್ಟಾಚಾರ-ವಿನಯ ಬಲ್ಲವ. ಅತ್ಯಂತ ಆದರ ಮತ್ತು ವಿನಯಪೂರಿತ ಮೃದುಸ್ವರದಿಂದ " ಬಹಳ ಆವಶ್ಯಕ ಕೆಲಸವಿರುವದು ಬಾಬೂಜೀ. ಒಮ್ಮೆ ಪಾದಧೂಳಿಯು ಮನೆಯಲ್ಲಿ ಬೀಳಲೇಬೇಕು. ಇಲ್ಲದೆ ಹೋದರೆ ಅಮ್ಮನವರು ತಾವೇ ಬರುವೆವೆಂದು ಹೇಳಿರುವರು " ಎಂದು ನುಡಿದ. ಸರ್ವನಾಶ! ಈ ತಂಬೂದಲ್ಲಿ, ಇಷ್ಟು ರಾತ್ರಿಯಲ್ಲಿ, ಇಷ್ಟು ಜನರ ಎದುರಿಗೆ! ನಾನೆಂದೆ " ನೀನು ತಿಳಿಸಿ ಹೇಳು ರತನ—ಈಗ ಆಗುವುದಿಲ್ಲ, ನಾಳೆ ಅವಶ್ಯವಾಗಿ ಕಾಣುವೆ. ಇವೊತ್ತು ನನಗೆ ಬರಲಾಗುವುದೇ ಇಲ್ಲ." ರತನನೆಂದ "ಹಾಗಾದರೆ ಅವರೇ ಬರುವರು. ಬಾಬೂಜೀ, ಐದು ವರ್ಷಗಳಿಂದ ನೌಕರಿ ಮಾಡುತ್ತಿರುವೆ ಅಮ್ಮನವರು ದೃಢಸ್ವಭಾವದವರು. ನೀವು ಬಾರದಿದ್ದರೆ ಅವರು ಬಂದೇಬಿಡುವರು."

ಈ ಅನ್ಯಾಯ ಅಸಂಗತ ಹಟವನ್ನು ನೋಡಿ ನನ್ನ ಸರ್ವಾಂಗವು ಉರಿಯತೊಡಗಿತು. ನಾನೆಂದೆ " ಒಳ್ಳೇದು ನಿಲ್ಲು, ನಾನು ಬರುವೆ." ತಂಬೂದೊಳಗೆ ನೋಡಿದೆ— ನಿದ್ರಾದೇವಿಯ ಕೃಪೆಯಿಂದ ಯಾರೂ ಎಚ್ಚತ್ತಿರಲಿಲ್ಲ. ಪುರುಷೋತ್ತಮನೂ ಗಂಭೀರ ನಿದ್ರೆಯಲ್ಲಿರುವ. ಆಳು ಮಕ್ಕಳ ಬಿಡಾರದಲ್ಲಿ ಒಬ್ಬಿಬ್ಬರು ಮಾತ್ರ ಎಚ್ಚರಿರುವರು. ಕೂಡಲೆ ಬೂಟು ಧರಿಸಿಕೊಂಡು ಕೋಟೊಂದನ್ನು ಬೆನ್ನಮೇಲೆ ಒಗೆದುಕೊಂಡು ರೈಫಲನ್ನು ತೆಗೆದುಕೊಂಡು ಬಾಯೀಜೀಯ ತಂಬೂಕ್ಕೆ ಹೋದೆ. ಪ್ಯಾರೀ ಎದುರಿಗೇ ನಿಂತಿದ್ದಳು. ನನ್ನನ್ನು ಆಪಾದ-ಮಸ್ತಕ ನೋಡಿ ಯಾವ ಮುನ್ನುಡಿಯೂ ಇಲ್ಲದೆ ಕೋಪದಿಂದ " ಸ್ಮಶಾನಕ್ಕೆ ನೀವು ಹೋಗಬೇಕಾಗಿಲ್ಲ. ಯಾವ ರೀತಿಯಿಂದಲೂ ಹೋಗಲಾಗದು " ಎಂದಳು.

ಅತ್ಯಂತ ಆಶ್ಚರ್ಯದಿಂದ " ಏಕೆ? " ಎಂದು ಕೇಳಿದೆ.

" ಏಕೆ? ಭೂತಪ್ರೇತಗಳು ಇಲ್ಲವೇನು? ಈ ಶನಿವಾರ ಅಮಾವಾಸ್ಯೆಯ ದಿನ ಸ್ಮಶಾನಕ್ಕೆ ಹೋಗುವಿರಾ? ನೀವು ಅಲ್ಲಿಂದ ಜೀವಂತ ಹಿಂತಿರುಗಿ ಬರುವಿರಾ? " ಇಷ್ಟೆಂದು ಪ್ಯಾರೀಯು ಅಕಸ್ಮಾತ್ ಅಳತೊಡಗಿದಳು. ನಯನ ನೀರಿನ ನದಿಯು ಹರಿಯತೊಡಗಿತು. ನಾನು ವಿಹ್ವಲ

ನಾಗಿ—ಆಕೆಯ ಕಡೆಗೆ ಸುಮ್ಮಗೆ ನೋಡುತ್ತ ನಿಂತೆ. ಏನು ಮಾಡಲಿ, ಏನೆಂದು ಉತ್ತರವೀಯಲಿ, ಯಾವುದೂ ತೋಚದಾಯಿತು. ತೋಚದಿರುವುದರಲ್ಲಿ ಆಶ್ಚರ್ಯವೇನಿದೆ? ಗುರುತು ಪರಿಚಯವಿಲ್ಲದ ನಾರಿಯೋರ್ವಳು ಇಷ್ಟು ರಾತ್ರಿಯಲ್ಲಿ ಕರೆಕಳುಹಿ ಹಿತಚಿಂತನೆಯ ದೃಷ್ಟಿಯಿಂದ ಕಂಬನಿಗರೆಯತೊಡಗಿದರೆ ಹತಬುದ್ಧಿಯುವನಾಗಲಾರನೆ ಪುರುಷ? ನನ್ನಿಂದ ಉತ್ತರ ಬಾರದಿರುವುದನ್ನು ಕಂಡು ಕಣ್ಣೊರಸಿಕೊಳ್ಳುತ್ತ "ನೀವು ಒಂದು ದಿನವಾದರೂ ಶಾಂತ-ಶಿಷ್ಟರು ಆಗಲಾರಿರಾ? ಇದೇ ರೀತಿಯಾಗಿ ಹಟಮಾರಿಯಾಗಿಯೆ ಜೀವನವನ್ನು ಕಳೆಯುವಿರಾ? ಹೋಗಿರಿ, ನೋಡುವೆ ನೀವು ಹೇಗೆ ಹೋಗುವಿರೊ? ನಾನೂ ನಿಮ್ಮ ಕೂಡ ಬರುವೆ" ಎಂದು ಪ್ಯಾರಿಯು ನುಡಿದು ಶಾಲೊಂದನ್ನು ಹೊದ್ದುಕೊಂಡು ಹೊರಡಲು ಸಿದ್ಧಳಾದಳು.

ನಾನು "ನಡೆ ಹಾಗಾದರೆ" ಎಂದೆ ನನ್ನ ವ್ಯಂಗ್ಯ ಧನಿಯನ್ನು ಗುರುತಿಸಿ ಕಿಡಿಕಿಡಿಯಾಗಿ ಪ್ಯಾರಿಯು "ಆಹಾ! ದೇಶವಿದೇಶಗಳಲ್ಲಿ ನಿಮ್ಮ ಸುಖ್ಯಾತಿಗೆ ಸೀಮೆಯೆ ಇಲ್ಲದಾದೀತು! ಬಾಬೂ ಸಾಹೇಬರು ಬೇಟೆಯಾಡಲು ಬಂದು, ಒಬ್ಬ ಕುಣಿತ ಮಾಡುವವಳನ್ನು ಅರ್ಧ ರಾತ್ರಿಯಲ್ಲಿ ಜೊತೆಗೆ ಕರೆದುಕೊಂಡು ಭೂತ ನೋಡಲು ಹೋಗಿದ್ದರು ಎಂದು ಹೆಸರಾದೀತು! ನೀವೇನು ಮನೆಯಿಂದ ಬರುವಾಗ ಪೂರ್ಣ 'ಅವುಟ್!' (ಕುಡಿದು ಪ್ರಜ್ಞಾಹೀನ) ಆಗಿ ಬಂದಿರುವಿರೇನು? ತಿರಸ್ಕಾರ-ಅನಾಸಕ್ತಿ, ನಾಚಿಕೆ-ಮರ್ಯಾದೆ ಎಲ್ಲವೂ ಹೊರಟು ಹೋಯಿತೇನು?" ಎನ್ನುತ್ತಿರುವಾಗ ಆಕೆಯ ಕಂಠವು ಭಾರವಾಗಿ ಹನಿಯೊಡೆಯಿತು. ಆಕೆಯೆಂದಳು "ನೀವು ಹೀಗಿರಲಿಲ್ಲ. ನಿಮ್ಮ ಅಧಃಪತನವು ಇಷ್ಟಾಗುವುದೆಂದು ಯಾರಿಗೂ ಎನಿಸಿರಲಿಲ್ಲ." ಈ ಮಾತುಗಳಲ್ಲಿ ಕೊನೆಯ ಮಾತನ್ನು ಮತ್ತಾವ ಸಮಯದಲ್ಲಾದರೂ ಎಂದಿದ್ದರೆ ನಾನು ಕೈ ತೋರಿಸದೆ ಬಿಡುತ್ತಿರಲಿಲ್ಲ; ಆದರೆ ಈಗ ನನಗೆ ಸಿಟ್ಟು ಬರಲಿಲ್ಲ. ಪ್ಯಾರಿಯನ್ನು ನಾನು ಅರಿತಿರುವೆನೆಂದು ನನಗೆನಿಸತೊಡಗಿತು. ಹೀಗೇಕೆ ಎನಿಸತೊಡಗಿತೆಂಬುದನ್ನು ಆಮೇಲೆ ಹೇಳುವೆ ಆಗ ನಾನೆಂದೆ "ಜನರು ಏನು ತಿಳಿದುಕೊಳ್ಳುವರು, ಬಿಡುವರು ಎಂಬುದರ ಜ್ಞಾನವು ನಿನಗೂ ಇದೆ.

ನೀನೂ ಇಷ್ಟು ಅಧಃಪತನದ ದಾರಿಯನ್ನು ಹಿಡಿದಿರುವೆ ಎಂಬುದರ ಕಲ್ಪನೆಯು ಯಾರಿಗೂ ಇರಲಿಲ್ಲ ”

ಕ್ಷಣ ಹೊತ್ತು ಪ್ಯಾರಿಯ ಮುಖದ ಮೇಲೆ ಶರದೃತುವಿನ ಚಂದ್ರ ಪ್ರಕಾಶದಂತೆ ಸ್ವಲ್ಪ ನಗೆಯು ಕಾಣಿಸಿತು. ಅದು ಕ್ಷಣಮಾತ್ರ! ಮರು ಕ್ಷಣದಲ್ಲಿ ಆಕೆಯು ಅಂಜುತ್ತಾ “ನನ್ನ ವಿಚಾರವಾಗಿ ನಿಮಗೇನು ಗೊತ್ತಿದೆ? ನಾನಾರು ಹೇಳಿರಿ ನೋಡೋಣ? ” ಎಂದು ನುಡಿದಳು.

“ ನೀನು ಪ್ಯಾರೀ ”

“ ಅಹುದು, ಅದು ನನಗೂ ಗೊತ್ತು. ”

“ ಎಲ್ಲರಿಗೂ ಯಾವುದು ಗೊತ್ತಿಲ್ಲವೊ ಅದನ್ನು ನಾನು ಬಲ್ಲೆ— ಅದನ್ನು ಕೇಳಿ ನಿನಗೆ ಸಂತೋಷವಾಗುವುದೇನು? ಆಗುವಂತಿದ್ದರೆ ನೀನೇ ನಿನ್ನ ಪರಿಚಯವನ್ನು ಮಾಡಿಕೊಡುತ್ತಿದ್ದೆ ನೀನು ನನಗೆ ನಿನ್ನ ಪರಿಚಯವನ್ನು ಮಾಡಿಕೊಟ್ಟಿಲ್ಲ ಆದ್ದರಿಂದ ನನ್ನ ಬಾಯಿಂದ ನಿನಗ ಏನೂ ಕೇಳಲು ದೊರೆಯದು ನೀನೇ ಯೋಚಿಸಿ ನೋಡು ಸ್ವಲ್ಪ ಹೊತ್ತು— ನಿನ್ನನ್ನು ನೀನು ಪ್ರಕಟ ಮಾಡಿಕೊಡುವಿಯೊ ಇಲ್ಲವೊ ಎಂಬುದನ್ನು. ಈಗ ವೇಳೆಯಾಯಿತು--ನಾನು ಹೋಗುವೆ ”

ಪ್ಯಾರೀಯು ವಿದ್ಯುದ್ವೇಗದಿಂದ ಎದ್ದು ಬಂದು ನನ್ನ ದಾರಿಯನ್ನು ಕಟ್ಟಿ “ ಹೋಗಗೊಡದಿದ್ದರೆ ಬಲವಂತ ಮಾಡಿಹೋಗುವಿರಾ? ” ಎಂದಳು.

“ಏಕೆ ಹೋಗಗೊಡುವುದಿಲ್ಲ? ”

“ಹೋಗಗೊಡಲಾ ? ‘ಹೋಗಗೊಡು’ ಎಂದ ಮಾತ್ರಕ್ಕೇ ನಾನು ಹೋಗಗೊಡಲೇನು? ಭೂತಗಳು ಇಲ್ಲವೇನು? ನಾನು ಇದೇ ಈಗ ‘ಅಮ್ಮಾ ಅಮ್ಮಾ’ ಎಂದು ಕೂಗಿ ಗದ್ದಲ ಮಾಡಿಬಿಟ್ಟೇನು ನೋಡಿರಿ” ಎಂದು ಆಕೆಯು ನನ್ನ ಬಂದೂಕನ್ನು ಕಸಿದುಕೊಳ್ಳುವ ಪ್ರಯತ್ನ ಮಾಡಿದಳು ನಾನು ಒಂದು ಹೆಜ್ಜೆ ಹಿಂದೆ ಸರಿದೆ. ನನಗೆ ಸ್ವಲ್ಪ ಹೊತ್ತಿನಿಂದ ನಗು ಬರತೊಡಗಿದ್ದಿತು ನಾನು ಗಟ್ಟಿಯಾಗಿ ನಕ್ಕು “ನಿಜವಾಗಿಯೂ ಭೂತಗಳು ಇರುವುವೊ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ ಆದರೆ ಸುಳ್ಳ ಭೂತಗಳು ಇರುವುವೆಂಬುದನ್ನು ಮಾತ್ರ ಬಲ್ಲೆ ಅವು ಎದುರಿಗೆ

ನಿಂತು ಮಾತನಾಡುವವು; ದಾರಿಯನ್ನು ಕಟ್ಟುವುವು—ಅದೆಷ್ಟು ಬಗೆಯಾಗಿ ಕೀರ್ತಿವರ್ಧಕ ಕೆಲಸಗಳನ್ನು ಮಾಡುವುವೊ ಏನೊ" ಎಂದು ನುಡಿದೆ. ಪ್ಯಾರಿಯು "ಹೀಗೇನು? 'ನಿನ್ನನ್ನು ಅರಿತಿರುವೆನೆ'ಂದು ನೀವು ಹೇಳಿದುದು ಸುಳ್ಳು. ಅವು ಅನೇಕ ಕೀರ್ತಿವರ್ಧಕ ಕೆಲಸಗಳನ್ನು ಮಾಡುವುವು. ಆದರೆ ಕುತ್ತಿಗೆಯನ್ನು ಹಿಚುಕಲು ದಾರಿಕಟ್ಟಿ ನಿಂತಿರುವುದಿಲ್ಲವೆಂಬುದು ನಿಜ. ಅವುಗಳಿಗೆ ತನ್ನದು ಪರರದು ಎಂಬ ಜ್ಞಾನವಿರುವುದು" ಎಂದು ನುಡಿದಳು. ನಾನು ಮತ್ತೆ ನಕ್ಕು ಪ್ರಶ್ನಿಸಿದೆ "ನಿನ್ನ ಸ್ವಂತದ ಮಾತಾಯಿತು ಇದು, ಆದರೆ ನೀನು ಭೂತ ಏನು?'

"ಅಹುದು, ನಾನು ಭೂತ ಅಲ್ಲದೆ ಮತ್ತೇನು? ಯಾರು ಸತ್ತೂ ಸಾಯದಾಗಿರುವರೊ ಅವರೇ ಭೂತ. ಇದೇ ಏನು ನಿಮ್ಮ ಮಾತಿನ ಅರ್ಥ?" ಎಂದು ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ ತಾನಾಗಿಯೇ ಹೇಳತೊಡಗಿದಳು:--"ಒಂದು ದೃಷ್ಟಿಯಿಂದ ನಾನು ಸತ್ತು ಹೋಗಿರುವುದು ನಿಜ. ಸತ್ಯವೇ ಇರಲಿ ಸುಳ್ಳೇ ಇರಲಿ, ನಾನು ಸತ್ತ ಸಮಾಚಾರವನ್ನು ನಾನು ಹರಡಲಿಲ್ಲ, ನನ್ನ ತಾಯಿಯು ನನ್ನ ಮಾವನ ಬಾಯಿಂದ ಹರಡಿಸಿದಳು. ಕೇಳಬಯಸುವಿರೇನು ಎಲ್ಲ ಸಂಗತಿ?" ಸಾವಿನ ಮಾತನ್ನು ಕೇಳುತ್ತಲೇ ನನ್ನ ಸಂಶಯವೆಲ್ಲ ದೂರಾಯಿತು ನಾನು ಈಕೆಯೆ ರಾಜ-ಲಕ್ಷ್ಮಿ ಎಂದು ಚೆನ್ನಾಗಿ ಗುರುತಿಸಿದೆನು. ಬಹಳ ಸಮಯದ ಹಿಂದೆ ಇವಳು ತನ್ನ ತಾಯಿಯ ಕೂಡ ತೀರ್ಥಯಾತ್ರೆಯಾಗಿ ಹೋಗಿದ್ದಳು. ಮತ್ತೆ ಹಿಂತಿರುಗಿ ಬರಲಿಲ್ಲ. ತಾಯಿಯು ಹಿಂತಿರುಗಿ ಊರಿಗೆ ಬಂದು ಕಾಶಿಯಲ್ಲಿ ಇವಳು ಕಾಲರಾ ಬೇನೆಯಿಂದ ಸತ್ತು ಹೋದಳೆಂಬ ಸುದ್ದಿಯನ್ನು ಹರಡಿದಳು ಇವಳನ್ನು ನಾನು ನೋಡಿದುದರ ನೆನಪೇ ಬರುತ್ತಿರಲಿಲ್ಲ! ಆದರೆ ಇವಳು ಇಲ್ಲಿಗೆ ಬಂದ ಬಳಿಕ ಇವಳ ಒಂದು ಅಭ್ಯಾ-ಸದ ಕಡೆಗೆ ಲಕ್ಷ್ಯಗೊಟ್ಟು ನೋಡುತ್ತಿದ್ದೆ. ಅತ್ಯಂತ ಕೋಪ ಬಂದಾಗ ಕೆಳದುಟಿಯನ್ನು ಕಚ್ಚುತ್ತಿದ್ದಳು. ಈ ರೀತಿ ಯಾರೊ ತುಟಿ ಕಚ್ಚುವುದನ್ನು ನಾನು ಬಹಳ ಸಾರೆ ನೋಡಿರುವೆನೆಂಬುದರ ನೆನಪು ಮಾತ್ರ ಬರುತ್ತಿದ್ದಿತು. ಅವರು ಯಾರು, ಎಲ್ಲಿ ನೋಡಿದ್ದೆ, ಯಾವಾಗ ನೋಡಿದ್ದೆ ಎಂಬುದು ನೆನಪಿಗೆ ಬರುತ್ತಿರಲಿಲ್ಲ. ಅದೇ ರಾಜಲಕ್ಷ್ಮಿಯು ಹೀಗಾಗಿ

ರುವುದನ್ನು ಕಂಡು ನಾನು ಕ್ಷಣಮಾತ್ರ ದಿಙ್ಮೂಢನಾದೆ ನಾನು ನನ್ನ ಊರಿನ ಮನಸಾ ಪಂಡಿತರ ಪಾಠಶಾಲೆಯಲ್ಲಿ ಓದುತ್ತಿರುವಾಗ ಎಲ್ಲ ವಿದ್ಯಾರ್ಥಿಗಳ ಸರದಾರನಾಗಿದ್ದೆ. ಆಗ ಇವಳ ತಂದೆಯು ಇನ್ನೊಂದು ಮದುವೆಯನ್ನು ಮಾಡಿಕೊಂಡಿದ್ದರಿಂದ ಇವಳ ತಾಯಿಯು ತನ್ನ ಸುರಲಕ್ಷ್ಮಿ ಮತ್ತು ರಾಜಲಕ್ಷ್ಮಿ ಎಂಬ ಇಬ್ಬರು ಹೆಣ್ಣುಮಕ್ಕಳನ್ನು ಕರೆದುಕೊಂಡು ತನ್ನ ತವರು ಮನೆಗೆ ಹೋದಳು ಇವಳ ವಯಸ್ಸು ಎಂಟು ಒಂಬತ್ತು ವರ್ಷದ್ದಿರಬಹುದು ಮತ್ತು ಸುರಲಕ್ಷ್ಮಿಯದು ಹನ್ನೆರಡು ಹದಿಮೂರು ವರ್ಷದ್ದು. ಇವಳ ಬಣ್ಣ ಬಹಳ ಉಜ್ವಲವಾಗಿದ್ದರೂ ಮಲೇರಿಯಾ ಮತ್ತು ಪ್ಲೀಹದಿಂದ ಹೊಟ್ಟೆ ಹರಿವೆಯಂತೆ, ಕೈಕಾಲು ಕಟ್ಟಿಗೆಯಂತೆ ಮತ್ತು ತಲೆಗೂದಲು ತಾಮ್ರದ ತಂತಿಯಂತೆ ಇದ್ದುವು. ಅವನ್ನು ಎಣಿಸಲೂ ಬಹುದಾಗಿದ್ದಿತು ನನ್ನ ಏಟುಗಳಿಗೆ ಅಂಜಿ ಈ ಹುಡುಗೆಯು ಗೊರಟಿಗೆಯ ಕಂಟಿಗಳಲ್ಲಿ ಅಡಗಿಕೊಂಡು ಅವುಗಳ ಮಾಲೆಯನ್ನು ಮಾಡಿ ನನಗೆ ಕೊಡುತ್ತಿದ್ದಳು ಮಾಲೆಯು ಸಣ್ಣದಾಗಿದ್ದಾಗ ನಾನು ಇವಳನ್ನು ಹಿಂದಿನ ಪಾಠ ಕೇಳಿ ಚೆನ್ನಾಗಿ ಹೊಡೆಯುತ್ತಿದ್ದೆ. ಏಟುಗಳನ್ನು ತಿಂದು ಈ ಹುಡುಗೆಯು ಗಂಟು ಮೋರೆಯನ್ನು ಹಾಕಿಕೊಂಡು ಸುಮ್ಮನೆ ಕುಳಿತಿರುತ್ತಿದ್ದಳೇ ವಿನಾ ಗೊರ-ಟಿಗೆ ಹೂಗಳನ್ನು ಸಂಗ್ರಹಿಸುವುದು ತನಗೆ ಎಷ್ಟು ಕಷ್ಟಸಾಧ್ಯವಾಗಿದೆ ಎಂಬುದರ ಬಗೆಗೆ ಏನನ್ನೂ ಹೇಳುತ್ತಿರಲಿಲ್ಲ. ಅದೇನೇ ಇರಲಿ, ಇವಳು ಏಟಿನ ಅಂಜಿಕೆಯಿಂದಲೇ ಇಷ್ಟು ಕಷ್ಟ ಸಹಿಸುತ್ತಿದ್ದಳೆಂದು ನಾನು ಇಂದಿನವರೆಗೆ ತಿಳಿದಿದ್ದೆ. ಆದರ ಇಂದು ಅಕಸ್ಮಾತ್ ಒಂದು ಸಂಶಯವು ಉತ್ಪನ್ನವಾಯಿತು. ಇರಲಿ ಬಿಡಿ. ಬಳಿಕ ಇವಳ ಮದುವೆಯೂ ಆಗಿಬಿಟ್ಟಿತು. ಅದೂ ಒಂದು ವಿಚಿತ್ರ ವ್ಯಾಪಾರವೇ ಆಗಿದ್ದಿತು! ಸೋದರ ಮಾವ ತನ್ನ ಸೋದರಿಯ ಮಕ್ಕಳ ಮದಿವೆಯ ಚಿಂತೆಯಿಂದ ಬಳಲುತ್ತಿದ್ದ. ವಿರಂಚಿದತ್ತರ ಅಡುಗೆಯವನು ಕುಲೀನನೆಂಬ ಸುದ್ದಿಯು ಎಲ್ಲಿಂದಲೊ ಬಂದಿತು. ಇವನನ್ನು ದತ್ತರು ಬಾಂಕುಡೆಯಿಂದ ವರ್ಗವಾಗುವಾಗ ಸಂಗಡ ಕರೆದುಕೊಂಡು ಬಂದಿದ್ದರು. ದತ್ತರ ಮನೆಯ ಎದುರಿಗೆ ಮಾವನು 'ಬ್ರಾಹ್ಮಣನ ರಕ್ಷಣೆಯನ್ನು ಹೇಗಾದರೂ ಮಾಡಿರಿ, ಎಂದು ಕುಳಿತುಬಿಟ್ಟನು! ಇದುವರೆಗೆ ಅಡುಗೆಯವನು

ಸರಳ-ಸಭ್ಯ ಮನುಷ್ಯನೆಂದು ತಿಳಿದಿದ್ದರು. ಮದುವೆಯ ಮಾತು ಬಂದಾಗ ಆವನು ಬಹಳ ಬುದ್ಧಿವಂತ ಎಂಬ ಮಾತು ನಿದರ್ಶನಕೆ ಬಂದಿತು. ಕೇವಲ ೫೧ ರೂಪಾಯಿ ವರದಕ್ಷಿಣೆ ಎಂದು ಹೇಳಿದಾಗ ಅವನು "ಮಹಾಶಯರೇ, ಇಷ್ಟು ಸುಲಭದಲ್ಲಿ ಮದುವೆಯಾಗದು. ಪೇಟೆಯ ಧಾರಣೆಯನ್ನು ವಿಚಾರಿಸಿ ನೋಡಿರಿ ೫೧ ರೂಪಾಯಿಗಳಿಗೆ ಒಂದು ಜೋಡಿ ಉತ್ತಮ ಶಾಲು ಕೂಡ ಸಿಕ್ಕುವುದಿಲ್ಲ ತಾವು ಬಹಳ ಅಗ್ಗದಲ್ಲಿ ಅಳಿಯನನ್ನು ಹುಡುಕುತ್ತಿರುವಿರಿ! ೧೦೧ರೂಪಾಯಿ ಕೊಟ್ಟರೆ ಈ ಮಣೆಯ ಮೇಲೆ ಕುಳಿತುಕೊಂಡು ಆ ಮಣೆಯ ಮೇಲೆ ಒಂದು ಬಾರಿ ಅಕ್ಕೀಕಾಳು ಹಾಕುವೆ; ಒಂದು ಬಾರಿ ಈ ಮಣೆಯ ಮೇಲೆ ಹಾಕುವೆ. ಇಬ್ಬರೂ ಸಹೋದರಿಯರು ಏಕಕಾಲಕ್ಕೆ ಉದ್ಧಾರವಾಗಿ ಬಿಡುವರು. ಒಂದು ನೂರು ರೂಪಾಯಿ—ಎರಡು ಹೋರಿಗಳನ್ನು ಕೊಳ್ಳುವ ಖರ್ಚನ್ನು— ಸಹ ತಾವು ಕೊಡಲಾರಿರಾ?" ಎಂದು ನುಡಿದನು. ಮಾತು ಅಸಂಗತವಾಗಿರಲಿಲ್ಲ. ಆದರೂ ಬಹಳ ಹೊತ್ತು ಮಾತು ಕತೆಯಾಡಿದ ಬಳಿಕ ೭೦ ರೂಪಾಯಿ ವರದಕ್ಷಿಣೆಗೆ ಮದುವೆಯು ನಿರ್ಣಯವಾಗಿ ಹೋಯಿತು. ಒಂದೇ ರಾತ್ರಿಯಲ್ಲಿ ಸುರಲಕ್ಷ್ಮಿ ಮತ್ತು ರಾಜಲಕ್ಷ್ಮಿಯ ಮದುವೆಯಾಗಿಯೂ ಹೋಯಿತು ಎರಡು ದಿನಗಳಾದ ಬಳಿಕ ೭೦ ರೂಪಾಯಿಗಳನ್ನು ತೆಗೆದುಕೊಂಡು ಆ ಅಳಿಯ ಬಾಂಕುಡೆಗೆ ಹೊರಟು ಹೋಗಿಬಿಟ್ಟ. ಬಳಿಕ ಯಾರೂ ಅವನನ್ನು ನೋಡಲಿಲ್ಲ. ಒಂದೆರಡು ವರ್ಷಗಳನಂತರ ಜ್ವರದ ಗಂಟಿನ ರೋಗದಿಂದ ಪೀಡಿತಳಾಗಿ ಸುರಲಕ್ಷ್ಮಿಯು ಸತ್ತುಹೋದಳು. ಮತ್ತು ಆ ನಂತರ ಒಂದೆರಡು ವರ್ಷಗಳಾದ ಬಳಿಕ ಈ ರಾಜಲಕ್ಷ್ಮಿಯು ಸತ್ತು ಶಿವತ್ವವನ್ನು ಪಡೆದಳು. ಇದೇ ಪ್ಯಾರಿ ಬಾಯೀಜೀಯ ಸಂಕ್ಷಿಪ್ತ ಇತಿಹಾಸ.

"ನೀವು ಏನು ಯೋಚಿಸುತ್ತಿರುವಿರೆಂಬುವನ್ನು ಹೇಳಲೇನು?"

"ಏನು ಯೋಚಿಸುತ್ತಿರುವೆ? ಹೇಳು!'

"ಚಿಕ್ಕಂದಿನಲ್ಲಿ ಇವಳಿಗೆ ನಾನೆಷ್ಟು ಕಷ್ಟವನ್ನು ಕೊಟ್ಟಿರುವೆ! ವನಕ್ಕೆ ಕಳುಹಿ ಗೊರಟಿಗೆಯ ಹೂಗಳನ್ನು ತರಿಸಿರುವೆ, ಚೆನ್ನಾಗಿ ಏಟುಗಳನ್ನೂ ಪ್ರತಿಯಾಗಿ ಕೊಟ್ಟಿರುವೆ. ಏಟುಗಳನ್ನು ತಿಂದು ಇವಳು

ಕೇವಲ ಅತ್ತಿರುವಳು. ಆದರೆ ಏನನ್ನೂ ಬೇಡಿಲ್ಲ. ಈ ದಿನ ಏನಾದರೂ ಹೇಳಿದರೆ ಕೇಳಲೇಬಾರದು. ಇಲ್ಲದಿದ್ದರೆ ಇಲ್ಲ, ಸ್ಮಶಾನಕ್ಕೆ ಹೋಗದಿದ್ದರೆ ಇಲ್ಲ ಇದೇ ಅಲ್ಲವೆ?"

ನಾನು ನಕ್ಕುಬಿಟ್ಟೆ

ಪ್ಯಾರಿಯೂ ನಕ್ಕು ನುಡಿದಳು "ಇದೇ ಆಗಬೇಕು. ಚಿಕ್ಕಂದಿನಲ್ಲಿ ಒಂದು ಬಾರಿ ಪ್ರೀತಿ ಮಾಡಿದರೆ ಅದೆಂದಾದರೂ ಮರೆಯುವುದೇ? ಅದನ್ನು ಪುನಃ ಕಾಲಿನಿಂದ ಒದೆದು ಬಿಡಲಾದೀತೆ? ಪ್ರಪಂಚದಲ್ಲಿ ಇಂತಹ ನಿಷ್ಠುರ ಜನರಾರಿರುವರು? ನಡೆಯಿರಿ, ಸ್ವಲ್ಪ ಕುಳಿತುಕೊಳ್ಳಿರಿ. ಬಹಳ ಮಾತನಾಡಬೇಕಾಗಿದೆ. ರತನ್, ಬಾಬೂಜೀಯವರ ಮೆಟ್ಟುಗಳನ್ನು ಬಿಚ್ಚು —ನಗುವಿರೇಕೆ? "

"ನೀವು ಮನುಷ್ಯರನ್ನು ಮರೆಯಿಸಿ ಹೇಗೆ ವಶದಲ್ಲಿ ತೆಗೆದುಕೊಳ್ಳುವಿರೆಂಬುದನ್ನು ನೋಡಿ ನಗುವೆ."

ಪ್ಯಾರಿಯೂ ನಕ್ಕಳು. ಬಳಿಕ "ಇದನ್ನು ನೋಡಿ ನಗುವಿರಾ! ಅನ್ಯರನ್ನು ಮಾತಿನಲ್ಲಿ ಮರೆಯಿಸಿ ವಶಪಡಿಸಿಕೊಳ್ಳಬಹುದು; ಆದರೆ ತಿಳಿವು ಬಂದಂದಿನಿಂದ ನಾನು ಯಾರ ವಶದಲ್ಲಿರುವೆನೊ ಅವರನ್ನು ಮಾತಿನಲ್ಲಿ ಮರೆಯಿಸಲಾಗುವುದೇ? ಒಳ್ಳೇದು, ನಾನು ಮುಳ್ಳುಗಳಲ್ಲಿ ಸಿಕ್ಕು, ಕೈಯೆಲ್ಲ ರಕ್ತಮಾಡಿಕೊಂಡು ಮಾಲೆಯನ್ನು ಹೆಣೆದು ನಿಮಗೆ ಕೊಡುವಾಗ ಈ ದಿನ ಮಾತನಾಡುವಂತೆಯೆ ಮಾತನಾಡುತ್ತಿದ್ದೆನೆ? ನಿಮ್ಮ ಏಟಿನ ಅಂಜಿಕೆಯಿಂದ ಹಾಗೆ ಮಾತನಾಡುತ್ತಿದ್ದೆನೆ? ಇಂತಹ ವಿಚಾರವನ್ನು ಮನದಲ್ಲೆಂದೂ ತರಬೇಡಿರಿ. ರಾಜಲಕ್ಷ್ಮಿಯು ಹೀಗಿಲ್ಲ. ಆದರೆ— ರಾಮರಾಮ! ನೀವು ನನ್ನನ್ನು ಸಂಪೂರ್ಣವಾಗಿ ಮರೆತೇ ಬಿಟ್ಟಿದ್ದಿರಿ— ನೋಡಿದ ಬಳಿಕ ಸಹ ಗುರುತಿಸಲಿಲ್ಲ! " ಎಂದು ನಕ್ಕು ತಲೆಯಲ್ಲಾಡಿಸಿದಾಗ ಆಕೆಯ ಎರಡೂ ವಜ್ರದ ಕುಂಡಲಿಗಳು ಅಲುಗಾಡಿ ನಕ್ಕುವು

"ನಿನ್ನನ್ನು ಮರೆಯದಿರಲು ನಾನು ನನ್ನ ಹೃದಯದಲ್ಲಿ ಸ್ಥಾನವನ್ನೆಲ್ಲಿ ಕೊಟ್ಟಿದ್ದೆ? ಆದರೆ, ಈ ದಿನ ನಾನು ನಿನ್ನನ್ನು ಗುರುತಿಸಿದೆ; ಇದನ್ನು ನೋಡಿ ನನಗೇ ಆಶ್ಚರ್ಯವಾಗುತ್ತಿರುವುದು. ಒಳ್ಳೇದು ಹನ್ನೆರಡು ಬಾರಿಸಿದುವು,—ಹೊರಡುವೆ."

ಪ್ಯಾರಿಯ ನಗುಮುಖವು ಚಣದಲ್ಲಿ ಕಳೆಗುಂದಿತು! ಸ್ವಲ್ಪ ಸಂಬಾಳಿಸಿಕೊಂಡು "ಭೂತ ಪ್ರೇತಗಳ ಅಸ್ತಿತ್ವ ಒಪ್ಪದಿದ್ದರೂ ಚಿಂತೆಯಿಲ್ಲ, ಹಾವು ಚೇಳುಗಳಾದರೂ ಇರುವುವಲ್ಲ! ಕಾಡು ಹಂದಿಗಳು ಕತ್ತಲು ರಾತ್ರಿಯಲ್ಲಿ ತಿರುಗುತ್ತಿರುತ್ತವೆ. ಅವನ್ನಾದರೂ ಒಪ್ಪಬೇಕಲ್ಲವೆ?" ಎಂದು ನುಡಿದಳು

"ಇವುಗಳ ಅಸ್ತಿತ್ವವನ್ನು ನಾನು ಒಪ್ಪುವೆ. ಇವುಗಳ ವಿಷಯದಲ್ಲಿ ನಾನು ಅತ್ಯಂತ ಜಾಗರೂಕನಾಗಿದ್ದುಕೊಂಡು ನಡೆಯುವೆ"

ನಾನು ಹೊರಡಲುದ್ಯುಕ್ತನಾದುದನ್ನು ನೋಡಿ ಆಕೆಯು ಮೆಲ್ಲಗೆ "ತಡೆಯಲು ಬಾರದಂತಹ ಉಕ್ಕಿನಿಂದ ಮಾಡಿದ ಮನುಷ್ಯರೆಂಬುದನ್ನು ನಾನು ಬಲ್ಲೆ, ಇದರ ಭಯವು ನನಗೆ ಇದ್ದೇ ಇದ್ದಿತು. ಆದರೂ ನಾನು ಅತ್ತು-ಕರೆದು, ನಿಮ್ಮ ಕೈಕಾಲುಗಳನ್ನು ಹಿಡಿದು ಕೊನೆಯ ವರೆಗೆ ನಿಮ್ಮನ್ನು ತಡೆಯಬಲ್ಲೆನೆಂದು ಅರಿತುಕೊಂಡಿದ್ದೆ. ಆದರೆ ನಾನು ಅತ್ತುದಷ್ಟೇ ಆಯಿತು" ಎಂದಳು. ನಾನು ಉತ್ತರವೀಯದೆ ಇರುವುದನ್ನು ನೋಡಿ ಪುನಃ ಆಕೆಯು "ಒಳ್ಳೇದು, ಹೋಗಿರಿ ಹಿಂತಿರುಗಿಸಿ ಪುನಃ ನಿಮಗೆ ಅಶುಭವನ್ನು ಉಂಟುಮಾಡಲಾರೆ ಆದರೆ, ಏನಾದರೂ ಆದರೆ ಈ ವಿದೇಶದಲ್ಲಿ, ತನ್ನವರಿಲ್ಲದ ಈ ಸ್ಥಾನದಲ್ಲಿ ರಾಜರು, ಮಹಾರಾಜರು, ಗೆಳೆಯರು ನೆರವಾಗಲಾರರು, ಆಗ ಎಲ್ಲವನ್ನೂ ನಾನೇ ಸಹಿಸಬೇಕಾಗುವುದು. ನೀವು ನನ್ನನ್ನು ಗುರುತಿಸದಾದಿರಿ, ನಿಮ್ಮ ಗಂಡಸುತನದ ಮಾತನ್ನು ಹೇಳಿ ಹೊರಟುಬಿಟ್ಟಿರಿ ನಮ್ಮದು ಹೆಂಗುಸರ ಮನ! ವಿಪತ್ಕಾಲದಲ್ಲಿ ನಾನು 'ನಾನು ನಿಮ್ಮನ್ನು ಗುರುತಿಸುವುದಿಲ್ಲ' ಎಂದು ಹೇಳಲಾರೆ" ಎಂದು ಒಂದು ನೀಳವಾದ ಉಸಿರನ್ನು ಹತ್ತಿಕ್ಕಿದಳು. ಹೋಗು ಹೋಗುತ್ತಾ ನಾನು ನಿಂತು ಸ್ವಲ್ಪ ಹಿಂತಿರುಗಿ ನಕ್ಕೆ. ಆದೇಕೊ ಏನೊ. ಸ್ವಲ್ಪ ನನಗೂ ಕಷ್ಟದ ಅನುಭವ ಆಗಿರಬಹುದು "ಬಾಯೀಜೀ, ನನ್ನವರೆನ್ನುವವರು ನನಗೆಲ್ಲಿಯೂ ಇಲ್ಲ. ಆದುದರಿಂದ ನನ್ನವರು ಒಬ್ಬರು ಇದ್ದಾರೆಂದೂ ನನ್ನನ್ನು ತೊರೆದು ಹೋಗರೆಂದೂ ಹೇಳಲಿಕ್ಕಾಯಿತು. ಇದೂ ಒಂದು ದೊಡ್ಡ ಲಾಭವೇ ಆಯಿತು!" ಎಂದು ನಾನು ನುಡಿದೆ

"ನಿಮಗಿದು ಗೊತ್ತಿರಲಿಲ್ಲವೆ? ನೂರಾರು ಸಲ 'ಬಾಯೀಜೀ' ಎಂದು ನೀವು ನನಗೆಷ್ಟು ಅಪಮಾನ ಮಾಡಿದರೂ ಸರಿಯೆ, ರಾಜಲಕ್ಷ್ಮಿಯು

ನಿಮ್ಮನ್ನು ಬಿಟ್ಟು ಹೋಗಲಾರಳು. ಇದನ್ನು ನೀವು ಮನದಲ್ಲಿಯೆ ಅನುಭವಿಸದೆ ಇರುವಿರಾ?—ಆದರೆ ನಿಮ್ಮನ್ನು ತೊರೆದು ನಾನು ಹೋಗ ಬಲ್ಲವಳಾಗಿದ್ದರೆ ಒಳ್ಳೆಯದಾಗುತ್ತಿದ್ದಿತು. ನಿಮಗೂ ಒಂದು ಪಾರ ದೊರೆತಂತಾಗುತ್ತಿದ್ದಿತು. ಆದರೆ ಎಷ್ಟು ಕೆಟ್ಟದು ಈ ಸ್ತ್ರೀ ಜಾತಿ? ಒಂದು ಬಾರಿ ಒಬ್ಬನನ್ನು ಪ್ರೀತಿಸತೊಡಗಿದರಾಯಿತು—ಸತ್ತರೇ!''

"ಪ್ಯಾರೀ, ಸತ್‌ಸನ್ಯಾಸಿಗೂ ಭಿಕ್ಷೆ ಸಿಕ್ಕುವುದಿಲ್ಲ, ಏಕೆಂಬುದು ಗೊತ್ತೇ?"

"ಗೊತ್ತು, ಆದರೆ ನಿಮ್ಮ ಈ ವ್ಯಂಗ್ಯದಲ್ಲಿ ನನ್ನನ್ನು ಇರಿದು ಕೊಲ್ಲು ವಷ್ಟು ಹರಿತವಿಲ್ಲ ಇದು ನನಗೆ ದೇವದತ್ತ ಧನ. ಪ್ರಪಂಚದ ಒಳಿತು-ಕೆಡಕಿನ ಜ್ಞಾನವಿಲ್ಲದಿದ್ದಾಗ ನನಗೆ ಸಿಕ್ಕುದು ಇದು. ಇಂದು ಸಿಕ್ಕುದಲ್ಲ"

ನಾನು ಸ್ವಲ್ಪ ಮೆತ್ತಗಾಗಿ "ಒಳ್ಳೇದು, ಇವೊತ್ತು ನನ್ನ ಮೇಲೆ ಒಂದು ಸಂಕಟ ಬರಲಿ ಮತ್ತು ನಿನ್ನ ದೇವದತ್ತ ಧನದ ಪರೀಕ್ಷೆಯಾಗಲಿ ಎಂದು ಬಯಸುವೆ" ಎಂದು ನುಡಿದೆ.

"ರಾಮ ರಾಮ ! ಇಂತಹ ನುಡಿಗಳನ್ನಾಡಬೇಡಿರಿ. ಸುರಕ್ಷಿತವಾಗಿ ಹಿಂತಿರುಗಿ ಬನ್ನಿರಿ. ಈ ದೇವದತ್ತ ಧನದ ಸತ್ಯತೆಯ ಪರೀಕ್ಷೆಯು ಈಗ ಬೇಕಾಗಿಲ್ಲ. ಸಮಯ ಬಂದಾಗ ನನ್ನ ಕೈಯಿಂದ ನಿಮ್ಮ ಸೇವೆಯನ್ನು ಮಾಡಿ ನಿಮ್ಮನ್ನು ಆರೋಗ್ಯವಂತರನ್ನಾಗಿ ಮಾಡುವ ಭಾಗ್ಯವು ನನಗೆಲ್ಲಿದೆ ? ಒಂದು ವೇಳೆ ಇದ್ದರೆ ಹುಟ್ಟಿ ಬಂದುದಕ್ಕೆ ಸಾರ್ಥಕವಾಯಿ ತೆಂದು ತಿಳಿಯುವೆ" ಎಂದು ಆಕೆಯು ಮುಖ ತಿರುಗಿಸಿ ಕಣ್ಣೊರಸಿ ಕೊಂಡಳು. ಇದನ್ನು ನಾನು ಆ ಚಿಮಣಿ ಎಣ್ಣೆಯ ದೀಪದ ಮಿಣುಕು ಬೆಳಕಿನಲ್ಲಿಯೂ ನೋಡಿದೆ.

"ಒಳ್ಳೇದು, ದೇವರು ನಿನ್ನ ಈ ಬಯಕೆಯನ್ನು ಪೂರ್ಣ ಮಾಡಲಿ" ಎಂದು ನಾನು ಬಹಳ ಹೊತ್ತು ಅಲ್ಲಿ ನಿಲ್ಲದೆ ತಂಬೂದಿಂದ ಹೊರಗೆ ಬಂದು ನಿಂತೆ. ಮಾತು ಮಾತಿನಲ್ಲಿ ನಗುನಗುತ ಒಂದು ಪ್ರಚಂಡ ಸತ್ಯವು ಬಾಯಿಂದ ಹೊರಬೀಳುವುದೆಂಬುದನ್ನು ಯಾರು ಅರಿತಿದ್ದರು ?

ತಂಬೂದೊಳಗಿಂದ ಕಂಬನಿಗಳಿಂದ ಭಾರವಾದ ದನಿಯಿಂದ "ದುರ್ಗಾ! ದುರ್ಗಾ!" ಎಂಬ ಕಾತರದ ಕೂಗು ಕೇಳಿಸಿತು; ನಾನು ವೇಗದಿಂದ ಮುನ್ನಡೆದೆ

ಪ್ಯಾರಿಯ ಮಾತುಗಳಿಂದ ನನ್ನ ಮನ ತುಂಬಿ ಹೋಗಿದ್ದಿತು. ನಾನು ಯಾವಾಗ ಆಮ್ರವನದ ಕತ್ತಲು ಕವಿದ ಮಾರ್ಗವನ್ನು ದಾಟಿ ಸರಕಾರೀ ಪೂಲಿನ ಮೇಲೆ ಬಂದು ನಿಂತೆನೆಂಬುದೇ ನನಗೆ ತಿಳಿಯಲಿಲ್ಲ ನಾನು ಮಾರ್ಗದಲ್ಲಿ ಇದೇ ಮಾತನ್ನು ಯೋಚಿಸುತ್ತ ಯೋಚಿಸುತ್ತ ಬಂದೆ—ಸ್ತ್ರೀಯರ ಮನಸ್ಸು ಎಷ್ಟು ವಿರಾಟವಾಗಿರುವುದು! ಎಷ್ಟು ಅಚಿಂತನೀಯವಾಗಿರುವುದು! ಈ ಜ್ವರದ ಗಂಟಿನ ಡೊಳ್ಳು ಹೊಟ್ಟೆಯ ಹುಡುಗೆಯು ನನ್ನನ್ನು ಮೊತ್ತ ಮೊದಲು ಎಷ್ಟು ಪ್ರೀತಿಸಿದ್ದಳು ಮತ್ತು ಗೋರಂಟಿಯ ಪೂಮಾಲೆಯಿಂದ ತನ್ನ ದರಿದ್ರ ಪೂಜೆಯನ್ನು ಸಲ್ಲಿಸಿದ್ದ ಳೆಂಬುದನ್ನು ನಾನು ಅರಿಯದಾದೆ ಇಂದು ನನಗೆ ಗೊತ್ತಾದಾಗ ನನ್ನ ಆಶ್ಚರ್ಯಕ್ಕೆ ಎಲ್ಲೆಯೆ ಉಳಿಯಲಿಲ್ಲ ಕಾದಂಬರಿ-ನಾಟಕಗಳಲ್ಲಿ ಬಾಲ್ಯ-ಪ್ರಣಯಗಳ ಅನೇಕ ಕತೆಗಳನ್ನು ಓದಿರುವೆನೆಂಬುದಕ್ಕೆ ಅಚ್ಚರಿ ಯಾಗಲಿಲ್ಲ ಆದರ ತನ್ನ ದೇವದತ್ತ ಧನವನ್ನು ಗರ್ವದಿಂದ ಪ್ರಕಟಿಸಲು ಹಿಂಜರಿಯದೆ ಆಕೆಯು ತನ್ನ ತಿರಸ್ಕೃತ ಜೀವನದ ನೂರಾರು ಮಿಥ್ಯಾ ಪ್ರಣಯಾಭಿನಯಗಳ ನಡುವೆ ತನ್ನ ಹೃದಯದ ಒಂದು ಮೂಲೆಯಲ್ಲಿ ಇಷ್ಟು ದಿನಗಳ ವರೆಗೆ ಜೀವಂತ ಇಟ್ಟುಕೊಂಡಿದ್ದಳೆಂಬುದನ್ನು ಕಂಡು ಮತ್ತು ಯಾವ ದಾರಿಯಿಂದ ಆಕೆಯು ಜೀವಂತವಾಗಿಡಲು ಬೇಕಾಗುವ ವಸ್ತುಗಳನ್ನು ಕಳಿಸುತ್ತಿದ್ದಳು ಎಂಬುದನ್ನು ಯೋಚಿಸಿ ಅಚ್ಚರಿಯಾಯಿತು.

"ದೊಪ್!" ಎಂದು ಶಬ್ದವಾದೊಡನೆ ನಾನು ಬೆಚ್ಚಿ ಬಿದ್ದ ಎದುರಿಗೆ ಕಣ್ದೆರೆದು ನೋಡಲಾಗಿ ವಿಸ್ತೀರ್ಣವಾದುದೊಂದು ಉಸುಕಿನ ಬಯಲು ಕಾಣಿಸಿತು; ಮತ್ತು ಅದನ್ನು ಸೀಳಿ ಒಂದು ಚಿಕ್ಕ ನದಿಯು ಅಂಕು ಡೊಂಕಾಗಿ ಹರಿದು ದೂರದ ವರೆಗೆ ಹೋಗಿರುವುದು ಗೋಚರಿ ಸಿತು. ಅಲ್ಲಲ್ಲಿ ಕಂಟಿಗಳೂ ಗುಂಪು ಗುಂಪಾಗಿ ಹರಡಿ ನಿಂತಿವೆ. ಅವು ಅಮಾವಾಸ್ಯೆಯ ದಿನ ಕತ್ತಲಲ್ಲಿ ಪ್ರೇತಾತ್ಮಗಳ ನೃತ್ಯವನ್ನು ನೋಡಲು ಆಮಂತ್ರಿತವಾಗಿ ಬಂದ ಮನುಷ್ಯರಂತೆ ಕಂಡುವು. ತಲೆಯ ಮೇಲೆ

ಕಪ್ಪಾದ ಆಕಾಶದಲ್ಲಿ ಲೆಕ್ಕವಿಲ್ಲದ ಗ್ರಹ-ತಾರೆಗಳು ಕುತೂಹಲದಿಂದ ಕಣ್ದೆರೆದು ನೋಡುತ್ತಿರುವುವೊ ಏನೊ ಎಂಬಂತೆ ಕಂಡುವು. ಗಾಳಿಯಿಲ್ಲ, ಶಬ್ದವಿಲ್ಲ, ನನ್ನ ಹೃದಯವೊಂದರಲ್ಲಿ ಬಿಟ್ಟು ದೃಷ್ಟಿಹೋದಷ್ಟು ದೂರದಲ್ಲಿ ನೋಡಿದರೂ ಪ್ರಾಣಿಗಳ ಇನಿತೂ ಸುಳಿವಿಲ್ಲ. " ದೊಪ್ " ಎಂದು ಶಬ್ದ ಮಾಡಿದ ನಿಶಾಚರ ಪಕ್ಷಿಯ ಶಬ್ದವು ಪುನಃ ಕೇಳಿ ಬರಲಿಲ್ಲ. ನಾನು ಪಶ್ಚಿಮದ ಕಡೆಗೆ ಪುನಃ ಹೊರಟೆ. ಆ ಕಡೆಗೇ ಆ ಮಹಾಸ್ಮಶಾನ ವಿದ್ದಿತು. ಬೇಟೆಗಾಗಿ ಒಂದು ದಿನ ಬಂದಾಗ ಕಂಡ ದೊಡ್ಡದೊಂದು ಮರದ ಕಪ್ಪು ಕಪ್ಪಾದ ಎಲೆಗಳು ಕಂಡುವು ಆ ಮಹಾಸ್ಮಶಾನದ ದ್ವಾರಪಾಲರು ಇಲ್ಲಿಯೆ ಇದ್ದರು. ಇವರನ್ನು ದಾಟಿ ನಾನು ಮುನ್ನಡೆದೆ. ಈಗ ನನಗೆ ಪ್ರಾಣಿಗಳ ಅಸ್ಪಷ್ಟ ಶಬ್ದವು ಕೇಳಿಸತೊಡಗಿತು; ಮನಸ್ಸು ಪ್ರಸನ್ನವಾಗುವಂತಹ ಶಬ್ದವಿರಲಿಲ್ಲ ಅದು. ಇನ್ನಿಷ್ಟು ದೂರ ಹೋದ ಬಳಿಕ ಶಬ್ದವು ಇನ್ನೂ ಸ್ಪಷ್ಟವಾಗಿ ಕೇಳಿಸತೊಡಗಿತು. ಒಬ್ಬ ತಾಯಿಯು ಕುಂಭಕರ್ಣನಿದ್ರೆಯನ್ನು ಮಾಡುತ್ತಿರುವಾಗ ಆಕೆಯ ಮಗುವು ಅತ್ತು ಅತ್ತು ನಿರ್ಜೀವವತ್ ಆಗಿ ಬಿಕ್ಕತೊಡಗಿದಂತೆ ಬಿಕ್ಕುವ ಶಬ್ದವು ಮಹಾಸ್ಮಶಾನದ ಒಂದು ಮೂಲೆಯಿಂದ ಕೇಳಬರತೊಡಗಿತು. ಈ ಬಗೆಯ ಬಿಕ್ಕುವ ಶಬ್ದದ ಇತಿಹಾಸವನ್ನು ಆಲಿಸದ ಮನುಷ್ಯನು ಈ ಮಹಾ ಸ್ಮಶಾನದಲ್ಲಿ ಎದ್ದ ಶಬ್ದದ ಕಡೆಗೆ ಅಮಾವಾಸ್ಯೆಯ ಘೋರ ಅಂಧಕಾರ ದಲ್ಲಿ ಒಂದು ಅಡಿಯನ್ನು ಕೂಡ ಮುಂದಿಡಲಾರನೆಂದು ನಾನು ಎದೆತಟ್ಟಿ ಹೇಳಬಲ್ಲೆ. ಆ ಬಿಕ್ಕಿ ಅಳುವ ಮಗುವು ಮನುಷ್ಯನ ಮಗುವಿರಲಿಲ್ಲ, ತೊಗಲಬಾವಲಿಯ ಮಗುವಾಗಿದ್ದಿತು. ಅದು ತನ್ನ ತಾಯಿಯನ್ನು ಕಾಣದ ಮೂಲಕ ಅಳುತ್ತಿದ್ದಿತು. ಈ ಮಾತನ್ನು ಮೊದಲು ಅರಿಯದೆ ಇದ್ದವರು ಮನುಷ್ಯನ ಮಗುವಿನ ಅಳುವ ಶಬ್ದವೇ ಇದು ಎಂದು ಹೇಳುವ ಸಂಭವವಿತ್ತು. ಇನ್ನಿಷ್ಟು ಒಳಗೆ ಹೋಗಿ ನೋಡಲಾಗಿ ನಾನು ಅರಿತ ಮಾತೇ ನಿಜವಾಗಿದ್ದಿತು. ಆ ಮರದಲ್ಲಿ ಅನೇಕ ತೊಗಲಬಾವಲಿಗಳು ನೇತಾಡತೊಡಗಿವೆ, ಮತ್ತು ಒಂದು ಮರಿಯು ಈ ರೀತಿ ಆರ್ತಕಂಠದಿಂದ ಅಳುತ್ತಿರುವುದು.

ಆ ಗಿಡದ ಮೇಲೆ ಅದು ಅಳುತ್ತಲೇ ಇದ್ದಿತು. ನಾನು ಅದರ ಬುಡದೊಳಗಿಂದ ಹಾಯ್ದು ಆ ಮಹಾಸ್ಮಶಾನದ ಒಂದು ಭಾಗದಲ್ಲಿ

ನಿಂತುಕೊಂಡೆ ಬೆಳಿಗ್ಗೆ ಆ ಮುದುಕ ಇಲ್ಲಿ ಲಕ್ಷಾಂತರ ನರಮುಂಡ ಗಳನ್ನು ಎಣಿಸಬಹುದೆಂದು ಹೇಳಿದ್ದ ಅವನ ಹೇಳಿಕೆಯಲ್ಲಿ ಅತ್ಯುಕ್ತಿಯೂ ಏನೂ ಇರಲಿಲ್ಲವೆಂದು ಆಗ ನನಗನ್ನಿಸಿತು ಇಡಿ ಸ್ಥಳವು ನರಮುಂಡ ಗಳಿಂದ ತುಂಬಿಹೋಗಿದೆ ಚೆಂಡಿನ ಆಟವಾಡಲು ಅಲ್ಲಿ ಅಸಂಖ್ಯ ನರ-ಬುರುಡೆಗಳು ಬಿದ್ದಿದ್ದುವು, ಆದರ ಆಟಗಾರರು ಇನ್ನೂ ಬಂದಿರಲಿಲ್ಲ ನನ್ನ ಹೊರತಾಗಿ ಮತ್ತೊಬ್ಬ ಶರೀರವಿಲ್ಲದ ಮನುಷ್ಯ ಅಲ್ಲಿ ಇದ್ದನೊ ಇಲ್ಲವೊ ಎಂಬುದು ಈ ನಶ್ವರ ನಯನಗಳಿಗೆ ಕಾಣಿಸಲಿಲ್ಲ ಆಗ ಘೋರ ಅಮಾವಾಸ್ಯೆಯಾಗಿದ್ದಿತು ಆಟವು ಸುರುವಾಗಲು ತಡವಿಲ್ಲ ಎಂದು ಯೋಚಿಸಿ ನಾನು ಅಲ್ಲಿಯೆ ಒಂದು ಉಸುಕಿನ ದಿನ್ನೆಯ ಮೇಲೆ ಕುಳಿತೆ. ಬಂದೂಕನ್ನು ತೆರೆದು ಕುದುರೆಯನ್ನು ಒತ್ತಿದೆ, ಪುನಃ ಮತ್ತೊಮ್ಮೆ ಅದನ್ನು ಪರೀಕ್ಷಿಸಿ ನೋಡಿ ತೊಡೆಯ ಮೇಲಿಟ್ಟುಕೊಂಡು ಕುಳಿತೆ ಅಯ್ಯೊ ಬಂದೂಕಿನ ಕುದುರೆಯೆ! ಸಂಕಟ ಸಮಯದಲ್ಲಿ ಇನಿತೂ ಸಹಾಯ ಮಾಡಲಿಲ್ಲ

ಪ್ಯಾರಿಯ ಮಾತು ನೆನಪಿಗೆ ಬಂದಿತು. ಆಕೆಯೆಂದಿದ್ದಳು "ನಿಮಗೆ ಭೂತಗಳ ಮೇಲೆ ನಿಜವಾಗಿಯೂ ವಿಶ್ವಾಸವಿಲ್ಲದಿದ್ದರೆ ಅಲ್ಲಿಗೇತಕ್ಕೆ ಹೋಗುವಿರಿ? ವಿಶ್ವಾಸದಲ್ಲಿ ಬಲವಿಲ್ಲದಿದ್ದರೆ ಭೂತಪ್ರೇತ ಗಳು ಇರಲಿ ಇಲ್ಲದಿರಲಿ, ನಾನು ನಿಮ್ಮನ್ನು ಹೋಗಗೊಡೆನು" ನಿಜ. ನಾನು ಇಲ್ಲಿಗೆ ಬಂದುದು ಏನನ್ನು ನೋಡಲು? ಪಾಪವು ಮನಕ್ಕೆ ಅಗೋಚರವಾಗಿಲ್ಲ ನಾನು ನಿಜವಾಗಿ ಏನನ್ನೂ ನೋಡಲು ಬಂದಿಲ್ಲ ಮನುಷ್ಯನಲ್ಲಿ ಎಷ್ಟು ಸಾಹಸವಿರುವುದೆಂಬುದನ್ನು ಮಾತ್ರ ತೋರಿಸಲು ಬಂದಿರುವೆ ಬೆಳಿಗ್ಗೆ ಯಾರು 'ಬಂಗಾಲಿಗಳು ಸಮಯ ಬಂದಾಗ ಓಡಿಹೋಗುವರು, ಹೇಡಿಗಳು' ಎಂದು ಎಂದಿದ್ದರೊ ಅವರಿಗೆ ನಾನು ಬಂಗಾಲಿಗಳು ಹೇಡಿಗಳಲ್ಲ ಎಂಬುದನ್ನು ಪ್ರಮಾಣ ಸಹಿತವಾಗಿ ತೋರಿಸಲು ಮಾತ್ರ ಸ್ಮಶಾನಕ್ಕೆ ಹೋದುದು

ಮನುಷ್ಯನು ಸತ್ತಬಳಿಕ ಅವನ ಅಸ್ತಿತ್ವವು ಇರುವುದಿಲ್ಲವೆಂದು ನನ್ನ ದೃಢವಾದ ನಂಬಿಗೆ ಒಂದು ವೇಳೆ ಇದ್ದರೂ ಅವನ ಪಾರ್ಥಿವ ದೇಹಕ್ಕೆ ಸೀಮಾತೀತವಾದ ತೊಂದರೆಯನ್ನು ಕೊಡುವಂತಹ ಸ್ಮಶಾನಕ್ಕೆ

ಹೋಗಿ ತನ್ನ ತಲೆಬುರುಡೆಯನ್ನೇ ಒಡೆದು ಉರುಳಾಡಿಸುತ್ತ ಅಲೆಯಲು ಇಚ್ಛಿಸುವುದು ಅವನಿಗೆ ಉಚಿತವಾದುದೂ ಅಲ್ಲ, ಸ್ವಾಭಾವಿಕವಾದುದೂ ಅಲ್ಲ ನಾನು ನನ್ನ ವಿಷಯದಲ್ಲಿ ಮಾತ್ರ ಇಷ್ಟೇ ತಿಳಿದಿರುವ ಮನುಷ್ಯನ ರುಚಿಯು ಭಿನ್ನ ಬಿನ್ನವಾಗಿರುವುದೆಂಬುದು ಬೇರೆ ವಿಷಯ. ಒಂದು ವೇಳೆ ಸ್ಮಶಾನದಲ್ಲಿ ಅಲೆಯುವುದು ಯಾರಿಗಾದರೂ ರುಚಿಕರ ಎನಿಸಿದರೆ ನಾನು ಈ ಅತ್ಯುತ್ತಮವಾದ ರಾತ್ರಿಯಲ್ಲಿ ಎಚ್ಚತ್ತು ಇಲ್ಲಿಯವರೆಗೆ ಬಂದುದು ನಿಷ್ಫಲವಾಗಲಿಲ್ಲ ಎಂದು ತಿಳಿಯುವೆ ಆದರೆ ಈ ದಿನ ಈ ರಾತ್ರಿಯ ವಿಷಯದಲ್ಲಿ ಆ ಮುದುಕನು ದೊಡ್ಡದೊಡ್ಡ ಆಸೆಗಳನ್ನು ತೋರಿಸಿರುವನು.

ಒಮ್ಮಿಂದೊಮ್ಮೆಲೆ ಉಸುಕನ್ನು ತೂರಿಕೊಂಡು ಗಾಳಿಯು ಬಂದು ನನ್ನ ತಲೆಯ ಮೇಲಿಂದ ಹಾಯ್ದು ಹೋಯಿತು, ಗಾಳಿಯ ಮತ್ತೊಂದು ಅಲೆಯು ಬಂದಿತು, ಹೀಗೆ ಒಂದರಮೇಲೊಂದು ಬರತೊಡಗಿದುವು. 'ಇದೇನು ?' ಎಂದು ಮನದಲ್ಲೇ ಯೋಚಿಸತೊಡಗಿದೆ ಇಷ್ಟೊತ್ತಿನವರೆಗೆ ಗಾಳಿಯ ಸುಳಿವೇ ಇರಲಿಲ್ಲ ನಾನು ಎಷ್ಟೇ ತಿಳಿದಿರಲಿ ಮತ್ತು ಮನಕ್ಕೆ ತಿಳಿಸುತ್ತಿರಲಿ, ಸತ್ತಬಳಿಕ ಅಜ್ಞಾತವಾಗಿ ಏನಾದರೂ ಇರುತ್ತದೆಂಬ ಮಾತು-ಸಂಸ್ಕಾರವು ನಮ್ಮ ರಕ್ತಮಾಂಸಗಳಲ್ಲಿ ಸೇರಿರುವುದು, ರಕ್ತ ಮಾಂಸಯುಕ್ತ ಈ ಶರೀರವು ಎಲ್ಲಿಯ ವರೆಗೆ ಇರುವುದೊ ಅಲ್ಲಿಯ ವರೆಗೂ ಈ ಸಂಸ್ಕಾರವು—ನಾನು ಒಪ್ಪಲಿ, ಒಪ್ಪದೆ ಇರಲಿ— ಇದ್ದೇ ಇರುವುದು. ಆದುದರಿಂದಲೇ ಗಾಳಿಯ ಅಲೆಗಳು ಕೇವಲ ಉಸುಕಿನ ಕಣಗಳನ್ನಷ್ಟೇ ಅಲ್ಲ, ನನ್ನಲ್ಲಿ ಗುಪ್ತವಾಗಿದ್ದ ಸಂಸ್ಕಾರವನ್ನೂ ಎಬ್ಬಿಸಿದುವು ಹವೆಯು ಸಾವಕಾಶವಾಗಿ, ವೇಗ ವೇಗವಾಗಿ ಬೀಸತೊಡಗಿತು ಮೃತ ಮಾನವ ಬುರುಡೆಗಳಲ್ಲಿ ಹವೆಯು ಸಂಚರಿಸುವಾಗ ದೀರ್ಘ ಉಸುರಾಡಿಸಿದಂತೆ ಆಗುವುದು ಎಂಬುದನ್ನು ಅನೇಕ ಜನರು ಅರಿಯರು ನೋಡು ನೋಡುವುದರೊಳಗೆ ಅಕ್ಕ ಪಕ್ಕದಲ್ಲಿ, ಎದುರಿಗೆ, ಹಿಂದೆ, ನಾಲ್ಕೂ ಕಡೆಗಳಿಂದ ನೀಳವಾಗಿ ಉಸಿರಾಡಿಸುವುದು ಕೇಳಿಸತೊಡಗಿತು ನನ್ನನ್ನು ಎಷ್ಟೋ ಜನರು ಸುತ್ತುವರಿದು ಕುಳಿತಿರುವರು, ಒಂದೇಸವನೇ ಅಯ್ಯಯ್ಯೋ ಎಂದು ನಿಟ್ಟುಸಿರು ಬಿಡುತ್ತಿರುವರು ಎಂಬಂತಾಗಿ ಶರೀರದಲ್ಲಿ ಒಂದು ಬಗೆಯ ತಳಮಳವುಂಟಾಯಿತು ತೊಗಲುಬಾವಲಿಯ ಆ

ಮರಿಯು ಇನ್ನೂ ಉಚ್ಚಸ್ವರದಿಂದ ಅಳುತ್ತಿದ್ದಿತು. ನಾನು ಹೆದರಿರುವೆನೆಂದು ಈಗ ನನಗೆನಿಸತೊಡಗಿತು ಇಂತಹ ಶ್ಮಶಾನದಲ್ಲಿ ಭಯವನ್ನು ನಾನು ನನ್ನ ಹೃದಯದಿಂದ ಹೊಡೆದೋಡಿಸದೆ ಇದ್ದರೆ ನಾನು ಸಾಯುವ ಸಂಭವವೂ ಇದೆ ಎಂಬುದನ್ನು ಚೆನ್ನಾಗಿ ಅರಿತಿದ್ದೆ. ನಿಜವಾಗಿಯೂ ಇಂತಹ ಭಯಾನಕ ಸ್ಥಳಕ್ಕೆ ಈ ಮೊದಲು ನಾನೊಬ್ಬನೇ ಎಂದೂ ಬಂದಿರಲಿಲ್ಲ. ಇಂತಹ ಸ್ಥಾನಕ್ಕೆಸ್ವಚ್ಛಂದವಾಗಿಬರಬಲ್ಲ ವ್ಯಕ್ತಿ ಇಂದ್ರ, ನಾನಲ್ಲ. ನಾನು ಅವನೊಡನೆ ಅನೇಕ ಭಯಾನಕ ಸ್ಥಳಗಳಲ್ಲಿ ಅಲೆದುದರಿಂದ ನಾನೂ ಒಬ್ಬನೇ ಅವನಂತೆ ಇಂತಹ ಸ್ಥಳಗಳಲ್ಲಿ ಅಲೆದಾಡಬಹುದೆಂಬ ವಿಶ್ವಾಸವುಳ್ಳವನಾಗಿದ್ದೆ. ಇಂದು ನನ್ನದೆಷ್ಟು ವಿಭ್ರಮೆಯಾಗಿದ್ದಿತು! ನಿಮಿಷದಲ್ಲಿ ಆ ಮಾತು ಇಂದು ಸ್ಪಷ್ಟವಾಯಿತು. ಇಷ್ಟು ದೊಡ್ಡ ಎದೆಗಾರಿಕೆ ನನಗೆಲ್ಲಿ? ನನ್ನ ಬಳಿ ಆ ರಾಮನಾಮದ ಅಮೋಘ ಕವಚವೆಲ್ಲಿ? ಈ ಪ್ರೇತಭೂಮಿಯಲ್ಲಿ ಒಬ್ಬನೇ ನಿಲ್ಲಲು, ಪ್ರೇತಾತ್ಮಗಳ ಚೆಂಡಿನಾಟ ನೋಡಲು ನಾನು ಇಂದ್ರನಲ್ಲ ಒಂದೆರಡು-ಜೀವಿತ ಹುಲಿ ಕರಡಿಗಳೇನಾದರೂ ಈ ವೇಳೆಯಲ್ಲಿ ಕಂಡರೆ ನಾನು ಬದುಕಿ ಉಳಿಯುವೆನೆ! ಎಂದು ಎನಿಸಿತು. ಒಮ್ಮೆಲೆ-ಯಾರೊ ನನ್ನ ಹಿಂದೆ ನಿಂತು ಬಲಗಿವಿಯ ಮೇಲೆ ಉಸಿರು ಬಿಟ್ಟಂತಾಯಿತು ಆ ಉಸಿರು ಆಣೆಕಲ್ಲಿನಷ್ಟು ತಣ್ಣಗಿದ್ದಿತು. ತಲೆತಿರುಗಿಸಿ ನೋಡದೆಯೆ ನನಗೆ ಆ ಉಸಿರು ಚರ್ಮ-ಮಾಂಸ-ರಕ್ತ ರಹಿತವಾದ ಅಕರಾಳ ವಿಕರಾಳ ಶರೀರದ ದೊಡ್ಡ ಮೂಗಿನ ಹೊರಳೆಗಳಿಂದ ಬಂದಿರಬೇಕೆಂದು ತಿಳಿದುಕೊಂಡೆ. ಆ ವ್ಯಕ್ತಿಯ ಶರೀರದಲ್ಲಿ ಕೇವಲ ಮೂಳೆಗಳೇ ಇರಬೇಕು ಸುತ್ತಲೂ ಅಂಧಕಾರ, ಅರ್ಧರಾತ್ರಿಯ ವೇಳೆ ಸುತ್ತಲಿನ ಆ ಉಸಿರಾಡಿಸುವಿಕೆಯು ನನ್ನ ಕೈಬಳಿಯಲ್ಲೇ ಆದಂತೆಯೂ ಕಿವಿಯ ಹತ್ತಿರದಲ್ಲಿ ಉಸಿರು ಹಾಯ್ದು ಹೋದಂತೆಯೂ ಆಗಾಗ್ಗೆ ಎನಿಸತೊಡಗಿತು. ಇದರಿಂದ ನಾನು ಪರವಶನಾಗತೊಡಗಿದೆ ಇಡಿ ಪ್ರೇತಲೋಕದ ತನಿಯುಸಿರು ಬಂದು ನನ್ನನ್ನು ಮುತ್ತುತ್ತಿರುವುದೆಂದು ನನಗೆನಿಸತೊಡಗಿತು

ಇಂತಹ ಹೊತ್ತಿನಲ್ಲಿ ಧೈರ್ಯಗುಂದಬಾರದು. ಒಂದು ವೇಳೆ ಧೈರ್ಯಗೆಟ್ಟರೆ ಪ್ರಾಣವೇ ಹೋಗುವುದು— ಎಂಬ ವಿಚಾರವು ನನ್ನಲ್ಲಿ

ಜಾಗ್ರತವಾಗಿಯೆ ಇದ್ದಿತು. ನನ್ನ ಬಲಗಾಲು ನಡುಗತೊಡಗಿತು. ಅದನ್ನು ತಡೆಯಲು ಯತ್ನಿಸಿದೆ, ಆದರೆ ಸಫಲನಾಗಲಿಲ್ಲ ಅದು ನನ್ನ ಕಾಲೇ ಅಲ್ಲವೆಂಬಂತೆ ಎನಿಸತೊಡಗಿತು

ಇದೇ ವೇಳೆಗೆ ಸರಿಯಾಗಿ ಅನೇಕ ಕಂಠಗಳಿಂದ ಹೊರಟ ಒಂದು ಕರೆಯು ಕೇಳಿಸಿತು "ಬಾಬೂಜೀ! ಬಾಬೂ ಸಾಹೇಬರೆ!" ಇಡಿಯ ಮೈಮೇಲೆ ಮುಳ್ಳುಗಳು ಎದ್ದುವು ಯಾರು ಕರೆಯುತ್ತಿರುವರು? ಪುನಃ ದನಿಯು ಬಂದಿತು "ಗುಂಡು ಹೊಡೆಯಬೇಡಿರಿ ಮತ್ತೆ!" ದನಿಯು ಮೆಲ್ಲಮೆಲ್ಲನೆ ಹತ್ತಿರ ಬರತೊಡಗಿತು; ಸ್ವಲ್ಪ ಓರೆಗಣ್ಣಿನಿಂದ ನೋಡಿದೆ— ಎರಡು ಮಂದಪ್ರಕಾಶದ ದೀಪಗಳು ಕಂಡುವು. ಆ ಕೂಗಿನಲ್ಲಿ ರತನನ ದನಿಯು ಕೂಡಿದಂತೆ ನನಗೆ ಎನಿಸಿತು. ನಿಜವಾಗಿಯೂ ಅವನ ದನಿಯೆ ಎಂಬುದು ಸ್ಪಷ್ಟವಾಗಿ ಗೊತ್ತಾಯಿತು. ಅವನು ಇನ್ನೂ ಮುಂದೆ ಬಂದು ಒಂದು ಗಿಡದ ಮರೆಯಲ್ಲಿ ಅಡಗಿ 'ಬಾಬೂಜೀ, ತಾವು ಎಲ್ಲೇ ಇರ್ರಿ ಗುಂಡು ಮಾತ್ರ ಹಾರಿಸಬೇಡಿರಿ, ನಾನು ರತನ" ಎಂದು ಕೂಗಿದ. ರತನನ ದನಿಯೇ ಅದು ಎಂಬುದರಲ್ಲಿ ಆಗ ನನಗೆ ಸಂದೇಹವೇ ಉಳಿಯಲಿಲ್ಲ ನಾನು ಉಲ್ಲಾಸದಿಂದ ಉತ್ತರವೀಯಬೇಕೆಂದೆ; ಆದರೆ ದನಿಯೆ ಏಳಲಿಲ್ಲ ಭೂತ-ಪ್ರೇತಗಳು ಒಂದಿಲ್ಲೊಂದು ಮಾನವನ ಶಕ್ತಿಯನ್ನು ನಷ್ಟಮಾಡಿ ಹೋಗುವುವೆಂದು ಹೇಳುವರು ನನ್ನ ಹಿಂದೆ ಇದ್ದ ಪ್ರೇತವೇ ನನ್ನ ದನಿಯನ್ನು ನಷ್ಟಗೊಳಿಸಿ ಹೋಗಿರಬೇಕು.

ರತನ, ಇನ್ನೂ ಇಬ್ಬರು ಕೈಯಲ್ಲಿ ಲಾಠಿಗಳನ್ನೂ ಎರಡು ಲಾಂದರುಗಳನ್ನೂ ಹಿಡಿದುಕೊಂಡು ಬಂದು ನನ್ನೆದುರಿಗೆ ನಿಂತರು ಅವರಲ್ಲಿ ಒಬ್ಬ ಗಣೇಶಪಾಂಡೆ, ಇನ್ನೊಬ್ಬ ಊರಿನ ಕೊತವಾಲ

ರತನ "ನಡೆಯಿರಿ, ಮೂರು ಗಂಟೆಯಾಯಿತು" ಎಂದ

"ನಡೆಯಿರಿ." ಎಂದು ನಾನು ಮುಂದೆ ನಡೆದೆ. ಹೋಗುತ್ತಿರುವಾಗ ರತನ "ಧನ್ಯ ನಿಮ್ಮ ಸಾಹಸ ನಾವು ಇಷ್ಟು ಜನರು ಇದ್ದರೂ ಹೇಗೆ ಹೆದರುತ್ತ ಬಂದೆವೆಂಬುದನ್ನು ವರ್ಣಿಸಲಾರೆವು" ಎಂದ

"ನೀವು ಬಂದುದಾದರೂ ಏಕೆ?"

"ರೂಪಾಯಿಗಳ ಆಸೆಯಿಂದ. ನಮಗೆ ಒಂದೊಂದು ತಿಂಗಳ ಸಂಬಳ ಮುಂಗಡೆಯಾಗಿ ದೊರೆತಿದೆ!' ಎಂದು ರತನ ನನ್ನ ಬಳಿಗೆ ಬಂದು ಮೆಲ್ಲಗೆ "ತಾವು ಹೊರಟು ಬಂದಮೇಲೆ ಅಮ್ಮನವರು ಅಳುತ್ತ ಕೂತಿರುವುದನ್ನು ಕಂಡೆ. ಆಗ ಅವರು 'ರತನ ಹೋಗು, ಅವರನ್ನು ಕರೆದುಕೊಂಡು ಬಾ, ನಿಮಗೆ ಒಂದೊಂದು ತಿಂಗಳದ ಸಂಬಳ ಇನಾಮಾಗಿ ಕೊಡುವೆ ಎಂದರು.' ಎಂದು ನುಡಿದ ಬಳಿಕ ನಾನು ಕೊತವಾಲನಿಗೆ ಆರು ರೂಪಾಯಿಗಳನ್ನು ಕೊಟ್ಟು ದಾರೀ ತೋರಿಸಲು ಹೇಳಿದೆ. ಅವನು ಒಪ್ಪಿ ದಾರಿ ತೋರಿಸಿದ ಒಳ್ಳೇದು ಬಾಬೂಜೀ, ನೀವು ಚಿಕ್ಕ ಮಗುವು ಅಳುವುದನ್ನು ಕೇಳಿರುವಿರಾ?' ಎಂದು ನಡುಗುತ್ತ ನನ್ನ ಕೋಟಿನ ಹಿಂಭಾಗದ ತುದಿಯನ್ನು ಹಿಡಿದುಕೊಂಡ ಮತ್ತು ಪುನಃ ಎನ್ನ ತೊಡಗಿದ "ನಮ್ಮ ಕೂಡ ಬಂದ ಗಣೇಶ ಪಾಂಡೆ ಅವರು ಬ್ರಹ್ಮಣರು; ಆದುದರಿಂದಲೇ ನಾವು ಉಳಿದೆವು ಇಲ್ಲದೆ ಇದ್ದರೆ?"

ನಾನೇನೂ ಹೇಳಲಿಲ್ಲ ವಿರುದ್ಧ ನುಡಿದು ಅವರ ಭ್ರಮವನ್ನು ದೂರ ಮಾಡುವ ಸ್ಥಿತಿಯಲ್ಲಿ ನಾನಿರಲಿಲ್ಲ ಸುಮ್ಮಗೆ ಮುನ್ನಡೆಯತೊಡಗಿದೆ.

ಸ್ವಲ್ಪ ದೂರ ಮುಂದಕ್ಕೆ ಹೋದ ಬಳಿಕ ರತನ ಕೇಳಿದ "ಇವೊತ್ತು ನೀವೇನಾದರೂ ನೋಡಿದಿರಾ?" "ಇಲ್ಲ" ಎಂದು ನಾನು ಉತ್ತರವಿತ್ತೆ. ನನ್ನ ಈ ಸಂಕ್ಷಿಪ್ತ ಉತ್ತರದಿಂದ ರತನ ಕ್ಷುಬ್ಧವಾಗಿ "ನಾವು ಬಂದುದಕ್ಕಾಗಿ ತಮಗೆ ಕೋಪಬಂದಿತೆ? ತಾವು ಅಮ್ಮನವರ ಅಳುವನ್ನು ನೋಡಿದ್ದರೆ?" ಎಂದ.

"ಇಲ್ಲ ರತನ, ನನಗಿನಿತೂ ಕೋಪವಿಲ್ಲ"

ತಂಬೂದ ಬಳಿ ಬಂದ ಮೇಲೆ ಕೊತವಾಲ ತನ್ನ ಕೆಲಸಕ್ಕೆ ಹೊರಟು ಹೋದ. ಗಣೇಶನೂ ತನ್ನ ತಂಬೂಕ್ಕೆ ಹೋದ ಬಳಿಕ ರತನ ಹೇಳಿದ "ಅಮ್ಮನವರು ತಾವು ಒಂದು ಬಾರಿ ಈಗ ದರ್ಶನವಿತ್ತು ಹೋಗಬೇಕೆಂದು ತಿಳಿಸಿರುವರು."

ನಾನು ನಿಂತೆ, ಎದುರಿಗೆ ತಂಬೂದಲ್ಲಿ ಪ್ಯಾರಿಯು ಉತ್ಸುಕತೆಯಿಂದ ಕಂಬನಿದುಂಬಿದ ಕಣ್ಣುಗಳಿಂದ ಪ್ರತೀಕ್ಷೆಮಾಡುತ್ತ ಒಂದು

ದೀಪದೆದುರಿನಲ್ಲಿ ಕುಳಿತಿದ್ದಳು ನನ್ನ ಉನ್ಮತ್ತ ಮನವು ಊರ್ಧ್ವ ಶ್ವಾಸಗಳನ್ನು ಬಿಡುತ್ತ ಅತ್ತ ಓಡಿಹೋಗುತ್ತಿದ್ದಿತು.

ರತನ ವಿನಯದಿಂದ ಕರೆದ "ಬನ್ನಿರಿ" ಎಂದು

ಕ್ಷಣ ಮಾತ್ರ ಕಣ್ಮುಚ್ಚಿ ನನ್ನ ಅಂತರಲ್ಲಿ ಮುಳುಗಿ ನೋಡಿದೆ, ಎಲ್ಲಿಯೂ ಯಾವುದೂ ಎಚ್ಚರವಾಗಿರಲಿಲ್ಲ; ಎಲ್ಲರೂ ಸಾರಾಯಿ ಕುಡಿದು ಉನ್ಮತ್ತರಾಗಿ ಮಲಗಿದ್ದರು ರಾಮ ರಾಮ, ಈ ಮದೋನ್ಮತ್ತರ ದಲದೊಡನೆ ನಾನು ಆಕೆಯನ್ನು ಕಾಣ ಹೋಗಲಾ? ಇದು ನನ್ನಿಂದ ಯಾವ ರೀತಿಯಾಗಿಯೂ ಆಗದು

ತಡವಾಗುವುದನ್ನು ನೋಡಿ ರತನ ವಿಸ್ಮಯದಿಂದ "ಅತ್ತ ಕತ್ತಲಲ್ಲಿ ಏಕೆ ನಿಂತಿರುವಿರಿ? ಬಾಬೂಜೀ ಬನ್ನಿರಿ!" ಎಂದ.

ಕೂಡಲೇ ನಾನು "ಇಲ್ಲ ರತನ, ಈಗ ವೇಳೆಯಿಲ್ಲ— ನಾನು ಹೋಗುವೆ" ಎಂದು ಉತ್ತರವಿತ್ತೆ

ರತನ ಕುಂಠಿತನಾಗಿ "ಅಮ್ಮನವರು ದಾರಿ ನೋಡುತ್ತ ಕುಳಿತಿರುವರು," ಎಂದ.

"ದಾರಿ ನೋಡುತ್ತಿರುವರು? ನೋಡಲಿ ನನ್ನ ಅಸಂಖ್ಯ ನಮಸ್ಕಾರಗಳನ್ನು ಹೇಳು ಮತ್ತು ನಾಳೆ ಹೊರಡುವ ಮೊದಲು ಭೆಟ್ಟಿ ಯಾಗುವೆನೆಂದು ತಿಳಿಸು ಈಗ ಆಗುವದಿಲ್ಲ ನಿದ್ರೆ ಬರುತ್ತಿರುವುದು ರತನ, ನಾನು ಹೋಗುವೆ" ಎಂದವನೇ ವಿಸ್ಮಿತ, ಕ್ಷುಬ್ಧ ರತನನಿಗೆ ಉತ್ತರವೀಯಲು ಅವಕಾಶ ಕೊಡದೆ ವೇಗವಾಗಿ ಹೆಜ್ಜೆಯಿಕ್ಕುತ್ತಾ ತಂಬೂದ ಕಡೆಗೆ ಹೊರಟು ಬಿಟ್ಟೆ

೨

ಮಾನವನ ಅಂತಃಕರಣದೊಳಗಿನ ವಸ್ತುವನ್ನು ಗುರುತಿಸಿ ಅದರ ನ್ಯಾಯ ವಿಚಾರಣೆಯನ್ನು ಮಾಡುವ ಭಾರವನ್ನು ಪರಮಾತ್ಮನ ಮೇಲೆ ಹಾಕದೆ ಅದನ್ನು ತನ್ನ ಮೇಲೆ ತೆಗೆದುಕೊಂಡು ಮನುಷ್ಯನು 'ನಾನು ಹೀಗಿರುವೆ, ಹಾಗಿರುವೆ, ಈ ಕಾರ್ಯವು ನನ್ನಿಂದೆಂದಿಗೂ ಆಗದು, ನಾನು ಸತ್ತರೂ ಇಂತಹ ಕೆಲಸವನ್ನು ಮಾಡಲಾರೆ ಇತ್ಯಾದಿ' ಎಂದು ನುಡಿದಾಗ ನನಗೆ ಅತೀವ ನಾಚಿಕೆಯಾಗದೆ ಇರುವುದಿಲ್ಲ ಕೇವಲ ನನ್ನ ಮನದ ವಿಷಯವಾಗಿ ಅಷ್ಟೇ ಅಲ್ಲ, ಅನ್ಯರ ವಿಷಯವಾಗಿಯೂ

ಕೂಡ ಮಾನವನ ಆಹಾರಕ್ಕೆ ಮೇರೆಯೆ ಇಲ್ಲವೆಂಬುದು ನನಗೆ ತೋರುವುದು. ಒಂದು ಬಾರಿ— ವಿಮರ್ಶಕರ ಲೇಖನಗಳನ್ನು ಓದಿ ನೋಡಿರಿ, ನಗೆಯು ಬಾರದೆ ಇರದು ಕವಿಯನ್ನು ಬಿಟ್ಟು ಅವರು ಕಾವ್ಯದ ಮನುಷ್ಯನನ್ನು ಗುರುತಿಸುವರು ಮತ್ತು ಗಟ್ಟಿಯಾಗಿ ನುಡಿಯುವರು "ಈ ಚರಿತ್ರ—ಪಾತ್ರವು ಹೀಗೆಂದಿಗೂ ಇರಲಾರದು— ಹಾಗೆಂದಿಗೂ ಅದು ಮಾಡಲಾರದು." ಹೀಗೆ ಎಷ್ಟೋ ಮಾತುಗಳು ಇರುವವು. ಜನರು ಹೊಗಳಿಕೆಯ ಸೇತುವೆಯನ್ನು ಕಟ್ಟಿ "ಇದಕ್ಕೇ ವಿಮರ್ಶೆಯೆನ್ನುವರು ! ಇದಕ್ಕೇ ಚರಿತ್ರಚಿತ್ರಣವೆನ್ನುವರು ' ಸತ್ಯವಾದುದನ್ನು ಹೇಳಿರುವರು ! ಇಂತಹ ವಿಮರ್ಶಕರು ಇರುವಾಗ ಮನಸಿಗೆ ಬಂದುದನ್ನು ಬರೆದರೆ ಹೇಗೆ ಸಾಗೀತು ? ಪುಸ್ತಕದಲ್ಲಿನ ತಲೆಬುಡವಿಲ್ಲದ ಮಾತುಗಳನ್ನೂ ತಪ್ಪುಗಳನ್ನೂ ಹೇಗೆ ಬೈಲಿಗೆಳೆದಿರುವರು !" ಎಂದು ಹೇಳುವರು. ಅವರು ಹೇಳಲಿ ಬಿಡಿರಿ. ತಪ್ಪು ಯಾರಿಂದ ಆಗುವುದಿಲ್ಲ ? ಆದಾಗ್ಯೂ ನಾನು ನನ್ನ ಜೀವನದ ವಿಮರ್ಶೆಯನ್ನು ಮಾಡಿಕೊಂಡು, ಓದಿಕೊಂಡು ಅವರ ನಾಚಿಕೆಯಿಂದ ತಲೆಯನ್ನು ಎತ್ತಲಾರದವನಾಗಿರುವೆ. ಮನದಲ್ಲಿಯೆ ಎಂದುಕೊಳ್ಳುವೆ "ಅಯ್ಯೋ ದುರ್ಭಾಗ್ಯವೆ ! ಮಾನವನ ಅಂತಃಕರಣದೊಳಗಿನ ವಸ್ತುವು ಅನಂತವೆಂದು ಹೇಳುವುದು ಕೇವಲ ಹೇಳುವುದಕ್ಕಾಗಿಯೇ ಇದೆಯೆ ? ಡಂಭವನ್ನು ವ್ಯಕ್ತ ಮಾಡುವಾಗ ಇದರ ಬೆಲೆಯು ಇನಿತೂ ಇರುವುದಿಲ್ಲವೇ ? ನಿಮ್ಮ ಕೋಟ್ಯಂತರ ಜನ್ಮಗಳ ಅಸಂಖ್ಯ ಕೋಟಿ ಅದ್ಭುತ ವ್ಯಾಪಾರಗಳು ಈ ಅನಂತದಲ್ಲಿ ಮಗ್ನವಾಗಿರಬಲ್ಲವು; ಮತ್ತು ಒಮ್ಮೆಲೆ ಜಾಗ್ರತವಾಗಿ ನಿಮ್ಮ ಬಹುಜ್ಞತೆ, ನಿಮ್ಮ ಓದು ಬರೆಹ, ನಿಮ್ಮ ವಿದ್ವತ್ತೆ ಮತ್ತು ಮನುಷ್ಯನ ಪರೀಕ್ಷೆ ಮಾಡುವ ನಿಮ್ಮ ಕ್ಷುದ್ರ ಜ್ಞಾನಭಾಂಡಾರವನ್ನು ಒಂದು ಕ್ಷಣ ಮಾತ್ರದಲ್ಲಿ ನುಚ್ಚುನುರಿ ಮಾಡಬಲ್ಲವು ಎಂಬ ಮಾತು ನಿಮ್ಮ ಮನದಲ್ಲಿ ಒಂದು ಬಾರಿಯಾದರೂ ಬರುವುದಿಲ್ಲವೆ ? ಇದು ಸೀಮಾತೀತ ಆತ್ಮದ ಆಸನವೆಂಬುದೂ ನಿಮಗೆ ತಿಳಿಯದೆ ?"

ಇದನ್ನೇ ನಾನು ಅನ್ನದಾ ಜೀಜೀಯಲ್ಲಿ ಕಣ್ಣಾರೆ ಕಂಡಿರುವೆ. ಆಕೆಯ ಉಜ್ವಲ ದಿವ್ಯ ಮೂರ್ತಿಯು ನನಗಿನ್ನೂ ಮರೆತಿರುವುದಿಲ್ಲ !

ಜೀಜೀಯು ಹೊರಟು ಹೋದ ಬಳಿಕ ನಿಸ್ತಬ್ಧ ರಾತ್ರಿಗಳಲ್ಲಿ ನನ್ನ ಕಂಬನಿಗಳಿಂದ ನನ್ನ ದಿಂಬು ತೊಯ್ದು ಹೋಗಿರುವುದು ಮತ್ತು ಮನದಲ್ಲಿ ಎಷ್ಟೋ ಸಲ ಎಂದುಕೊಂಡಿರುವೆ— ಜೀಜೀ, ನಾನಿನ್ನು ಏನನ್ನೂ ಯೋಚಿಸಬೇಕಾಗಿಲ್ಲ. ನಿನ್ನ ಪಾರಸ-ಮಣಿಯ ಸ್ಪರ್ಶದಿಂದ ನನ್ನ ಅಂತರ-ಬಾಹ್ಯವೆಲ್ಲವೂ ಚಿನ್ನವಾಗಿರುವುದು ಇನ್ನು ಹನಿ-ನೀರಿನ ಪರಿಣಾಮವಾಗಿ ಅದಕ್ಕೆ ಜಂಗು ಹತ್ತುವ ಭಯವಿಲ್ಲ ಆದರೆ, ಜೀಜೀ! ನೀನೆಲ್ಲಿಗೆ ಹೋದೆ? ಜೀಜೀ, ನಾನಾರಿಗೂ ನನ್ನ ಈ ಸೌಭಾಗ್ಯದ ಭಾಗವನ್ನು ಕೊಡದಾಗಿರುವೆ, ಮತ್ತಾರೂ ನಿನ್ನನ್ನು ಗುರತಿಸದಾದರು! ಇಲ್ಲದೆ ಹೋಗಿದ್ದರೆ ನಿನ್ನ ಸಾನ್ನಿಧ್ಯದಿಂದ, ದರ್ಶನದಿಂದ ಪ್ರತಿಯೊಬ್ಬ ವ್ಯಕ್ತಿಯೂ ಸಚ್ಚರಿತ್ರ ಸಾಧುವು ಆಗುತಿದ್ದನೆಂಬುದರಲ್ಲಿ ಸಂದೇಹವಿಲ್ಲ. 'ಇದು ಸಂಭವವಾಗಬಲ್ಲುದೆ?' ಎಂಬ ಮಾತನ್ನು ಹಗಲು ರಾತ್ರಿ ಮಕ್ಕಳಂತೆ ಯೋಚಿಸಿ ಯೋಚಿಸಿ ಕಳೆದಿರುವೆ ದೇವೀ ಚೌಧರಾಣಿಯಂತೆ ನನಗೆಲ್ಲಾದರೂ ಏಳು ಕೊಡ ಹೊನ್ನು ದೊರೆತಿದ್ದರೆ ಅನ್ನದಾ ಜೀಜೀಯ ಸೇವೆಯಲ್ಲಿ ಅರ್ಪಿಸುತಿದ್ದೆ, ಆಕೆಯನ್ನು ಒಂದು ದೊಡ್ಡ ಸಿಂಹಾಸನದ ಮೇಲೆ ಕುಳ್ಳಿರಿಸುತ್ತಿದ್ದೆ, ಅಡವಿಗಳನ್ನು ಕಡಿದು ಹಸನಮಾಡಿ ಸಿಂಹಾಸನವನ್ನೇರ್ಪಡಿಸಿ ಜನರನ್ನು ಕರೆದುಕೊಂಡು ಬಂದು ಅದರ ಸುತ್ತು ಮುತ್ತಲೂ ಕುಳ್ಳಿರಿಸುತ್ತಿದ್ದೆ ಎಂದು ಯೋಚಿಸುತ್ತಿರುವೆ. ಒಂದು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಇಡಿ ಜಗತ್ತಿನಲ್ಲಿ ಆಕೆಯನ್ನು ತಿರುಗಿಸಿಕೊಂಡು ಬರುತ್ತಿದ್ದೆ ಎಂದೂ ಯೋಚಿಸುತ್ತಿರುವೆ. ಹೀಗೆ ಅದೆಷ್ಟೋ ಆಕಾಶ ಕುಸುಮಗಳ ಮಾಲೆಯನ್ನು ನಾನು ಹೆಣೆದಿರುವೆ. ಈಗ ಅವುಗಳ ನೆನಹು ಬಂದಾಗ ನಗೆಯು ಬರುವುದು; ಆದರೆ ಅದರೊಡನೆಯೆ ಕಂಬನಿಗಳೂ ಕಡಮೆ ಹರಿಯುವುದಿಲ್ಲ.

ನನ್ನನ್ನು ಮುಗ್ಧ ಮಾಡುವಂತಹ ನಾರಿಯು ಈ ಜಗತ್ತಿನಲ್ಲಿ ಇಲ್ಲ ಎಂಬ ವಿಶ್ವಾಸವು ಆಗ ನನ್ನ ಹೃದಯದಲ್ಲಿ ಹಿಮಾಚಲದಂತೆ ದೃಢವಾಗಿ ಕುಳಿತುಬಿಟ್ಟಿದ್ದಿತು. ಪರಲೋಕದಲ್ಲಾದರೂ ಇರಬಹುದೆಂಬುದನ್ನು ಸಹ ಕಲ್ಪಿಸಲಾರದವನಾಗಿದ್ದೆ! ಜೀವನದಲ್ಲಿ ಎಂದಾದರೂ ಯಾರ ಬಾಯಿಂದಾದರೂ ಇಂತಹ ಕೋಮಲ ನುಡಿ, ತುಟಿಗಳಲ್ಲಿ

ಮಧುರ ನಗು, ನಗೆಯ ಮೇಲೆ ಅಲೌಕಿಕ ತೇಜ, ಕಣ್ಣುಗಳಲ್ಲಿ ಸಜಲ ಕರುಣ ದೃಷ್ಟಿ ಕಂಡರೆ ಮಾತ್ರ ಆಕೆಯ ಕಡೆಗೆ ನಾನು ಕಣ್ಣೆತ್ತಿ ನೋಡುವೆನೆಂದು ಯೋಚಿಸುತ್ತಿದ್ದೆ ನಾನಾರಿಗೆ ನನ್ನ ಮನಸ್ಸನ್ನು ಅರ್ಪಿಸುವೆನೊ ಆಕೆಯೂ ಜೀಜೀಯಂತೆಯೆ ಸತಿಯಾಗಿರುವಳು, ಸಾಧ್ವಿಯಾಗಿರುವಳು, ಆಕೆಯಿಂದ ಹೆಜ್ಜೆ ಹೆಜ್ಜೆಗೂ ಅನಿರ್ವಚನೀಯ ಮಹಿಮೆಯು ಹೊರ ಹೊಮ್ಮುವುದು; ಜೀಜೀಯಂತೆಯೆ ಆಕೆಯೂ ಸಮಸ್ತ ಸಂಸಾರದ ಸುಖ-ದುಃಖ, ಸಮಸ್ತ ಒಳಿತು ಕೆಡಕು, ಸಮಸ್ತ ಧರ್ಮ-ಅಧರ್ಮ ತ್ಯಾಗಮಾಡಿ ಗ್ರಹಿಸಬಲ್ಲಳು ಎಂದೂ ಯೋಚಿಸುತ್ತಿದೆ

ನಾನು ಅವನೇ ಇರುವೆ! ಆದಾಗ್ಯೂ ಈ ದಿನ ಎಚ್ಚರವಾದೊಡನೆಯೆ ಯಾರದೋ ಮುಖದ ವಾಣಿ, ಮಂದ ಹಾಸ, ಕಂಬನಿಯು ನೆನಪಿಗೆ ಬಂದು ಹೃದಯದ ಏಕಾಂತದಲ್ಲಿ ಪೀಡೆಯನ್ನುಂಟುಮಾಡಿತು. ನನ್ನ ಸಂನ್ಯಾಸಿನಿ ಜೀಜೀಯೊಡನೆ ಆಕೆಯ ಹೋಲಿಕೆಯು ತಿಲಮಾತ್ರವಾದರೂ ಇದ್ದಿತೇ? ಆದರೆ ಹಾಗೆಯೆ ತೋರಿತು! ಆರೇಳು ದಿನಗಳ ಹಿಂದೆ ಅಂತರ್ಯಾಮಿ ಪರಮಾತ್ಮನು ಬಂದು ಇದನ್ನು ಹೇಳಿದ್ದರೂ ನಾನು ನಕ್ಕು ಹಾರಿಸಿಬಿಡುತ್ತಿದ್ದೆ, ಮತ್ತು ಹೇಳುತ್ತಿದ್ದೆ "ಅಂತರ್ಯಾಮೀ! ಈ ಒಳ್ಳೆಯ ಹಾರೈಕೆಗಾಗಿ ನಿನಗೆ ಸಾವಿರಾರು ಧನ್ಯವಾದಗಳು! ಆದರೆ ನೀನು ನಿನ್ನ ಕೆಲಸವನ್ನು ನೋಡಿಕೊ, ನನ್ನ ಚಿಂತೆಯನ್ನು ಮಾಡುವ ಆವಶ್ಯಕತೆಯಿಲ್ಲ ನನ್ನ ಎದೆಯ ಒರೆಗಲ್ಲಿನ ಮೇಲೆ ಚೊಕ್ಕ ಬಂಗಾರ ತಿಕ್ಕಿದೆ, ಈಗ ಅಲ್ಲಿ ಹಿತ್ತಾಳೆಯ ಅಂಗಡಿಯನ್ನು ತೆರೆಯುವುದರಿಂದ ಗ್ರಾಹಕರು ಬರಲಾರರು."

ಆದರೂ ಗ್ರಾಹಕ ಬಂದ ನನ್ನ ಅಂತಃಕರಣದಲ್ಲಿ ಅನ್ನದಾ ಜೀಜೀಯ ಆಶೀರ್ವಾದದಿಂದ ನಿಜವಾದ ಚಿನ್ನವು ತುಂಬಿ ಹೋಗಿದ್ದಿತು, ಆದರೆ ಒಬ್ಬ ನತದೃಷ್ಟ ಹಿತ್ತಾಳೆಯ ಆಸೆಯನ್ನು ಬಿಡಲಿಲ್ಲ, ಅದನ್ನೇ ಕೊಂಡುಕೊಂಡ; ಇದು ಕಡಮೆ ಆಶ್ಚರ್ಯದ ಮಾತೇ!

ನಿಷ್ಠುರ ವಿಮರ್ಶಕರು ನನ್ನ ಆತ್ಮಕಥೆಯೊಳಗೆ ಇಲ್ಲಿ ಅಧೀರರಾಗಿ "ಇಷ್ಟು—ಉಬ್ಬಿಸಿ— ಅತಿರಂಜಿತ ಮಾಡಿ ನೀವು ಹೇಳಬಯಸುವುದಾದರೂ ಏನು? ಸ್ಪಷ್ಟವಾಗಿ—ಹೇಳಬಾರದೆ ಅವರು ಯಾರೆಂಬುದನ್ನು?

ಇವೊತ್ತು ಮಲಗಿ ಏಳುತ್ತಲೇ ಪ್ಯಾರಿಯ ಮುಖವನ್ನು ನೆನಸಿಕೊಂಡು ನೀವು—ಇಷ್ಟೊಂದು ವ್ಯಥಿತರಾಗಿದ್ದಿರಿ—ಅಲ್ಲವೆ? ಮನದ ಬಾಗಿಲಿಂದ ಹೊರಗೇ ಕಳಿಸುತ್ತಿದ್ದವಳನ್ನು ಇಂದು ಕರೆದು ಮನೆಯಲ್ಲಿಕುಳ್ಳಿರಿಸ ಬಯಸುತ್ತಿರುವಿರಿ—ಅಲ್ಲವೆ? ಸರಿ, ಇದೇ ಸರಿ. ಇದೇ ನಿಜವಾಗಿದ್ದಲ್ಲಿ ನೀವು ಮಧ್ಯಮಧ್ಯದಲ್ಲಿ ಅನ್ನದಾ ಜೀಜೀಯ ಹೆಸರನ್ನೆತ್ತಬೇಡಿರಿ. ಏಕೆಂದರೆ ನೀವು—ಎಷ್ಟೋ ಉಪ್ಪು ಕಾರ ಹಚ್ಚಿ ಬೆಳಸಿ ಹೇಳಿದರೂ ಪರವಾ ಇಲ್ಲ, ನನುಗೆ ಮಾನವ— ಚರಿತ್ರವು ಚೆನ್ನಾಗಿಗೊತ್ತಿದೆ ನಿಮ್ಮ ಮನದಲ್ಲಿ ಸತೀಸಾಧ್ವಿಯ ಆದರ್ಶವು ಸ್ಥಿರವಾಗುಳಿಯಲಿಲ್ಲ. ಆ ಆದರ್ಶನ ವನ್ನು ನೀವು ನಿಮ್ಮ ಸಂಪೂರ್ಣ ಶಕ್ತಿಯನ್ನೆಲ್ಲ ಉಪಯೋಗಿಸಿ ಸ್ಥಿರ ವಾಗಿಟ್ಟುಕೊಳ್ಳಲಾರದಾದಿರಿ. ಒಂದು ವೇಳೆ ಇಟ್ಟುಕೊಳ್ಳಲು ಸಮರ್ಥ ರಾಗಿದ್ದರೆ ನೀವು ಈ ಮಿಥ್ಯೆಯಲ್ಲಿ ನಿಮ್ಮನ್ನು ಮರೆತು ಬಿಡುತ್ತಿರಲಿಲ್ಲ ಎಂದು ನಾವು ಒತ್ತಿಹೇಳುತ್ತೇವೆ" ಎಂದು ಹೇಳಿಬಿಡುವರೆಂಬುದನ್ನು ನಾನು ಚೆನ್ನಾಗಿ ಬಲ್ಲೆ

ಇದು ನಿಜ ಇನ್ನು ನಾನು ತರ್ಕಿಸುವುದಿಲ್ಲ. ಮನುಷ್ಯನು ಕೊನೆಯವರೆಗೂ ತನ್ನ ಸಂಪೂರ್ಣ ಪರಿಚಯವನ್ನು ತಾನು ಮಾಡಿ ಕೊಳ್ಳಲಾರನೆಂಬುದನ್ನು ನಾನು ಅರಿತಿರುವೆ. ತಾನು ಏನಿಲ್ಲವೋ ಅದೇ ತಾನಾಗಿರುವೆನೆಂದು ತಿಳಿದುಕೊಳ್ಳುವನು ಮತ್ತು ಹೊರಗೆ ಅದರ ಪ್ರಚಾರ ಮಾಡಿ ಕೇವಲ ವಿಡಂಬನೆಯ ಸೃಷ್ಟಿಯನ್ನು ರಚಿಸುವನು. ಇದಕ್ಕಾಗಿ ಅವನು ಅನುಭೋಗಿಸಬೇಕಾದ ದಂಡವೂ ಕಡಮೆಯಾಗಿರ ವುದಿಲ್ಲ. ಆದರೆ ಇರಲಿ ಬಿಡಿರಿ, ನಾನು ಯಾವ ನಾರಿಯ ಆದರ್ಶವನ್ನು ಕುರಿತು 'ಪ್ರೀಚ್' (ಉಪದೇಶ) ಮಾಡುತ್ತ ತಿರುಗಿರುವೆನೆಂಬುದು ನನಗೆ ಗೊತ್ತುಂಟು. ಆದುದರಿಂದ ನನ್ನ ದುರ್ಗತಿಯ ಇತಿಹಾಸವನ್ನು ಕಂಡು ಓದಿ ಜನರು 'ಶ್ರೀಕಾಂತ ಹಂಬಗ್, ಹಿಪೋಕ್ರಿಟ್' ಎಂದು ಎನ್ನುವರು. ಅದನ್ನು ನಾನೇ ಆಲಿಸಬೇಕಾಗುವುದು. ಆದಾಗ್ಯೂ ನಾನು 'ಹಿಪೋಕ್ರಿಟ್' ಇರಲಿಲ್ಲ. 'ಹಂಬಗ್' ಮಾಡುವ ಸ್ವಭಾವವೂ ನನ್ನದಿಲ್ಲ ನನ್ನಲ್ಲಿದ್ದ ದುರ್ಬಲತೆಯು ತನ್ನನ್ನು ಮುಚ್ಚಿಕೊಂಡಿದ್ದಿ ತೆಂಬುದರ ಕಡೆಗೆ ನಾನು ಗಮನ ಕೊಡಲಿಲ್ಲ. ಇದೇ ನನ್ನ ಸ್ವಭಾವ,

ಆದು ಇಂದು ಸಮಯ ಸಾಧಿಸಿ ಪುನಃ ತನ್ನ ತಲೆಯನ್ನೆತ್ತಿ ನಿಂತಿತು ಮತ್ತು ತನ್ನಂತೆಯೇ ಇರುವ ಇನ್ನೊಂದು ದುರ್ಬಲತೆಯನ್ನು ಆದರ-ಪೂರ್ವಕವಾಗಿ ಬರಮಾಡಿಕೊಂಡು ತನ್ನ ಬಳಿಯಲ್ಲಿರಿಸಿಕೊಂಡಿತು; ಆಗ ಆಸಹ್ಯ ವಿಸ್ಮಯದಿಂದ ನನ್ನ ನಯನಗಳಿಂದ ನೀರುಹನಿಗಳು ಉದುರಿದವು ಅದಕ್ಕೆ 'ಹೋಗು ಬರಬೇಡ' ಎಂದು ಹೇಳಲಿಕ್ಕೆ ನನ್ನಿಂದಾಗಲಿಲ್ಲ ಈಗ ನಾನು ನಾಚಿಕೆಯಿಂದ ಮುಖ ಮುಚ್ಚಿಕೊಂಡು ಎಲ್ಲಾದರೂ ಇರಬೇಕೆಂದರೆ ಎಲ್ಲಿಯೂ ನನಗೆ ಸ್ಥಳವಿಲ್ಲ ಎಂಬುದನ್ನು ಬಲ್ಲೆ, ಆದರೆ ಹೃದಯದ ಪ್ರತಿಯೊಂದು ಮೂಲೆಮೂಲೆಯೂ ಇಂದು ಪರಿಪೂರ್ಣ ಪುಲಕಿತವಾಗಿದೆ ಏನು ಹಾನಿಯಾದರೂ ಆಗಲಿ, ಹೃದಯವು ಮಾತ್ರ ತ್ಯಜಿಸಲಿಚ್ಛಿಸುವುದಿಲ್ಲ!

"ಬಾಬೂಸಾಹೇಬರೇ!" ಎನ್ನುತ್ತ ರಾಜಕುಮಾರರ ಆಳುಮಗ ಬಂದ ಹಾಸಿಗೆಯ ಮೇಲೆ ನಾನು ಎದ್ದು ಕುಳಿತೆ. ಅವನು ಆದರದಿಂದ "ಕುಮಾರ ಸಾಹೇಬರೂ ಮತ್ತು ಇನ್ನೂ ಎಷ್ಟೋ ಜನರು ತಮ್ಮ ನಿನ್ನೆ ರಾತ್ರಿಯ ಕತೆಯನ್ನು ಕೇಳಲು ಉತ್ಸುಕರಾಗಿ ತಮ್ಮ ದಾರಿ ಕಾಯುತ್ತ ಕುಳಿತಿರುವರು" ಎಂದ "ಅವರಿಗೆ ಹೇಗೆ ಗೊತ್ತಾಯಿತು?" ಎಂದು ನಾನು ಕೇಳಿದೆ ಆಳುಮಗನೆಂದ "ತಂಬೂದ ಕಾವಲುಗಾರನು ತಾವು ರಾತ್ರಿಯ ಕೊನೆಯ ಭಾಗದ ಕೊನೆಯಲ್ಲಿ ತಿರುಗಿ ಬಂದಿರೆಂದು ಹೇಳಿದ"

ಮುಖ ತೊಳೆದುಕೊಂಡು ಬಟ್ಟೆಗಳನ್ನು ಬದಲುಮಾಡಿಕೊಂಡು ತಂಬೂದೊಳಗೆ ಹೋದಕೂಡಲೆ ಎಲ್ಲರೂ ಒಮ್ಮೆಲೆ ಗದ್ದಲ ಮಾಡಿದರು ಒಮ್ಮೆಗೆ ಒಂದು ಲಕ್ಷ ಪ್ರಶ್ನೆ ಮಾಡಿದಂತೆ ತೋರಿತು ಆ ಮುದುಕರು ಅಲ್ಲಿರುವುದನ್ನೂ ಪ್ಯಾರಿಯು ತನ್ನ ಸಂಗಡಿಗರೊಡನೆ ಒಂದು ಕಡೆಯಲ್ಲಿ ಸುಮ್ಮಗೆ ಕುಳಿತಿರುವುದನ್ನೂ ಕಂಡೆ. ದಿನದಂತೆ ಆಕೆಯೊಡನೆ ಇಂದು ನಯನಮಿಲನವಾಗಲಿಲ್ಲ ಆಕೆಯು ಬೇಕೆಂತಲೇ ಬೇರೊಂದೆಡೆಗೆ ಮುಖ ತಿರುಗಿಸಿಕೊಂಡು ಕುಳಿತಿದ್ದಳು.

ಉತ್ಕಂಠತೆಯಿಂದ ತುಂಬಿದ ಪ್ರಶ್ನೆಗಳ ಸುರಿಮಳೆಯು ಕಡಿಮೆಯಾದೊಡನೆಯೇ ನಾನು ಉತ್ತರವೀಯತೊಡಗಿದೆ. ರಾಜಕುಮಾರರು

ಅಂದರು "ಧನ್ಯ ನಿನ್ನ ಸಾಹಸ ಶ್ರೀಕಾಂತ! ಎಷ್ಟು ರಾತ್ರಿಗೆ ಅಲ್ಲಿಗೆ ಹೋಗಿದ್ದೆ?"

"ಹನ್ನೆರಡು ಮತ್ತು ಒಂದು ಗಂಟೆಯ ನಡುವೆ."

ಮುದುಕರು ನುಡಿದರು "ಘೋರ ಅಮಾವಾಸ್ಯೆ! ಹನ್ನೊಂದು ವರೆಯ ನಂತರ ಅಮಾವಾಸ್ಯೆಯು ಬಂದಿದ್ದಿತು."

ನಾಲ್ಕೂ ಕಡೆಗಳಿಂದ ಎದ್ದ ಆಶ್ಚರ್ಯಸೂಚಕ ದನಿಯು ಕಡಿಮೆಯಾದ ಬಳಿಕ ಪುನಃ ರಾಜಕುಮಾರರು ಕೇಳಿದರು "ಬಳಿಕ ಏನನ್ನು ನೋಡಿದೆ?"

"ದೂರದ ವರೆಗೆ ಹರವಿದ್ದ ಅಸ್ಥಿಪಂಜರ ಮತ್ತು ತಲೆ ಬುರುಡೆ."

"ಓಃ, ಎಂತಹ ಭಯಾನಕ ಸಾಹಸ! ಸ್ಮಶಾನದ ನಡುವೆ ಹೋಗಿದ್ದೆಯೋ ಹೊರಗೇ ನಿಂತಿದ್ದೆಯೋ?"

"ನಡುವೆ ಹೋಗಿ ಒಂದು ಉಸುಕಿನ ದಿನ್ನೆಯ ಮೇಲೆ ಕುಳಿತಿದ್ದೆ."

"ಆಮೇಲೆ— ಆಮೇಲೆ? ಕುಳಿತು ಏನನ್ನು ನುಡಿದೆ?"

"ಉಸುಕಿನ ದಿನ್ನೆಯು ಸೊಂಯ್ ಸೊಂಯ್ ಮಾಡುತ್ತಿದ್ದಿತು!

"ಆಮೇಲೆ?"

"ಬಿದರಿನ ಮೆಳೆ ಮತ್ತು ಆರಳೆಯ ಮರವನ್ನು ನೋಡಿದೆ."

"ಆಮೇಲೆ?"

"ನದಿಯ ನೀರು."

ಕುಮಾರರು ಅಧೀರರಾಗಿ "ಇದೆಲ್ಲವೂ ಸರಿ, ಅದನ್ನೆ—ನೋಡಿದೆಯೇನು?" ಎಂದು ಕೇಳಿದರು.

ನಾನು ನಕ್ಕು "ಒಂದೆರಡು ತೊಗಲಬಾವಲಿಗಳು ತಲೆಯ ಮೇಲೆ ಹಾರಿ ಹೋಗುವುದನ್ನು ನೋಡಿದ್ದೆ" ಎಂದು ಹೇಳಿದೆ.

ಮುದುಕರು ಆಗ ಸ್ವತಃ ಮುಂದಕ್ಕೆ ಬಂದು "ಮತ್ತೇನನ್ನೂ ನೋಡಲಿಲ್ಲವೇ?" ಎಂದು ಕೇಳಿದರು.

"ಇಲ್ಲ"

ಈ ಉತ್ತರವನ್ನು ಕೇಳಿ ತಂಬೂದೊಳಗಿನವರೆಲ್ಲರೂ ನಿರಾಶರಾದಂತಾದರು. ಆಗ ಮುದುಕರು ಕೋಪಾವಿಷ್ಟರಾಗಿ "ಹೀಗೆಂದಿಗೂ

ಇರಲಿಕ್ಕಿಲ್ಲ. ತಾವು ಹೋಗೇ ಇಲ್ಲ " ಎಂದರು. ಅವರ ಸಿಟ್ಟನ್ನು ಕಂಡು ಕೇವಲ ನಕ್ಕುಬಿಟ್ಟೆ. ಆದರೆ ನನ್ನ ಮಾತೇ ಅವರಿಗೆ ಕೋಪ ತರಿಸುವಂತಿದ್ದಿತು ಕುಮಾರರು ನನ್ನ ಕೈ ಒತ್ತಿ ಪ್ರಾರ್ಥನೆಯ ದನಿಯಲ್ಲಿ "ನಿನಗೆ ನನ್ನಾಣೆ ಶ್ರೀಕಾಂತ, ಏನೇನನ್ನು ನೋಡಿದೆಯೆಂಬುದನ್ನು ನಿಜ ನಿಜ ಹೇಳು" ಎಂದರು

"ನಿಜವನ್ನೇ ಹೇಳುವೆ— ಏನನ್ನೂ ನೋಡಲಿಲ್ಲ"

"ಎಷ್ಟು ಹೊತ್ತು ಇದ್ದೆ ಅಲ್ಲಿ?"

"ಮೂರು ಗಂಟೆ ಕಾಲ"

"ಏನನ್ನೂ ನೋಡಲಿಲ್ಲ, ಏನನ್ನೂ ಕೇಳಲಿಲ್ಲ?"

"ಕೇಳಿದೆ"

ಕ್ಷಣಮಾತ್ರದಲ್ಲಿ ಸರ್ವರ ಉತ್ಸಾಹವು ಪ್ರದೀಪ್ತವಾಯಿತು ಏನನ್ನು ಕೇಳಿದೆನೆಂಬುದನ್ನು ಆಲಿಸಲಿಕ್ಕೆ ಎಲ್ಲರೂ ಮುಂದಕ್ಕೆ ಸರಿದು ಬಂದರು. ಆಗ ನಾನು ಯಾವ ರೀತಿಯಾಗಿ ಆ ಹಕ್ಕಿಯು ಹಾರಿತು, ಒಂದು ಪಕ್ಷಿಯ ಮರಿಯು ಮಾನವ ಶಿಶುವಿನಂತೆ ಹೇಗೆ ಬಿಕ್ಕಿ-ಬಿಕ್ಕಿ ಅಳ ತೊಡಗಿತು, ಒಮ್ಮೆಗೆ ಹೇಗೆ ಬಿರುಗಾಳಿಯೆದ್ದಿತು, ಮೃತ ಮನುಷ್ಯರ ತಲೆಬುರುಡೆಗಳು ನೀಳವಾದ ಉಸಿರನ್ನು ಬಿಡತೊಡಗಿದುವು; ಕೊನೆಯಲ್ಲಿ ನನ್ನ ಬೆನ್ನಹಿಂದೆ ಒರ್ವ ನಿಂತುಕೊಂಡು ತನಿಯುಸಿರನ್ನು ಹೇಗೆ ಬಲಗಿವಿಯಲ್ಲಿ ಬಿಡುತ್ತಿದ್ದ—ಎಂಬುದನ್ನು ಹೇಳತೊಡಗಿದೆ ನಾನು ಹೇಳುವುದು ಮುಗಿಯಿತು. ಸ್ವಲ್ಪ ಹೊತ್ತು ಯಾರ ಬಾಯಿಂದಲೂ ಒಂದು ಶಬ್ದವೂ ಹೊರಬೀಳಲಿಲ್ಲ. ಇಡಿ ತಂಬೂ ನಿಸ್ತಬ್ಧವಾಗಿದ್ದಿತು. ಬಳಿಕ ಆ ಮುದುಕರು ನನ್ನ ಬೆನ್ನ ಮೇಲೆ ಕೈಯಿಟ್ಟು ಮೆಲ್ಲಗೆ "ಬಾಬೂಜೀ, ನಿಜವಾಗಿಯೂ ತಾವು ಬ್ರಾಹ್ಮಣರ ಮಕ್ಕಳು, ಆದುದರಿಂದಲೇ ಪ್ರಾಣ ಉಳಿಸಿಕೊಂಡು ಹಿಂತಿರುಗಿ ಬಂದಿರಿ. ಮತ್ತಾರಾದರೂ ಆಗಿದ್ದರೆ ಬದುಕಿ ಬರುವುದೇ ಕಷ್ಟವಾಗಿದ್ದಿತು ಆದರೆ ಇನ್ನು ಮೇಲೆ ಇಂತಹ ದುಃಸಾಹಸದ ಕಾರ್ಯ ಮಾಡಬೇಡಿರಿ, ನನ್ನಾಣೆಯಿದೆ. ತಮ್ಮ ತಂದೆತಾಯಂದಿರ ಚರಣಕಮಲಗಳಲ್ಲಿ ನನ್ನ ಕೋಟಿ-ಶತಕೋಟಿ ಪ್ರಣಾಮಗಳು! ತಾವು

ಕೇವಲ ಅವರ ಪುಣ್ಯಪ್ರತಾಪದಿಂದ ಬದುಕಿ ಉಳಿದಿರುವಿರಿ" ಎಂದವರೇ ಕೂಡಲೆ ನನ್ನ ಚರಣ ಸ್ಪರ್ಶ ಮಾಡಿದರು.

ನಾನು ಈ ಮೊದಲೇ ಈ ಮುದುಕರು ಬಹಳ ಮಾತನಾಡುವವರು ಎಂದು ಹೇಳಿರುವೆ. ಪುನಃ ಅವರು ಕಣ್ಣಾಲಿಗಳನ್ನೂ ಹುಬ್ಬುಗಳನ್ನೂ ಒಮ್ಮೊಮ್ಮೆ ಹಿಗ್ಗಿಸಿ, ಒಮ್ಮೊಮ್ಮೆ ತಗ್ಗಿಸಿ ಒಮ್ಮೊಮ್ಮೆ ಮುಚ್ಚಿ, ಒಮ್ಮೊಮ್ಮೆ ಪ್ರಜ್ವಲಗೊಳಿಸಿ ಪಕ್ಷಿಯ ಮರಿಯು ಅಳುವುದನ್ನು ಮೊದಲುಗೊಂಡು ನನ್ನ ಕಿವಿಯ ಮೇಲೆ ತನಿಯುಸಿರು ಬಿಟ್ಟ ವ್ಯಕ್ತಿಯ ವರೆಗಿನ ಕತೆಯನ್ನು ಸೂಕ್ಷ್ಮಾತಿಸೂಕ್ಷ್ಮ ವ್ಯಾಖ್ಯೆಯನ್ನು ಮಾಡುತ್ತ ಹಗಲಲ್ಲಿಯೂ ಇಷ್ಟು ಜನಗಳ ಮೈಮೇಲ ಮುಳ್ಳು ಬರುವಂತೆ— ವರ್ಣಿಸಿದಾಗ ನನ್ನ ಮೈನವಿರುಗಳೂ ನಿಮಿರಿ ನಿಂತುವು. ನಿನ್ನೆ ಮುಂಜಾನೆ ಯಂತೆಯೆ ಪ್ಯಾರಿಯು ಯಾವಾಗ ಸುಮ್ಮಗೆ ಸರಿದು ನನ್ನ ಹತ್ತಿರ ಬಂದು ಕುಳಿತಿದ್ದಳೊ ! ಆಕೆಯ ಉಸಿರೊಂದು ತಟ್ಟಿದೊಡನೆ ನಾನು ತಿರುಗಿ ನೋಡಿದೆ ಆಕೆಯು ರೆಪ್ಪೆಯನ್ನು ಕೂಡ ಬಡೆಯದೆ ಆ ಮುದಕರ ಕಡೆಗೆ ನೋಡುತ್ತ ಕುಳಿತಿದ್ದಳು, ಆಕೆಯ ಎರಡೂ ಕೋಮಲ ಕೆನ್ನೆಗಳ ಮೇಲಿಂದ ಹರಿದ ಕಂಬನಿಗಳು ಬತ್ತಿ ಹೋಗಿದ್ದುವು. ಯಾವಾಗ, ಏತಕ್ಕೋಸ್ಕರ ಆ ಕಂಬನಿಗಳು ಹರಿದುದ್ದುವೆಂಬುದು ಆಕೆಗೆ ತಿಳಿದಿರಲಿಲ್ಲ, ಇಲ್ಲದೆ ಹೋಗಿದ್ದರೆ ಅವನ್ನು ಒರಿಸಿಕೊಂಡು ಬಿಡುತ್ತಿದ್ದಳು ಆ ಅಶ್ರುಕಲುಷಿತ ತಲ್ಲೀನ ಮುಖವನ್ನು ನೋಡುತ್ತಲೇ ಅದು ನನ್ನ ಹೃದಯದಲ್ಲಿ ಒಂದು ಅಗ್ನಿರೇಖೆಯನ್ನು ಅಂಕಿತಮಾಡಿಬಿಟ್ಟಿತು ಮಾತು ಮುಗಿಯುತ್ತಲೇ ಎದ್ದುನಿಂತು ರಾಜಕುಮಾರರಿಗೆ ನಮಸ್ಕಾರ ಮಾಡಿ, ಅವರ ಅನುಮತಿಯನ್ನು ಪಡೆದುಕೊಂಡು ಮೆಲ್ಲಮೆಲ್ಲಗೆ ಹೊರಗೆ ಹೊರಟುಹೋದಳು.

ಇವೊತ್ತು ನಾನು ಬೆಳಿಗ್ಗೆ ಹೊರಡಬೇಕಾಗಿದ್ದಿತು, ಆದರೆ ಮೈಯಲ್ಲಿ ಸ್ವಲ್ಪ ಅಸ್ವಸ್ಥತೆಯಿದ್ದುದರಿಂದ ಕುಮಾರರ ಒತ್ತಾಯವನ್ನು ಮನ್ನಿಸಿ ನಾನು ಹೊರಡುವುದನ್ನು ನಿಲ್ಲಿಸಿ ನನ್ನ ತಂಬೂಕ್ಕೆ ತಿರುಗಿಹೋದೆನು. ಇಷ್ಟು ದಿವಸಗಳು ಕಳೆದು ಹೋದ ಬಳಿಕ ಈ ದಿನ ಪ್ಯಾರಿಯ ಮುಖದ

ಮೇಲೆ ಮತ್ತು ಆಚರಣೆಯಲ್ಲಿ ನಾನು ಒಂದು ಬೇರೆ ರೀತಿಯ ಭಾವವನ್ನು ಕಂಡೆ. ಇಷ್ಟು ದಿನಗಳ ವರೆಗೆ ಆಕೆಯು ಪರಿಹಾಸಮಾಡಿರುವಳು, ವ್ಯಂಗ್ಯವಾಗಿ ಮಾತನಾಡಿರುವಳು, ಕಲಹ ಮಾಡಬೇಕೆಂಬಾಸೆಯು ಆಕೆಯ ನಯನಗಳಲ್ಲಿ ಕಂಡುಬರುತ್ತಿದ್ದಿತು. ಇದೆಲ್ಲವನ್ನು ನಾನು ಬಲ್ಲೆ ಆದರೆ ಈ ದಿನ ಇರುವಷ್ಟು ಉದಾಸೀನತೆಯನ್ನು ನಾನು ಆಕೆಯಲ್ಲಿ ಈ ಮೊದಲು ಎಂದೂ ಕಂಡಿರಲಿಲ್ಲ ಆದಾಗ್ಯೂ ನಾನು ವ್ಯಥಿತನಾಗದೆ ಸಂತೋಷಿತನಾದೆ. ಏಕೆಂಬುದೂ ನನಗೆ ಗೊತ್ತು ಯುವತಿಯರ ಮನದ ಗತಿ-ವಿಧಿಯನ್ನು ಎತ್ತಿಕೊಂಡು ಚರ್ಚಿಸುವುದು ನನ್ನ ಉದ್ಯೋಗವಲ್ಲ; ಅಲ್ಲದೆ ನಾನು ಈ ರೀತಿಯಾಗಿ ಎಂದೂ ಮಾಡಿಲ್ಲ ಆದರೆ ನನ್ನ ಮನದಲ್ಲಿ ಅನೇಕ ಜನಗಳಲ್ಲಿ ಅಖಂಡ ಧಾರಾವಾಹಿಯಾಗಿ ಹರಿಯುತ್ತಿರುವ ಒಂದು ವಸ್ತುವಿನ ದರ್ಶನವು ನನಗಾಗಿರುವುದರಿಂದ ರಮಣೀಹೃದಯದ ಗೂಢ ತಾತ್ಪರ್ಯವು ಸ್ಪಷ್ಟವಾಗಿ ಬೆಳಗಿತು. ಇದರಿಂದ ನನ್ನ ಮನಸ್ಸು ಪ್ಯಾರಿಯ ಆಚರಣೆಯಿಂದ ಅಪಮಾನಿತವಾಗಲಿಲ್ಲ. ಆದರೆ ಅದು ಪ್ರಣಯದ ಅಭಿಮಾನವೆಂದು ತಿಳಿದು ಪುಳಕಿತವಾಯಿತು. ಬಹುಶಃ ಇದೇ ಗುಪ್ತವಾಗಿ ಹರಿಯುವ ಪ್ರಣಯದ ಸನ್ನೆಯಿಂದ ಆಕೆಯು ನಿನ್ನೆ ನನ್ನನ್ನು ಶ್ಮಶಾನದಿಂದ ಕರೆದುಕೊಂಡು ಬರಲು ಆಳುಮಕ್ಕಳನ್ನು ಕಳಿಸಿದ್ದಳೆಂಬ ಮಾತನ್ನು ನಾನು ನನ್ನ ಶ್ಮಶಾನಯಾತ್ರೆಯ ಇತಿಹಾಸ ದಲ್ಲಿ ಇಷ್ಟೊತ್ತಿನ ವರೆಗೆ ಹೇಳಲಿಲ್ಲ ಮತ್ತು ಆಕೆಯು ಮಾತು ಮುಗಿಯು ವುದಕ್ಕೆ ಮೊದಲೇ ಹೊರಗೆ ಹೋಗಿಬಿಟ್ಟಿದ್ದಳು. ಇದಕ್ಕೋಸ್ಕರವಾಗಿಯೆ ಇಷ್ಟು ಅಭಿಮಾನ! ನಿನ್ನೆ ರಾತ್ರಿ ನಾನು ತಿರುಗಿ ಬಂದಬಳಿಕ ಆಕೆಯನ್ನು ಕಂಡು ಅಲ್ಲಿ ಏನೇನು ಜರುಗಿತೆಂಬುದನ್ನು ಹೇಳಲಿಲ್ಲ. ಎಲ್ಲರಿಗಿಂತ ಮೊದಲು ತಾನೊಬ್ಬಳೇ ಕುಳಿತುಕೊಂಡು ಕೇಳುವ ಅಧಿಕಾರ ವುಳ್ಳ ಆಕೆಯು ಇವೊತ್ತು ಎಲ್ಲರಿಗಿಂತ ಹಿಂದೆ ಕುಳಿತುಕೊಂಡು ನಿರ್ವಾಹ ವಿಲ್ಲದೆ ಕೇಳಬೇಕಾಯಿತು ಆದರೆ ಅಭಿಮಾನವೂ ಎಷ್ಟು ಸಿಹಿ ಯಾಗಿರುವುದು !— ಜೀವನದಲ್ಲಿ ಅದರ ರುಚಿಯನ್ನು ಮೊಟ್ಟಮೊದಲು ಪಡೆದುಕೊಂಡು ಒಂದು ಏಕಾಂತ ಸ್ಥಳದಲ್ಲಿ ಕುಳಿತು, ಮಕ್ಕಳಂತೆ ಪುನಃ ಪುನಃ ಅದರ ರುಚಿಯನ್ನು ನೋಡತೊಡಗಿದೆ.

ಈ ದಿನ ಮಧ್ಯಾಹ್ನ ನಾನು ನಿದ್ರಿಸಬೇಕೆನ್ನುತ್ತಿದ್ದೆ, ಹಾಸಿಗೆಯ ಮೇಲೆ ಬಿದ್ದುಕೊಂಡುದರಿಂದ ತೂಕಡಿಕೆಯೂ ಬರುತ್ತಿದ್ದಿತು. ಆದರೆ ರತನನು ಬರಬಹುದೆಂಬ ಆಸೆಯು ನಿದ್ರಾಭಂಗ ಮಾಡುತ್ತಿದ್ದಿತು. ಹೀಗೆ ಸಮಯವು ಕಳೆಯಿತು. ಆದರೆ ರತನ ಬರಲಿಲ್ಲ ರತನ ಅವಶ್ಯವಾಗಿ ಬರುವನೆಂಬ ದೃಢವಿಶ್ವಾಸದಿಂದ ನಾನು ಎದ್ದು ಹೊರಗೆ ಹೋದೆ. ಆಗ ಸೂರ್ಯ ಪಡುವಣ ದಿಕ್ಕಿನ ಕಡೆಗೆ ನಡೆದಿದ್ದ. ರತನ ನಾನು ತೂಕಡಿಕೆಯಲ್ಲಿರುವಾಗ ಬಂದು ಹೋಗಿರಬಹುದು ಎಂದು ಮನದಲ್ಲಿಯೇ ಎಂದುಕೊಂಡೆ. ಮೂರ್ಖ! ಒಂದು ಬಾರಿ ಕೂಗಿದ್ದರೇನಾಗುತ್ತಿದ್ದಿತೋ! ಮಧ್ಯಾಹ್ನದ ನಿರ್ಜನ ವೇಳೆಯು ವ್ಯರ್ಥವಾಗಿ ಕಳೆದುಹೋಯಿತಲ್ಲ ಎಂದು ನಾನು ಸ್ವಲ್ಪ ಕೋಪಿಸಿಕೊಂಡೆ. ಆದರೇನು? ಪುನಃ ರತನ ಸಾಯಂಕಾಲಕ್ಕಾದರೂ ಬರಬಹುದೆಂದು ಯೋಚಿಸಿ ಸಮಾಧಾನ ಹಚ್ಚಿಕೊಂಡೆ ಅವನು ಬಂದು ವಿನಯದಿಂದ ಕರೆದುಕೊಂಡು ಹೋಗುವ. ಇಲ್ಲವೆ ಒಂದು ಚೀಟಿಯನ್ನು ಕೈಯಲ್ಲಿತ್ತುಹೋಗುವ—ಎಂಬುದರಲ್ಲಿ ನನಗೆ ಇನಿತೂ ಸಂದೇಹವಿರಲಿಲ್ಲ. ಆದರೆ ವೇಳೆಯು ಹೇಗೆ ಹೋಗಬೇಕು? ಎದುರಿಗೆ ನೋಡುತ್ತಲೇ ಸ್ವಲ್ಪ ದೂರದಲ್ಲಿ ನನಗೆ ಜಲರಾಶಿಯು ನನ್ನ ಕಣ್ಣೆದುರು ಕಾಣಿಸಿತು. ಅದು ಒಬ್ಬ ಮರೆತುಹೋದ ಜಮೀನದಾರನ ವಿಶಾಲಯಶದ ಕುರುಹಾಗಿದ್ದಿತು. ಆ ಕೆರೆಯು ಸುಮಾರು ಒಂದೂವರೆ ಮೈಲು ವಿಸ್ತೀರ್ಣವಾಗಿದ್ದಿತು. ಉತ್ತರದಿಕ್ಕಿನ ಕಡೆಗಿರುವ ಸ್ವಲ್ಪ ಭಾಗವು ಹೂಗಿದುಹೋಗಿದ್ದಿತು ಮತ್ತು ಅದು ಕಾಡಿನಿಂದ ಕಾಣದಾಗಿದ್ದಿತು ಊರ ಹೊರಗೆ ಇದ್ದುದರಿಂದ ಊರಿನ ಹೆಂಗಸರಿಗೆ ಅದರ ನೀರಿನ ಉಪಯೋಗವಾಗುತ್ತಿರಲಿಲ್ಲ. ಮಾತು ಮಾತಿನಲ್ಲಿ ಅದನ್ನು ಯಾರು ಕಟ್ಟಿಸಿದ್ದರು, ಎಷ್ಟು ಹಳೆಯದು ಎಂಬ ಮಾತು ಯಾರಿಗೂ ಗೊತ್ತಿಲ್ಲ ಎಂಬುದನ್ನು ಅರಿತುಕೊಂಡಿದ್ದೆ. ಹಳೆಯ ಘಟ್ಟವಿದ್ದಿತು ಅಲ್ಲಿಗೆ ಹೋಗಿ ಒಂದು ಏಕಾಂತ ಸ್ಥಾನದಲ್ಲಿ ಕುಳಿತೆ ಇದರ ಸುತ್ತಲೂ ಇದ್ದ ಹಳ್ಳಿಯು ಯಾವಾಗಲೂ ಕಾಲರಾ ಮತ್ತು ಪ್ಲೇಗಿನಿಂದ ಹಾಳಾಗಿ ಹೋದಂತೆಯೂ ಈಗ ನಾನಿದ್ದ ಸ್ಥಾನದಲ್ಲಿ ಹಳ್ಳಿಯು ಸರಿದು ನಿಂತಂತೆಯೂ ತೋರಿತು ಪರಿತ್ಯಕ್ತ ಮನೆಗಳ ಕುರುಹುಗಳು ಅಲ್ಲಲ್ಲಿ ಇವೆ. ಮುಳುಗುವ ಸೂರ್ಯನ

ಕಿರಣಗಳ ಕಾಂತಿಯು ಕೆರೆಯ ಕಪ್ಪು ನೀರಿನ ಮೇಲೆ ಬಂಗಾರವನ್ನು ಬಳೆಯಿತು. ನಾನದನ್ನು ಎವೆಯಿಕ್ಕದೆ ನೋಡುತ್ತಿದ್ದೆ.

ಬಳಿಕ ಸೂರ್ಯ ಮೆಲ್ಲಮೆಲ್ಲಗೆ ಮುಳುಗಿದ. ಕೆರೆಯ ಕಪ್ಪು ನೀರು ಇನ್ನೂ ಕಪ್ಪಾಯಿತು. ಬಳಿಯ ಅಡವಿಯೊಳಗಿಂದ ನರಿಗಳು ಅಂಜುತ್ತ ಅಂಜುತ್ತ ಹೊರಬಿದ್ದು ಬಂದು ನೀರು ಕುಡಿದು ಹೋದವು. ಅಲ್ಲಿಂದ ನಾನು ಎದ್ದು ಹೋಗುವ ಹೊತ್ತಾಯಿತು. ನಾನು ಕಳೆಯಲು ಬಂದ ವೇಳೆಯು ಕಳೆದುಹೋಯಿತು. ಇದೆಲ್ಲವನ್ನು ನಾನು ಅರಿತರೂ ನನಗೆ ಅಲ್ಲಿಂದ ಏಳುವ ಮನಸ್ಸಾಗಲಿಲ್ಲ ಆ ಪಾಳುಬಿದ್ದ ಘಟ್ಟವು ನನ್ನನ್ನು ಒತ್ತಾಯದಿಂದ ಅಲ್ಲಿ ಕುಳ್ಳಿರಿಸಿಕೊಂಡಿರುವುದೇನೋ ಎಂಬಂತೆ—ಎನಿಸಿತು.

ನಾನು ಕಾಲುಗಳನ್ನಿಳಿಬಿಟ್ಟು ಕುಳಿತ ಸ್ಥಳದಲ್ಲಿ ಎಷ್ಟೋ ಜನರು ಎಷ್ಟೋ ಸಾರೆ ಕುಳಿತು ಹೋಗಿರಬಹುದು; ಅವರು ಈಗ ಯಾವ ಕೊಳ್ಳದಲ್ಲಿ ತಮ್ಮ ನಿತ್ಯ ಕರ್ಮಗಳನ್ನು ಪೂರ್ಣಮಾಡುತ್ತಿರಬಹುದು? ಈ ಊರು ಜೀವಿಸಿರುವಾಗ ಅವರು ನಿಶ್ಚಯವಾಗಿಯೂ ಇಲ್ಲಿ ಬಂದು ಕುಳಿತುಕೊಳ್ಳುತ್ತಿರಬಹುದು ಎಷ್ಟೋ ಹಾಡುಗಳನ್ನು ಹಾಡಿ, ಎಷ್ಟೋ ಮಾತುಗಳನ್ನಾಡಿ ತಮ್ಮ ದಿನದಲ್ಲಾದ ದಣುವನ್ನು ಆರಿಸಿಕೊಂಡಿರಬಹುದು, ಅಕಸ್ಮಾತ್ ಒಂದು ದಿನ ಮಾರಿಕಾ ಬೇನೆಯ ಪ್ರಕೋಪದಿಂದ ಎಷ್ಟೋ ಮರಣೋನ್ಮುಖ ಜನ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ಓಡಿಬಂದು ಇದೇ ಘಟ್ಟದ ಮೇಲೆ ತಮ್ಮ ಕೊನೆಯ ಉಸಿರನ್ನು ಬಿಟ್ಟು ಇದರೊಡನೆಯೆ ಹೊರಟುಹೋಗಿರಬಹುದು; ಅವರ ಬಾಯಾರಿಕೆಯಿಂದ ಬಳಲಿದ ಆತ್ಮಗಳು ಈ ಘಟ್ಟದ ಸುತ್ತುಮುತ್ತಲು ಅಂಡಲೆಯುತ್ತಿರಬಹುದು, ಯಾವುದು ಕಣ್ಣಿಗೆ ಕಾಣುವುದಿಲ್ಲವೊ ಅದು ಇಲ್ಲವೆಂದು ಯಾರು ಧೈರ್ಯದಿಂದ ಹೇಳಬಲ್ಲರು' ಈ ದಿನ ಬೆಳಿಗ್ಗೆ ಆ ಮುದುಕ ಹೇಳಿದ್ದ—'ಮಹಸೀಯರೆ, ಮರಣದ ನಂತರ ಏನೂ ಇರುವುದಿಲ್ಲ ಎಂದು ತಿಳಿಯಬೇಡಿರಿ ಅಸಹಾಯ ಪ್ರೇತಾತ್ಮಗಳು ನಮ್ಮಂತೆಯೇ ಸುಖ-ದುಃಖ, ಹಸಿವು-ಬಾಯಾರಿಕೆಯಿಂದ ತಿರುಗುತ್ತಿರುವುದಿಲ್ಲ?' ಇಷ್ಟು ನುಡಿದು ಅವನು ವೀರ ವಿಕ್ರಮಾಜಿತನ ಕತೆಯನ್ನೂ ಅದೆಷ್ಟೊ ಯಂತ್ರ

ಮಂತ್ರ ಬಲ್ಲ ತಾಂತ್ರಿಕ ಸಾಧು-ಸನ್ಯಾಸಿಗಳ ಕತೆಗಳನ್ನೂ ಹೇಳಿದ್ದನು. ಅಲ್ಲದೆ ಅವನು 'ಸುಮಯ ಮತ್ತು ಸುಯೋಗವು ದೊರೆತಾಗ ಅವು ಕಾಣಿಸುವುದಿಲ್ಲವೆಂದೂ ಮಾತನಾಡುವುದಿಲ್ಲವೆಂದೂ ತಿಳಿಯಬೇಡಿರಿ. ನಿಮಗೆ ಆ ಸ್ಥಾನಕ್ಕೆ ಹೋಗಲು ನಾನು ಹೇಳುವುದಿಲ್ಲ, ಆದರೆ ಈ ಕೆಲಸ ವನ್ನು ಮಾಡಬಲ್ಲ ಜನರ ದುಃಖವು ಎಂದೂ ಸಾರ್ಥಕವಾಗುವುದಿಲ್ಲ ಎಂಬ ಮಾತಿನ ಮೇಲೆ ಸ್ವಪ್ನದಲ್ಲಿಯೂ ಅವಿಶ್ವಾಸವಿಡಬೇಡಿರಿ' ಎಂದೂ ಹೇಳಿದ್ದ; ಈ ಮೊದಲಾದ ಮಾತುಗಳು ಒಂದೊಂದಾಗಿ ನನ್ನ ಮನದಲ್ಲಿ ಸುಳಿದು ಹೋದುವು

ಆಗ—ಬೆಳಗಿನ ಬೆಳಕಿನಲ್ಲಿ ಹಾಸ್ಯಾಸ್ಪದವಾಗಿ ತೋರಿದ ಕತೆ ಗಳೇ ಈ ನಿರ್ಜನ ಗಹನ ಅಂಧಕಾರದ ಮಧ್ಯದಲ್ಲಿ ಬೇರೆ ಬೇರೆ ರೂಪ ಗಳನ್ನು ಧಾರಣಮಾಡಿಕೊಂಡು ಎದುರಿನಲ್ಲಿ ನಿಂತಂತೆ ತೋರಿದುವು. ಪ್ರತ್ಯಕ್ಷ ಸತ್ಯವಾದ ವಸ್ತುವಾವುದಾದರೂ ಇದ್ದರೆ ಅದು ಮೃತ್ಯು ಒಂದೇ. ಒಳಿತು-ಕೆಡುಕು, ಸುಖ-ದುಃಖ ಇವು ತಮ್ಮ ಸರಂಜಾಮುದೊಂದಿಗೆ ಒಂದಿಲ್ಲೊಂದು ದಿನ ಸುಟ್ಟುಭಸ್ಮವಾಗಿ ಹೋಗಲು ಬಂದವುಗಳು, ಸಾವಿನ ಆಚೆಗಿರುವ ಇತಿಹಾಸವು—ಯಾವ ರೀತಿಯಾಗಿಯಾದರೂ ಸರಿಯೆ—ಕೇಳಲು ದೊರೆತರೆ ಅದಕ್ಕಿಂತ ದೊಡ್ಡ ಲಾಭ ಏನುಂಟು? ಅದನ್ನು ಯಾರಾದರೂ ಹೇಳಲಿ, ಹೇಗಾದರೂ ಹೇಳಲಿ, ಆಲಿಸಲು ದೊರೆತರೆ ಅದು ಒಂದು ದೊಡ್ಡ ಭಾಗ್ಯ ಎಂಬ ಮಾತು ಮನದಲ್ಲಿ ಬರತೊಡಗಿತು.

ಯಾರದೋ ಪದಸ್ವರದಿಂದ ನನ್ನ ಧ್ಯಾನಭಂಗವಾಯಿತು ಹಿಂತಿರುಗಿ ನೋಡಿದೆ, ಕೇವಲ ಅಂಧಕಾರ, ಯಾರೂ ಇಲ್ಲ ನಾನು ಮೈಚಾಡಿಸುತ್ತ ಎದ್ದುನಿಂತೆ. ನಿನ್ನೆಯ ರಾತ್ರಿಯ ಮಾತನ್ನು ನೆನೆದು ಕೊಂಡು ಮನದಲ್ಲಿಯೆ ನುಡಿದೆ— ಬೇಡ, ಇಲ್ಲಿ ಇನ್ನು ಹೆಚ್ಚು ಹೊತ್ತು ಕುಳಿತಿರುವುದು ಬೇಡ. ನಿನ್ನೆ ರಾತ್ರಿ ಬಲಗಿವಿಯಲ್ಲಿ ಉಸಿರುಬಿಟ್ಟು ಹೋದವನು ಬಂದು ಈ ದಿನ ಎಡಗಿವಿಯಲ್ಲಿಯೂ ಉಸಿರುಬಿಡತೊಡಗಿ ದರೆ ಒಳಿತಾಗಲಿಕ್ಕಿಲ್ಲ.

ಅಲ್ಲಿ ಕುಳಿತು ಎಷ್ಟು ಹೊತ್ತಾಗಿದ್ದಿತು, ಎಷ್ಟು ರಾತ್ರಿ ಇನ್ನು ಉಳಿದಿದೆ ಎಂಬುದನ್ನು ನಾನು ನಿಶ್ಚಯಿಸದಾದೆ. ಸುಮಾರು ಅರ್ಧ ರಾತ್ರಿಯಾಗಿರಬಹುದೆಂದು ತೋರುವುದು ಆದರೆ ಇದೇನು? ಹೋಗುತ್ತಿರುವೆ—ಹೋಗುತ್ತಲೇ ಇರುವೆ ಆ ಇಕ್ಕಟ್ಟಿನ ಕಾಲುದಾರಿಯು ಮುಗಿಯಲೊಲ್ಲದಲ್ಲ! ಇಷ್ಟು ತಂಬೂಗಳು ಇವೆ—ಒಂದರೊಳಗಿಂದಲೂ ಬೆಳಕು ಕಾಣುತ್ತಿರುವುದಿಲ್ಲ! ಎದುರಿಗೆ ಒಂದು ಬಿದಿರಮೆಳೆಯು ನೋಡುತ್ತ ನಿಂತಿರುವುದು. ನಾನಿಲ್ಲಿಗೆ ಬರುವಾಗ ಇದನ್ನು ನೋಡಿರಲಿಲ್ಲ ಎಂಬ ಮಾತು ಹೊಳೆಯಿತು! ದಿಕ್ಕು, ದಾರಿ ತಪ್ಪಿ ಎತ್ತಕಡೆಗಾದರೂ ನಡೆದಿರುವುದಿಲ್ಲವಷ್ಟೆ? ಇನ್ನೂ ಸ್ವಲ್ಪ ಮುಂದಕ್ಕೆ ಹೋದ ಬಳಿಕ ಅದು ಬಿದಿರುಮೆಳೆಯಲ್ಲ, ಕೆಲವು ಹುಣಿಸೆಮರಗಳು ಒಂದುಗೂಡಿ— ದಾರಿಯನ್ನು ಅಡ್ಡಗಟ್ಟಿ ನಿಂತಿವೆ, ಕಾಲುದಾರಿಯು ಅವುಗಳ ಬುಡದೊಳಗಿಂದ ಹಾಯ್ದು ಕಾಣದಾಗಿರುವುದು ಎಂಬುದು ತಿಳಿಯಿತು ನನ್ನ ಕೈ ನನಗೇ ಕಾಣಿಸದಷ್ಟು ಕತ್ತಲು ಎದೆಯು ಹಾರತೊಡಗಿತು —ಎಲಾ, ನಾನು ಹೋಗುತ್ತಿರುವುದೆಲ್ಲಿಗೆ? ಹಾಗೂ ಹೀಗೂ ಕಣ್ಣು ಕಿವಿ ಮುಚ್ಚಿಕೊಂಡು ಆ ಮರಗಳನ್ನು ದಾಟಿ ಮುನ್ನಡೆದು ನೋಡಿದೆ – ಎದುರಿಗೆ ಅನಂತವಾದ ಕಪ್ಪು ಆಗಸ, ದೃಷ್ಟಿಯು ಹೋದಷ್ಟು ದೂರ ವಿಸ್ತೃತವಾಗುತ್ತಿರುವುದು. ಎದುರಿಗಿರುವ ಆ ಎತ್ತರವಾದ ಸ್ಥಳವಾವುದು? ನದಿಯ ದಂಡೆಗಿರುವ ಸರಕಾರೀ ಒಡ್ಡು ಅಲ್ಲವೆ? ನನ್ನ ಎರಡೂ ಕಾಲುಗಳು ಈಗ ಶಕ್ತಿಹೀನವಾದಂತೆನಿಸತೊಡಗಿದುವು; ಆದರೂ ಅವನ್ನು ಎಳೆಯುತ್ತ ಆ ಏರಿಯನ್ನು ಏರಿದೆ ಯೋಚಿಸಿದ್ದುದೇ ಆಯಿತು. ಆ ಎತ್ತರ ಸ್ಥಳದ ಕೆಳಗೇ ಸರಿಯಾಗಿ ಆ ಮಹಾಶ್ಮಶಾನವಿದ್ದಿತು! ಯಾರವೂ ಹೆಜ್ಜೆಗಳ ಸಪ್ಪಳವು ಎದುರಿನಿಂದ ಹಾಯ್ದು ಕೆಳಗಿರುವ ಶ್ಮಶಾನದಲ್ಲಿ ವಿಲೀನವಾಯಿತು. ಈಗ ನಾನು ಹಾಗೂ ಹೀಗೂ ಮುಗ್ಗುತ್ತ ಹೊರಟೆ ಮತ್ತು ಆ ಧೂಳು-ಉಸುಕಿನ ರಾಶಿಯ ಮೇಲೆ ದೊಪ್ಪೆಂದು ಕುಳಿತುಬಿಟ್ಟೆ. ಯಾರೊ ಒಬ್ಬರು ನನಗೆ ಒಂದು ಮಹಾಶ್ಮಶಾನದಿಂದ ಇನ್ನೊಂದು ಮಹಾಶ್ಮಶಾನದ ದಾರಿಯನ್ನು ತೋರಿಸುತ್ತ ಬಂದಿರುವರು ಎಂಬುದರಲ್ಲಿ ನನಗೆ ಸಂದೇಹವೇ ಉಳಿಯಲಿಲ್ಲ. ಯಾರ ಪದ-ಶಬ್ದವನ್ನು ಆಲಿಸಿ

ನಾನು ಆ ಘಟ್ಟದ ಮೇಲೆ ಮೈಚಾಡಿಸಿ ಎದ್ದು ನಿಂತಿದ್ದೆನೊ ಆ ವ್ಯಕ್ತಿಯ ಪದ-ಶಬ್ದವೇ ಇಷ್ಟು ಹೊತ್ತಿನ ಮೇಲೆ ಆ ಕಡೆಯಲ್ಲಿ, ಎದುರಿನಲ್ಲಿ ವಿಲೀನವಾಯಿತು.

ಪ್ರತಿಯೊಂದು ಘಟನೆಯ ಕಾರಣವನ್ನು ತಿಳಿದುಕೊಳ್ಳಲೇಬೇಕೆಂಬ ವಯಸ್ಸೊಂದು ಮಾನವನಿಗೆ ಇರುವುದು; ಅದನ್ನು ನಾನು ದಾಟಿರುವೆ. ಆದುದರಿಂದ ಆ ಅತ್ಯಂತ ಅಂಧಕಾರದಲ್ಲಿ-ಅರ್ಧ ರಾತ್ರಿಯ ಕಾಲದಲ್ಲಿ-ನಾನೊಬ್ಬನೇ ದಾರಿಯನ್ನು ಗುರುತಿಸುತ್ತ ಕೆರೆಯ ಘಟ್ಟದಿಂದ ಹೊರಟು ಈ ಮಹಾಶ್ಮಶಾನಕ್ಕೆ ಹೇಗೆ ಬಂದು ಮುಟ್ಟಿದೆ, ಯಾರ ಪದದನಿಯು ನನ್ನನ್ನು ಕರೆದುಕೊಂಡು ಆ ಸ್ಥಾನದಿಂದ ಹೊರಟು ಸನ್ನೆಮಾಡುತ್ತ ಹೋಯಿತು ಮತ್ತು ಇನಿತು ವೇಳೆಯಲ್ಲಿ ಮಾಯವಾಗಿಹೋಯಿತು ಎಂಬ ಪ್ರಶ್ನೆಗಳ ಮೀಮಾಂಸೆಯನ್ನು ಮಾಡುವಂತಹ ಬುದ್ಧಿಯು ನನ್ನಲ್ಲಿ ಇಲ್ಲ ಪಾಠಕರ ಎದುರಿನಲ್ಲಿ ನನ್ನ ಈ ದೈನ್ಯವನ್ನು ಒಪ್ಪಿಕೊಳ್ಳಲು ನನಗೆ ನಾಚಿಕೆಯಾಗುವುದಿಲ್ಲ ಈ ರಹಸ್ಯವು ಈ ದಿನದ ವರೆಗೂ ನನ್ನೆದುರು ಕತ್ತಲಿಂದ ಮುಚ್ಚಿಹೋಗಿರುವುದು. ಆದರೆ ಆದುದರಿಂದಲೇ ಪ್ರೇತ ಯೋನಿಯ ಅಸ್ತಿತ್ವವನ್ನು ಒಪ್ಪುವುದು ಕೂಡ ಒಪ್ಪಿಗೆಯ ಗುಪ್ತ ತಾತ್ಪರ್ಯವಾಗಿರುವುದಿಲ್ಲ ಏಕೆಂದರೆ, ನಾನು ನನ್ನ ಕಣ್ಣಿನಿಂದಲೇ ನೋಡಿರುವೆ—ನಮ್ಮ ಊರಲ್ಲಿ ಒಬ್ಬ ಹುಚ್ಚನಿದ್ದ. ಅವನು ಹಗಲು ಮನೆ ಮನೆಗೆ ಹೋಗಿ ಬಿಕ್ಕೆ ಬೇಡಿ ಉಣ್ಣುತ್ತಿದ್ದ ಮತ್ತು ರಾತ್ರಿಯಲ್ಲಿ ಒಂದು ಬಿದಿರಿನ ಗಳಕ್ಕೆ ಬಟ್ಟೆಯೊಂದನ್ನು ಹಾಕಿ, ಅದನ್ನು ನಿಶಾನೆಯಂತೆ ಎತ್ತಿ ಹಿಡಿದುಕೊಂಡು ಬೀದಿ ಬೀದಿ, ತೋಟಗಳಲ್ಲಿ ಗಿಡಕಂಟಿಗಳ ನೆರಳಿನಲ್ಲಿ ಅಲೆಯುತ್ತಿದ್ದ ಅವನ ಮುಖವನ್ನು ಕತ್ತಲಲ್ಲಿ ನೋಡಿ ಎಷ್ಟೋ ಜನರ ಹೌ ಹಾರಿಹೋಗಿದೆ! ಹೀಗೆ ಅಲೆಯುವುದರಲ್ಲಿ ಅವನದೇನೂ ಸ್ವಾರ್ಥವಿರಲಿಲ್ಲ. ಕತ್ತಲು ರಾತ್ರಿಯಲ್ಲಿ ಹೀಗೆ ಅಲೆದಾಡುವುದು ಅವನ ನಿತ್ಯದ ಕರ್ತವ್ಯಕರ್ಮವಾಗಿದ್ದಿತು. ಮನುಷ್ಯನಿಗೆ ವ್ಯರ್ಥ ಅಂಜಿಕೆಯನ್ನು ತೋರಿಸಲು ಅವನು ಮಾಡುವ ಕೆಲಸಗಳಿಗೆ ಎಲ್ಲೆಯಿರಲಿಲ್ಲ. ಒಣ ಕಟ್ಟಿಗೆಗಳ ಹೊರೆಯನ್ನು ಒಂದು ಮರಕ್ಕೆ ಕಟ್ಟಿ ಬೆಂಕಿ ಹಚ್ಚುತ್ತಿದ್ದ,

ಮುಖಕ್ಕೆ ಕಪ್ಪು ಮಸಿಯನ್ನು ಬಳಿದುಕೊಂಡು ವಿಶಾಲಾಕ್ಷಿದೇವಿಯ ಗುಡಿಯಲ್ಲಿ ಅತ್ಯಂತ ದುಃಖವನ್ನು ಸಹಿಸುತ್ತ ನಿಂತಿರುತ್ತಿದ್ದ ಮತ್ತು ಎದ್ದು ಕುಳ್ಳಿರುತ್ತಿದ್ದ, ಅರ್ಧ ರಾತ್ರಿಯ ಕಾಲದಲ್ಲಿ ಮೂಗಿನ ದನಿಯಿಂದ ಎಷ್ಟೋ ಒಕ್ಕಲಿಗರ ಹೆಸರೆತ್ತಿಕೊಂಡು ಕೂಗುತ್ತಿದ್ದ— ಆದರೆ, ಯಾರಿಗೂ ಅವನನ್ನು ಹಿಡಿಯುವುದಾಗಲಿಲ್ಲ. ಹಗಲಿನಲ್ಲಿ ಅವನ ವ್ಯವಹಾರ, ನಡತೆಯನ್ನು ನೋಡಿದರೆ ಅವನ ಬಗ್ಗೆ ಸಂದೇಹವೇ ಹುಟ್ಟುವಂತಿರಲಿಲ್ಲ, ಕೇವಲ ನಮ್ಮ ಊರಲ್ಲಿ ಅಷ್ಟೇ ಅಲ್ಲ, ನಮ್ಮ ಊರಿನ ಸುತ್ತುಮುತ್ತಲಿನ ಎಂಟು ಹತ್ತು ಊರುಗಳಲ್ಲಿಯೂ ಅವನು ಹೀಗೆಯೆ ಮಾಡುತ್ತ ತಿರುಗುತ್ತಿದ್ದ. ಸಾಯುವಾಗ ಅವನು ತನ್ನ ಈ ನಡತೆಯನ್ನು ತಾನೇ ಹೇಳಿ ಸತ್ತ ಮತ್ತು ಅವನ ಮರಣದ ನಂತರ ಭೂತದ ಉಪದ್ರವೂ ನಿಂತುಹೋಯಿತು. ಈ ಕ್ಷೇತ್ರದಲ್ಲಿಯೂ ಬಹುಶಃ ಹೀಗೆಯೆ ಇದ್ದಿರಬಹುದು, ಇರಲಿಕ್ಕೂ ಇಲ್ಲ. ಇರಲಿ ಬಿಡಿರಿ ಈ ಮಾತು.

ಹೌದು, ನಾನು ಹೇಳುತ್ತಿದ್ದೆ— ಆ ಧೂಳು ಮತ್ತು ಉಸುಕಿನ ದಿನ್ನೆಯ ಮೇಲೆ ನಾನು ಹತಬುದ್ಧಿಯವನಾಗಿ ಕುಳಿತಾಗ ಎರಡು ಕ್ಷೀಣ ಪದ-ಧ್ವನಿಗಳು ಒಳಗೆ ಹೋಗಿ ವಿಲೀನವಾದುವು. ಅವು ಬಹುಶಃ ಹೀಗೆ ಸ್ಪಷ್ಟವಾಗಿ ಹೇಳಿ ಹೋದುವೊ ಏನೊ ಎಂಬಂತೆ ಎನಿಸಿತು "ರಾಮು, ರಾಮು, ಇದನ್ನೇನು ಮಾಡಿದೆ ನೀನು? ನಿನಗೆ ಇಷ್ಟು ದೂರ ದಾರಿ ತೋರಿಸುತ್ತ ಬಂದೆವು, ಇಲ್ಲಿಗೆ ಬಂದು ಕುಳಿತುಕೊಳ್ಳುವುದಕ್ಕೇನು? ಬಾ, ಬಾ! ಒಂದು ಬಾರಿ ನಮ್ಮಲ್ಲಿ ಬಂದು ಕೂಡು. ಈ ರೀತಿ ಅಪವಿತ್ರ ಅಸ್ಪೃಶ್ಯರಂತೆ ಅಂಗಳದೊಳಗೆ ಏಕಾಂತದಲ್ಲಿ ಕುಳ್ಳಿರಬೇಡ, ನಮ್ಮೆಲ್ಲರ ನಡುವೆ ಬಂದು ಕುಳಿತುಕೊ." ಈ ನುಡಿಗಳನ್ನು ನಾನು ಕಿವಿಯಿಂದ ಕೇಳಿದ್ದೆನೊ ಅಥವಾ ಹೃದಯದಲ್ಲಿ ಅನುಭವಿಸಿದ್ದೆನೊ ಎಂಬುದು ಈಗ ನೆನಪಿಗೆ ಬಾರದಾಗಿರುವುದು. ಆದರೆ ಆಗಲೂ ನನಗೆ ಎಚ್ಚರವಿದ್ದಿತು, ಅದನ್ನು-ಚೈತನ್ಯವನ್ನು ಹಿಡಿದುಕೊಂಡಿರುವುದರಿಂದ ಅದು ಹಾಗೆಯೆ ಹೊರಟು ಹೋಗದು ಎಂಬುದನ್ನು ನಾನು ಚೆನ್ನಾಗಿ ಅರಿತಿದ್ದೆ. ಆದುದರಿಂದಲೇ ನಾನು ಎರಡೂ ಕಣ್ಣುಗಳನ್ನು ತೆರೆದು ನೋಡುತ್ತಿದ್ದೆ, ಆದರೆ ಅದು ತಂದ್ರಾವಸ್ಥೆಯ ಸ್ಫೋಟವಾಗಿದ್ದಿತು. ಆಗ ಜಾಗೃತಾವಸ್ಥೆಯೂ

ಇರಲಿಲ್ಲ, ನಿದ್ರಾವಸ್ಥೆಯೂ ಇರಲಿಲ್ಲ ಆ ಅವಸ್ಥೆಯಲ್ಲಿ ನಿದ್ರಿತರ ವಿಶ್ರಾಂತಿಯೂ ಇರುವುದಿಲ್ಲ, ಜಾಗ್ರತರ ಉದ್ಯಮವೂ ಇರುವುದಿಲ್ಲ

ಆದಾಗ್ಯೂ ರಾತ್ರಿಯು ಬಹಳವಾಗಿದೆಯೆಂಬುದನ್ನೂ ನಾನು ತಂಬೂವಿಗೆ ಹಿಂತಿರುಗಿ ಹೋಗಬೇಕೆಂಬುದನ್ನೂ ಅದಕ್ಕೋಸ್ಕರ ಪ್ರಯತ್ನವನ್ನು ಸ್ವಲ್ಪಾದರೂ ಮಾಡಬೇಕೆಂಬುದನ್ನೂ ನಾನು ಮರೆಯಲಿಲ್ಲ ಆದರೆ ಇದೆಲ್ಲವೂ ವ್ಯರ್ಥವಾದುದೆಂಬ ಮಾತು ಮನದಲ್ಲಿ ಬರತೊಡಗಿತು. ಇಲ್ಲಿಗೆ ನಾನು ನಾನಾಗಿಯೆ ಬರಲಿಲ್ಲ, ಅಲ್ಲದೆ ಬರುವ ಕಲ್ಪನೆಯೂ ನನಗೆ ಇರಲಿಲ್ಲ ಆದುದರಿಂದ ಯಾರು ನನಗೆ ಈ ದುರ್ಗಮವಾದ ದಾರಿಯನ್ನು ತೋರಿಸಿ ಕರೆದುತಂದಿರುವರೊ ಅವರಿಗೆ ವಿಶೇಷವಾಗಿ ಇದರಲ್ಲಿ ಲಾಭವೇನಾದರೂ ಇರಬೇಕು, ಅವರು ನನ್ನನ್ನು ಹೀಗೆಯೆ ಹೊರಟುಹೋಗಗೊಡರು. ಇವರ ಕೈಯಿಂದ ನಾನು ಬಯಸಿದಾಗ ಬಿಡುಗಡೆ ದೊರೆಯುವುದಿಲ್ಲವೆಂಬುದನ್ನೂ ನಾನು ಈ ಮೊದಲೇ ಅರಿತಿದ್ದೆ. ನೀವು ಯಾವ ದಾರಿಯಿಂದಲೇ ಆಗಲಿ, ಯಾವ ರೀತಿಯಿಂದಲೇ ಆಗಲಿ ಹೊರಬೀಳಲು ಪ್ರಯತ್ನಿಸಿದರೆ ಪುನಃ ತಿರುತಿರುಗಿಸಿ ಮೊದಲಿನ ಸ್ಥಳಕ್ಕೇ ನಿಮ್ಮನ್ನು ಅವರು ಕರೆದು ತಂದು ಕುಳ್ಳಿರಿಸುವರು!

ಆದುದರಿಂದ ಚಂಚಲಚಿತ್ತನಾಗಿ ಚಡಪಡಿಸುವುದು ಅನಾವಶ್ಯಕವೆಂದು ನಾನು ಬಗೆದು ಸ್ಥಿರವಾಗಿ ಕುಳಿತುಕೊಂಡ ಬಳಿಕ ನನ್ನ ನೋಟಕ್ಕೆ ಬಿದ್ದ ಒಂದು ವಸ್ತುವನ್ನು ನಾನು ಎಂದಿಗೂ ಮರೆಯುವಂತಿಲ್ಲ

ರಾತ್ರಿಗೂ ಒಂದು ಸ್ವತಂತ್ರವಾದ ರೂಪವಿರುವುದು· ಅದನ್ನು ಪೃಥ್ವಿಯ ಮೇಲಿರುವ ಗಿಡಮರಗಳಿಂದಲೂ ಗುಡ್ಡಗಳಿಂದಲೂ ದೃಶ್ಯಮಾನವಾಗಿರುವ ಸಮಸ್ತ ವಸ್ತುಗಳಿಂದಲೂ ಬೇರೆ ಮಾಡಿ ನೋಡಲು ಬರುವಂತಿದೆಯೆಂಬುದನ್ನು ನನ್ನ ಜೀವನದಲ್ಲಿ ನಾನು ಮೊಟ್ಟಮೊದಲು ಅರಿತುಕೊಂಡೆ ಅನಂತವಾದ ಕತ್ತಲು ಕವಿದ ಆಗಸದ ಕೆಳಗೆ ಸಮಸ್ತ ಭೂಮಿಯ ಮೇಲೆ ಆಸನವನ್ನು ಹಾಕಿಕೊಂಡು ಗಂಭೀರ ರಾತ್ರಿಯ ಕಣ್ಣು ಮುಚ್ಚಿಕೊಂಡು ಧ್ಯಾನಮಗ್ನಳಾಗಿ ಕುಳಿತಿರುವಳು ಮತ್ತು ಸಂಪೂರ್ಣ ಚರಾಚರ ವಿಶ್ವವು ಬಾಯಮುಚ್ಚಿಕೊಂಡು ಉಸಿರನ್ನು

ಬಿಗಿಹಿಡಿದುಕೊಂಡು ಅತ್ಯಂತ ಜಾಗರೂಕತೆಯಿಂದ ಸ್ತಬ್ಧವಾಗಿದ್ದು ಆ ಸ್ಥಿರಶಾಂತಿಯ ರಕ್ಷಣೆಯನ್ನು ಮಾಡುತ್ತಿದೆಯೆಂಬುದನ್ನು ನಾನು ಕಣ್ದೆರೆದು ನೋಡಿದೆ ಒಮ್ಮಿಂದೊಮ್ಮೆಲೆ ಸೌಂದರ್ಯದ ಒಂದು ತರಂಗವು ನನ್ನ ಕಣ್ಮೇಲಿಂದ ಹಾಯ್ದು ಹೋಯಿತು. 'ಯಾವ ಸಟೆಯಾದು ವವನು ಪ್ರಕಾಶಕ್ಕಷ್ಟೇ ರೂಪವಿದೆ, ಕತ್ತಲಕ್ಕೆ ಇರುವುದಿಲ್ಲ ಎಂಬ ಮಾತನ್ನು ಬೀರಿ ಹೋದ? ಮನುಷ್ಯನು ಈ ಸುಳ್ಳಿನ ಸೊಲ್ಲನ್ನು ಹೇಗೆ ಒಪ್ಪಿಕೊಂಡಿರಬಹುದು!' ಎಂಬ ಮಾತೂ ಮನದಲ್ಲಿ ಬಂದು ಹೋಯಿತು ಇದು ಆಕಾಶ, ವಾಯು, ಸ್ವರ್ಗ ಮತ್ತು ಮರ್ತ್ಯ ಎಲ್ಲವನ್ನೂ ಮುಚ್ಚಿ ದೃಷ್ಟಿಯ ಒಳಗೂ ಹೊರಗೂ ಅಂಧಕಾರದ ಮಹಾಪೂರ ವನ್ನು ಹರಿಯಿಸುತ್ತಿರುವುದು. ಅಹಾ! ಇಂತಹ ಸುಂದರ ರೂಪದ ತರಂಗವನ್ನು ಮತ್ತೆಂದು ನಾ ನೋಡಿರುವೆ! ಈ ಬ್ರಹ್ಮಾಂಡದಲ್ಲಿ ಯಾವುದು ಎಷ್ಟೆಷ್ಟು ಗಂಭೀರವಾಗಿದೆಯೊ ಅಚಿಂತನೀಯವಾಗಿದೆಯೊ ಸೀಮಾತೀತವಾಗಿದೆಯೊ ಅದು ಅಷ್ಟಷ್ಟೇ ಅಂಧಕಾರಮಯವಾಗಿರುವುದು ಅಗಾಧವಾದ ಸಮುದ್ರವು ಮಸಿಯಂತೆ ನೀಲವಾಗಿದೆ, ಕಪ್ಪಾಗಿದೆ, ಅಗಮ್ಯ ದಟ್ಟ ಅರಣ್ಯಗಳು ಘೋರ ಅಂಧಕಾರಮಯವಾಗಿವೆ; ಎಲ್ಲ ಜನರ ಆಶ್ರಯ, ಪ್ರಕಾಶದ ಪ್ರಕಾಶ, ಜೀವನದ ಜೀವನ, ಸಂಪೂರ್ಣ ಜೀವನದ ಪ್ರಾಣಪುರುಷನೂ ಸಹ ಮಾನವನ ದೃಷ್ಟಿಯಲ್ಲಿ ಅತ್ಯಂತ ಅಂಧಕಾರ ಮಯ! ಆದರೆ ಅದೇಕೆ? ರೂಪದ ಅಭಾವದಿಂದೇನು? ಯಾವುದು ನಮಗೆ ತಿಳಿಯುವುದಿಲ್ಲವೊ ಯಾವುದರಲ್ಲಿ ಪ್ರವೇಶ ಮಾರ್ಗವೇ ನಮಗೆ ದೊರೆಯುವುದಿಲ್ಲವೊ ಅದು ಅಷ್ಟೇ ಅಂಧಕಾರಮಯವಾಗಿದೆ! ಆದುದರಿಂದಲೇ ಸಾವು ಮನುಷ್ಯನ ದೃಷ್ಟಿಯಲ್ಲಿ ಇಷ್ಟು ಕಪ್ಪಾಗಿರುವುದು; ಆದುದರಿಂದಲೇ ಅವನ ಪರಲೋಕದ ಮಾರ್ಗವು ಇಷ್ಟು ದುಸ್ತರವಾದ ಕತ್ತಲಲ್ಲಿ ಮಗ್ನವಾಗಿದೆ! ಆದುದರಿಂದಲೇ ರಾಧೆಯ ಎರಡೂ ನಯನಗಳ ನನ್ನಿಯ ಮಹಾಪೂರದಲ್ಲಿ ಜಗತ್ತನ್ನು ತೇಲಿಬಿಟ್ಟವನೂ ಘನಶ್ಯಾಮನೇ!' ನಾನು ಈ ಮೊದಲು ಎಂದೂ ಈ ಮಾತುಗಳನ್ನು ಕುರಿತು ಯೋಚಿಸಿಲ್ಲ, ಎಂದೂ ಈ ಮಾರ್ಗವನ್ನು ಹಿಡಿದಿಲ್ಲ, ಆದಾಗ್ಯೂ ನಾನು ಅದು ಹೇಗೊ ಈ ಭಯಪೂರಿತ ಮಹಾಸ್ಮಶಾನದ ಬಳಿಯಲ್ಲಿ ನನ್ನ ನಿರುಪಾಯ ನಿಸ್ಸಂಗ

ಒಂಟಿತನವನ್ನು ದಾಟಿ ಕುಳಿತಿರುವೆ ಮತ್ತು ನನ್ನ ಹೃದಯದಲ್ಲಿ ಒಂದು ರೂಪದ ಆನಂದವು ಅಕಾರಣವಾಗಿ ಉಕ್ಕೇರಿಬರತೊಡಗಿತು. ಒಮ್ಮೆಗೆ ಕಪ್ಪುತನದಲ್ಲಿ ಇಷ್ಟು ರೂಪವು ಇದೆಯೆಂಬುದನ್ನು ನಾನು ಈ ಮೊದಲು ಅರಿತಿರಲಿಲ್ಲ ಎಂಬ ಮಾತೂ ಮನದಲ್ಲಿ ಬಂದಿತು! ಆದುದರಿಂದಲೇ ಬಹುಶಃ ಮೃತ್ಯುವಿನ ರೂಪವು ಕಪ್ಪು ಇರುವುದೆಂಬುದರ ಕಾರಣವು ಕುತ್ಸಿತವಾಗಿಲ್ಲ; ಒಂದು ದಿನ ಅದು ನನಗೆ ತನ್ನ ಈ ಪ್ರಕಾರವಾಗಿರುವ, ಎಂದೂ ಸಮಾಪ್ತವಾಗದ ಸುಂದರ ರೂಪವನ್ನು ತೋರಿಸಲು ಬಂದಾಗ ಆ ರೂಪದೊಡನೆ ನನ್ನ ನೋಟವೂ ಒಂದುಗೂಡುವುದು. ಆದರೆ ಆ ರೂಪವನ್ನು ಅದು ಇಂದೇ ತೋರಿಸಲು ಬಂದರೆ ಬೇಡುವೆ "ಎಲೊ ಕಪ್ಪೇ! ಎಲವೊ ನನ್ನ ಬಳಿಯಿರುವ ಪದಧ್ವನಿಯೆ! ಎಲೊ ನನ್ನ ಸರ್ವ ದುಃಖ-ಭಯ-ವ್ಯಥೆಯನ್ನು ದೂರೀಕರಿಸುವ ಅನಂತ ಸುಂದರ ವಸ್ತುವೇ! ನೀನು ನಿನ್ನ ಅನಾದಿ ಅಂಧಕಾರದಿಂದ ಸರ್ವಾಂಗಗಳನ್ನು ವ್ಯಾಪಿಸಿ ನನ ಈ ಎರಡೂ ನಯನಗಳ ನೋಟದ ಎದುರಿನಲ್ಲಿ ಪ್ರತ್ಯಕ್ಷವಾಗು, ನಾನು ನಿನ್ನ ಈ ಅಂಧಕಾರದಿಂದ ತುಂಬಿದ ನಿರ್ಜನ ಮೃತ್ಯು-ಮಂದಿರದ ಬಾಗಿಲ ಬಳಿಯಲ್ಲಿ ನಿರ್ಭಯದಿಂದ ನಿನ್ನನ್ನು ವರಿಸಿ ಅತ್ಯಂತ ಆನಂದ ದಿಂದ ನಿನ್ನನ್ನು ಅನುಸರಿಸುವೆನು" ಒಮ್ಮೆಲೆ 'ಅದರ ಈ ನಿರ್ವಾಕ್ ಆಹ್ವಾನವನ್ನು ಉಪೇಕ್ಷಿಸಿ ಅತ್ಯಂತ ಹೀನ ನಿರ್ಗತಿಕನಂತೆ ನಾನಿಲ್ಲಿ ಏಕೆ ಕುಳಿತಿರುವೆ? ಒಂದು ಬಾರಿ ನಾನು ಒಳಗೆ ಹೋಗಿ ಮಧ್ಯದಲ್ಲಿ ಏಕೆ ಕುಳ್ಳಿರಬಾರದು?' ಎಂಬ ಮಾತು ಮನದಲ್ಲಿ ಬಂದಿತು.

ಕೆಳಗಿಳಿದು ನಾನು ಶ್ಮಶಾನದ ನಟ್ಟನಡುವೆ ಹೋಗಿ ಕುಳಿತೆ. ನಾನು ಎಷ್ಟು ಹೊತ್ತಿನ ವರೆಗೆ ಕುಳಿತೆನೆಂಬುದರ ಕಲ್ಪನೆಯೇ ನನಗಿರಲಿಲ್ಲ. ಮೈಮೇಲೆ ಎಚ್ಚರವು ಬಂದ ಬಳಿಕ ಇನ್ನು ಕತ್ತಲು ಅಷ್ಟು ಇಲ್ಲ ಎಂದು ತೋರಿತು; ಆಕಾಶದ ಒಂದು ಭಾಗವು ಹೆಚ್ಚು ಸ್ವಚ್ಛವಾಗಿರುವಂತೆ ಕಂಡಿತು. ಶುಕ್ರ ನಕ್ಷತ್ರವು ಬೆಳಗುತ್ತಿರುವುದು ಕಾಣಿಸಿತು. ಅಸ್ಪಷ್ಟ ವಾಗಿ ಕೆಲವು ನುಡಿಗಳೂ ಕಿವಿಗೆ ಬಿದ್ದುವು. ಚೆನ್ನಾಗಿ ನೋಡಲಾಗಿ ಕೆಲವರು ದೂರದಲ್ಲಿ ಆ ಶ್ಮಶಾನದ ಹೆಮ್ಮರದ ಕೆಳಗಿಂದ ಬರುತ್ತಿರುವುದು ದೃಷ್ಟಿಗೆ ಬಿದ್ದಿತು, ಅವರ ಮೂರು ನಾಲ್ಕು ಕಂದೀಲುಗಳ ದೀಪಗಳು

ಮಿಣುಗುವದೂ ಕಣ್ಣಿಗೆ ಬಿದ್ದಿತು. ಬಳಿಕ ನಾನು ಎದ್ದು ದಿನ್ನೆಯ ಮೇಲೆ ನಿಂತು ನೋಡಿದೆ. ಎರಡು ಚಕ್ಕಡಿಗಳ ಹಿಂದೆ ಮತ್ತು ಮುಂದೆ ಕೆಲವರು ನಡೆಯುತ್ತ ಇತ್ತ ಕಡೆಗೇ ಬರುತ್ತಿರುವರು ಎಂಬುದನ್ನು ಕಂಡೆ. ಈ ದಾರಿಯಿಂದ ಸ್ಟೇಶನಕ್ಕೆ ಅವರು ಹೋಗುತ್ತಿರಬಹುದು ಎಂದು ತಿಳಿದುಕೊಂಡೆ.

ಆಗ ಈ ಸ್ಥಳವನ್ನು ಬಿಟ್ಟು ದೂರ ಸರಿದು ಹೋಗುವದು ಒಳ್ಳಿತೆಂದು ನನ್ನ ಸುಬುದ್ಧಿಗೆ ಹೊಳೆಯಿತು. ಏಕೆಂದರೆ ಅವರು ಎಷ್ಟೇ ಬುದ್ಧಿವಂತರೂ ಸಾಹಸಿಗಳೂ ಇದ್ದರು ಕೂಡ ಒಮ್ಮೆಲೆ ಈ ಕತ್ತಲು ರಾತ್ರಿಯಲ್ಲಿ, ಈ ಬಗೆಯ ಸ್ಥಳದಲ್ಲಿ ನಾನು ಭೂತನಂತೆ ನಿಂತಿರುವುದನ್ನು ನೋಡಿ ಚೀರಿಬಿಡುವುದರಲ್ಲಿ ಸಂದೇಹವಿಲ್ಲ ಎಂದು ನನಗೆ ಎನಿಸಿತು ಆದುದರಿಂದ ನಾನು ಹಿಂತಿರುಗಿ ನನ್ನ ಮೊದಲಿನ ಸ್ಥಳಕ್ಕೆ ಹೋಗಿ ನಿಂತುಕೊಂಡೆ ಸ್ವಲ್ಪ ಹೊತ್ತಿನಲ್ಲಿ ಎರಡು ಚಕ್ಕಡಿಗಳು ನಾಲ್ಕೈದು ಜನರ ಕಾವಲಿನಲ್ಲಿ ಮುಂಬರುತ್ತ ನನ್ನ ಬಳಿಗೆ ಬಂದುವು ಮುಂದೆ ಇದ್ದವರಲ್ಲಿ ಇಬ್ಬರು ನನ್ನನ್ನು ನೋಡಿ ಸ್ಥಿರವಾಗಿ ನಿಂತು ಮಾತನಾಡಿಕೊಂಡು ಹೊರಟುದು ಕಾಣಿಸಿತು ಸ್ವಲ್ಪ ಹೊತ್ತಿನಲ್ಲಿ ಚಕ್ಕಡಿಗಳು ತಮ್ಮ ಸರಂಜಾಮುದೊಂದಿಗೆ ಒಂದು ಗಿಡದ ಗುಂಪಿನ ಹಿಂದೆ ಕಾಣದಾದವು. ಇನ್ನು ರಾತ್ರಿ ಹೆಚ್ಚಾಗಿಲ್ಲವೆಂದು ಬಗೆದು ನಾನು ಇನ್ನು ಮನೆಗೆ ಹೊರಡಲುದ್ಯುಕ್ತನಾಗಿದ್ದೆ ಇಷ್ಟರಲ್ಲಿ ಆ ಮರದ ಗುಂಪಿನ ಹಿಂದಿನಿಂದ ಒಂದು ದನಿಯು ಬಂದಿತು

"ಶ್ರೀಕಾಂತ ಬಾಬೂ — "

ನಾನು "ಯಾರು, ರತನನೇನು ?" ಎಂದು ಕೂಗಿ ಉತ್ತರವಿತ್ತೆ.

"ಹೌದು ಬಾಬೂ, ನಾನೇ ಸ್ವಲ್ಪ ಮುಂದೆ ಬನ್ನಿರಿ !"

ನಾನು ಬೇಗ ಪುನಃ ದಿನ್ನೆಯನ್ನೇರಿ "ರತನ, ನೀವು ಊರಿಗೆ ಹೋಗುತ್ತಿರುವಿರೇನು ?" ಎಂದು ಕೇಳಿದೆ.

"ಹೌದು, ಊರಿಗೆ ಹೋಗುತ್ತಿರುವೆವು. ಅಮ್ಮನವರು ಗಾಡಿಯಲ್ಲಿದ್ದಾರೆ."

K2780

ನಾನು ಬಳಿಗೆ ಬಂದೊಡನೆಯೆ, ಪರದೆಯಿಂದ ಮುಖವನ್ನು ಮುನ್ನೀಡಿ ಪ್ಯಾರಿಯು "ಆಳುಮಗನ ಮಾತನ್ನು ಕೇಳಿ ನಿಮ್ಮ ಹೊರತು ಈ ಸ್ಥಳದಲ್ಲಿ ಯಾರೂ ಇರರು ಎಂದು ನಾನು ತಿಳಿದಿದ್ದೆ. ಗಾಡಿಯೊಳಗೆ ಬನ್ನಿರಿ, ಸ್ವಲ್ಪ ಮಾತನಾಡುವುದಿದೆ " ಎಂದಳು

ನಾನು ಇನ್ನೂ ಹತ್ತಿರ ಹೋಗಿ " ಏನು ?" ಎಂದೆ.

" ಒಳಗೆ ಬನ್ನಿರಿ, ಎನ್ನುವೆ "

" ಇಲ್ಲ. ಹೀಗೆ ಬರಲಾರೆ, ವೇಳೆಯಿಲ್ಲ. ಬೆಳಗಾಗುವ ಮೊದಲೇ ತಂಬೂಕ್ಕೆ ಹೋಗಬೇಕು !!" ಪ್ಯಾರಿಯು ಕೈಚಾಚಿ ನನ್ನ ಬಲಗೈಯನ್ನು ಹಿಡಿದಳು ಮತ್ತು ಎಂದಳು " ಆಳು ಮಕ್ಕಳ ಎದುರಿಗೆ ಕೈಕೊಸರಿ ಕೊಳ್ಳುವುದನ್ನೂ ಎಳೆದಾಡುವುದನ್ನೂ ಮಾಡಬೇಡಿರಿ, ಸುಮ್ಮಗೆ ಹತ್ತಿ ಒಳಗೆ ಬನ್ನಿರಿ. !"

ಆಕೆಯ ಅಸ್ವಾಭಾವಿಕ ಉತ್ತೇಜನವನ್ನು ಕಂಡು ಹತಬುದ್ಧಿಯುವನಾಗಿ ನಾನು ಚಕ್ಕಡಿಯನ್ನು ಹತ್ತಿ ಒಳಕ್ಕೆ ಹೋದೆ ಪ್ಯಾರಿಯು ಗಾಡಿಯುವನಿಗೆ ಮುಂದಕ್ಕೆ ಗಾಡಿ ಹೊಡೆಯಲು ಆಜ್ಞೆಯನ್ನಿತ್ತು " ಈ ದಿನ ಪುನಃ ಇಲ್ಲಿಗೇಕೆ ಬಂದಿರಿ ? " ಎಂದು ಕೇಳಿದಳು.

ನಾನು ನಿಜವಿದ್ದುದನ್ನು ಹೇಳಿದೆ "ಗೊತ್ತಿಲ್ಲ ಏಕೆ ಬಂದೆನೊ?"

ಪ್ಯಾರಿಯು ಇದುವರೆಗೂ ನನ್ನ ಕೈಬಿಟ್ಟಿರಲಿಲ್ಲ, ಅವಳು "ನಿಮಗೆ ಗೊತ್ತಿಲ್ಲ ? ಒಳ್ಳೇದು, ಯಾರಿಗೂ ಗೊತ್ತಾಗದಂತೆ ಏಕೆ ಬಂದಿದ್ದಿರಿ ? " ಎಂದಳು.

" ಇಲ್ಲಿಗೆ ನಾನು ಬಂದುದು ಯಾರಿಗೂ ಗೊತ್ತಿಲ್ಲ ಎಂಬುದು ನಿಜ. ಆದರೆ ನಾನು ಗೊತ್ತಾಗದಂತೆ ಮರೆಮಾಚಿಕೊಂಡು ಬಂದಿಲ್ಲ "

" ಸಟೆ "

" ಸಟೆಯಲ್ಲ. "

" ಎಂದರೆ ? "

" ದಿಟವನ್ನು ವಿಸ್ತರಿಸಿ ಹೇಳಿದರೆ ನಂಬುವೆಯಾ ? ನಾನು ಮರೆ ಮಾಚಿಕೊಂಡೂ ಬಂದಿಲ್ಲ; ಇಲ್ಲಿಗೆ ಬರುವ ಇಚ್ಛೆಯೂ ಇರಲಿಲ್ಲ. "

ಪ್ಯಾರಿಯು ವ್ಯಂಗ್ಯವಾಗಿ "ತಂಬೂರಿಯೊಳಗಿಂದ ನಿಮ್ಮನ್ನು ಭೂತವು ಹಾರಿಸಿಕೊಂಡು ಬಂದಿತೇನು? ಇದನ್ನೇ ಹೇಳಬೇಕೆನ್ನುವಿರಿ, ಅಲ್ಲವೇ?" ಎಂದು ನುಡಿದಳು

"ಇಲ್ಲ, ಇದನ್ನು ನಾನು ಹೇಳಬಯಸುವುದಿಲ್ಲ. ಹಾರಿಸಿಕೊಂಡು ಯಾರೂ ಬಂದಿಲ್ಲ ನನ್ನ ಕಾಲುಗಳಿಂದಲೇ ನಡೆಯುತ್ತ ಬಂದಿರುವೆ. ಇದು ದಿಟ ಆದರೆ ಏಕೆ ಬಂದೆ, ಯಾವಾಗ ಬಂದೆ ಎಂಬುದನ್ನು ಹೇಳಲಾರೆ."

ಪ್ಯಾರಿಯು ಸುಮ್ಮನಾದಳು, ನಾನು "ರಾಜಲಕ್ಷ್ಮೀ, ನೀನು ನಂಬುವಿಯೋ ಇಲ್ಲವೋ ಎಂಬುದು ನನಗೆ ತಿಳಿಯದು. ಆದರೆ, ನಿಜವಾಗಿಯೂ ನಡೆದುದು ಆಶ್ಚರ್ಯಕರವಾದ ಸಂಗತಿಯಾಗಿರುವುದು" ಎಂದು ಮೊದಲಿನಿಂದ ಕೊನೆಯ ವರೆಗೆ ನಡೆದುದನ್ನು ಹೇಳಿದೆ.

ಆಲಿಸುತ್ತ ಆಲಿಸುತ್ತ ನನ್ನ ಕೈಯಲ್ಲಿಟ್ಟ ಆಕೆಯ ಕೈಯು ಕಂಪಿಸಿತು, ಆದರೆ ಆಕೆಯು ಒಂದೂ ಮಾತನ್ನಾಡಲಿಲ್ಲ ಚಕ್ಕಡಿಯ ಒಂದಿನ ಪರದೆಯು ಮೇಲಕ್ಕೆ ಹಾಕಲ್ಪಟ್ಟಿತು. ನಾನು ಹಿಂತಿರುಗಿ ನೋಡಿದೆ. ಆಕಾಶವು ಉಜ್ವಲವಾಗಿದ್ದಿತು. ನಾನೆಂದೆ "ಈಗ ನಾನು ಹೋಗಲೊ?"

ಪ್ಯಾರಿಯು ಕನಸಿನೊಳಗಿದ್ದವಳಂತೆ "ಬೇಡ!" ಎಂದಳು.

"ಬೇಡವೇಕೆ? ಈ ರೀತಿಯಾಗಿ ಹೊರಟು ಹೋಗುವುದರ ಅರ್ಥವೇನಾಗುವುದು ಗೊತ್ತೇನು?"

"ಗೊತ್ತು. ಎಲ್ಲವೂ ಗೊತ್ತುಂಟು ಆದರೆ ಈ ಜನರು ನಿಮ್ಮ ಹಿತಚಿಂತಕರು— ಸಂರಕ್ಷಕರು ಇಲ್ಲವಷ್ಟೇ ನಿಮ್ಮ ಮಾನಕ್ಕಾಗಿ ಪ್ರಾಣವನ್ನೀಯಲು?" ಎಂದು ಆಕೆಯು ಕೈಯನ್ನು ಬಿಟ್ಟು ಕಾಲು ಹಿಡಿದಳು ಮತ್ತು ಗದ್ಗದ ಸ್ವರದಿಂದ "ಕಾಂತ ದಾದಾ, ಅಲ್ಲಿಗೆ ಹಿಂತಿರುಗಿ ಹೋದರೆ ನೀವು ಜೀವಂತ ಉಳಿಯಲಿಕ್ಕಿಲ್ಲ ನೀವು ನನ್ನ ಕೂಡ ಬರಲಾರಿರಿ ಆದರೆ ನಾನು ನಿಮಗೆ ಅಲ್ಲಿಗೆ ತಿರುಗಿ ಹೋಗಗೊಡುವುದೂ ಇಲ್ಲ ನಿಮಗೆ ಟಿಕೀಟು ಕೊಂಡು ಕೊಡುವೆ; ನಿಮ್ಮ ಮನೆಗೆ ಹೋಗಿರಿ,

ಅಲ್ಲಿ ಒಂದು ಕ್ಷಣಮಾತ್ರವಾದರೂ ನೀವು ಇರಕೂಡದು." ಎಂದು ನುಡಿದಳು

"ನನ್ನ ಬಟ್ಟೆ ಬರೆಗಳು ಅಲ್ಲಿ ಇರುವವಲ್ಲ!"

"ಇರಲಿ ಬಿಡಿರಿ ಅವರ ಮನಸ್ಸಿಗೆ ಬಂದರೆ ಕಳಿಸಿಕೊಡುವರು; ಬಾರದಿದ್ದರೆ ಅಲ್ಲಿಯೇ ಇರಲಿ, ಅವು ಅಷ್ಟು ಬೆಲೆಯುಳ್ಳವೂ ಇಲ್ಲ"

"ಅವುಗಳ ಬೆಲೆ ಹೆಚ್ಚಿರುವದಿಲ್ಲವೆಂಬುದು ನಿಜ; ಆದರೆ ನನ್ನ ಹೆಸರು ಸುಮ್ಮಗೆ ಕೆಟ್ಟು ಹೋಗುವುದು, ಅದರ ಬೆಲೆ ಕಡಮೆ ಇಲ್ಲ!"

ಪ್ಯಾರಿಯು ನನ್ನ ಕಾಲುಗಳನ್ನು ಬಿಟ್ಟು ಸುಮ್ಮಗಾದಳು. ಚಕ್ಕಡಿಯು ಇದೇ ವೇಳೆಗೆ ಒಂದು ಕಡೆಗೆ ಹೊರಳಿತು. ನನ್ನೆದುರಿಗೆ ಹಿಂದಿನ ದೃಶ್ಯವು ಬಂದಿತು ಒಮ್ಮಿಂದೊಮ್ಮೆಲೆ ಪೂರ್ವದಿಕ್ಕಿನ ಆಗಸ ದೊಡನೆ ಈ ಪತಿತೆಯ ಮುಖದ ಸಾಮ್ಯವು ಇವೆಯೇನೋ ಎಂಬಂತೆ ಎನಿಸತೊಡಗಿತು. ಎರಡರ ಮಧ್ಯದೊಳಗಿಂದ ಒಂದು ಅಗ್ನಿ ಪಿಂಡವು ಅಂಧಕಾರವನ್ನು ಚದರಿಸುತ್ತ ಬರುತ್ತಿರುವುದು, ಅದರ ಆಭಾಸವೇ ನನಗೆ ಕಂಡುದು ಎಂದೂ ಎನಿಸಿತು. "ಸುಮ್ಮಗೇಕಾದೆ?" ಎಂದೆ ನಾನು.

ಪ್ಯಾರಿಯು ಒಂದು ಮ್ಲಾನವಾದ ನಗುವನ್ನು ಬೀರಿ "ಯಾವ ಲೆಕ್ಕಣಿಕೆಯಿಂದ ಇಡೀ ಜೀವನವೆಲ್ಲ ಸುಳ್ಳು ಪತ್ರಗಳನ್ನು ಬರೆಯುತ್ತಿರುವೆನೋ ಅದೇ ಲೆಕ್ಕಣಿಕೆಯಿಂದ ಈ ದಿನ ದಾನ ಪತ್ರವನ್ನು ಬರೆಯಲು ಕೈ ಮುಂದೆ ಬರುತ್ತಿಲ್ಲ. ಹೋಗುವಿರಾ? ಒಳ್ಳೇದು ಹೋಗಿರಿ. ಈ ದಿನ ೧೨ ಗಂಟೆಯು ಒಳಗಾಗಿ ಆ ಸ್ಥಳವನ್ನು ಬಿಡುವಿರೆಂಬ ಬಗ್ಗೆ ವಚನ ವನ್ನು ಕೊಡುವಿರಾ?" ಎಂದಳು.

"ಒಳ್ಳೇದು ಕೊಡುವೆ."

"ಯಾರಾದರೂ ಸರಿಯೆ, ಎಷ್ಟಾದರೂ ಸರಿಯೆ, ಒತ್ತಾಯ ಪಡಿಸಿದರೂ ಅಲ್ಲಿ ಈ ದಿನ ರಾತ್ರಿಯನ್ನು ಕಳೆಯುವುದಿಲ್ಲವಷ್ಟೆ?"

"ಇಲ್ಲ; ಕಳೆಯುವುದಿಲ್ಲ."

ಪ್ಯಾರಿಯು ಒಂದು ಉಂಗುರವನ್ನು ತೆಗೆದು ನನ್ನ ಪಾದಗಳ ಬಳಿಯಲ್ಲಿ ಇಟ್ಟಳು. ಸೆರಗನ್ನು ಎಡ ಹೆಗಲಮೇಲೆ ಹಾಕಿಕೊಂಡು ನಮಸ್ಕರಿಸಿದಳು, ಪಾದಧೂಳಿಯನ್ನು ಮಸ್ತಕದ ಮೇಲೆ ಹಚ್ಚಿಕೊಂಡು

ಉಂಗುರವನ್ನು ನನ್ನ ಜೇಬಿನಲ್ಲಿ ಹಾಕಿದಳು. ಬಳಿಕ "ಹೋಗಿರಿ, ನೀವು ಒಂದು ಒಂದೂವರೆ ಹರದಾರಿ ಹೆಚ್ಚು ನಡೆಯಬೇಕಾಗುವುದು ಎಂದು ತೋರುತ್ತಿದೆ" ಎಂದಳು.

ಚಕ್ಕಡಿಯಿಂದ ಇಳಿದೆ ಆಗ ಪ್ರಭಾತವಾಗಿತ್ತು.

ಪ್ಯಾರಿಯು ವಿನಯದಿಂದ "ನನ್ನ ಇನ್ನೂ ಒಂದು ಮಾತನ್ನು ನಡಸಿಕೊಡಬೇಕು. ಮನೆಗೆ ಹೋಗುತ್ತಲೇ ಪತ್ರಬರೆಯಬೇಕು. ಇಷ್ಟೇ" ಎಂದಳು.

ನಾನು ಒಪ್ಪಿಕೊಂಡು ಹೊರಟೆ. ಅವರು ಅಲ್ಲಿಯೇ ನಿಂತಿರುವರೊ ಅಥವಾ ಮುಂದಕ್ಕೆ ಸಾಗಿರುವರೊ ಎಂಬುದನ್ನು ನೋಡಲು ಕೂಡ ನಾನು ಒಂದು ಬಾರಿಯೂ ಹಿಂತಿರುಗಿ ನೋಡಲಿಲ್ಲ ಆದರೆ ಬಹಳ ದೂರದ ವರೆಗೆ ಪ್ಯಾರಿಯ ಆ ನಯನಗಳ ನೀರುದುಂಬಿದ, ಕರುಣೆ ಕೂಡಿದ ದೃಷ್ಟಿಯು ನನ್ನ ಬೆನ್ನುಗಳ ಮೇಲೆ ಅಪ್ಪಳಿಸಿ ಅಪ್ಪಳಿಸಿ ಕೆಳಗೆ ಬೀಳುತ್ತಿರುವುದೆಂಬುದನ್ನು ನೋಡಿದೆ.

ತಂಬೂಕ್ಕೆ ಹೋಗಿ ತಲುಪುವ ಹೊತ್ತಿಗೆ ಎಂಟು ಬಾರಿಸಿದ್ದುವು ದಾರಿಯ ಒಂದು ಬದಿಗೆ ಪ್ಯಾರಿಯು ಆ ಕಿತ್ತ ತಂಬೂದ ಮೇಲೆ ಹರಡಿದ ವಸ್ತುಗಳ ಮೇಲೆ ನನ್ನ ದೃಷ್ಟಿಯು ಬೀಳುತ್ತಲೇ ಒಂದು ನಿಷ್ಫಲ ವಾದ ಕ್ಷೋಭವು ನನ್ನ ಹೃದಯದಲ್ಲಿ ಹಾಹಾಕಾರವನ್ನೆಬ್ಬಿಸಿದಂತೆ ಎನಿಸತೊಡಗಿತು. ಮುಖವನ್ನು ತಿರುಗಿಸಿಕೊಂಡು ನೀಳವಾದ ಹೆಜ್ಜೆಯನ್ನು ಇಕ್ಕುತ್ತ ನಾನು ನನ್ನ ತಂಬೂದಲ್ಲಿ ಪ್ರವೇಶ ಮಾಡಿದೆ.

ಪುರುಷೋತ್ತಮ "ತಾವು ಬಹಳ ನಸುಕಿನಲ್ಲೇ ತಿರುಗಾಡಲು ಹೋಗಿದ್ದಿರೇನು?" ಎಂದು ಕೇಳಿದ

ಅವನ ಪ್ರಶ್ನೆಗೆ 'ಹೌದು-ಇಲ್ಲ' ಎಂದಾದರೂ ಉತ್ತರವೀಯದೆ ನಾನು ಹಾಸಿಗೆಯ ಮೇಲೆ ಕಣ್ಣು ಮುಚ್ಚಿಕೊಂಡು ಹಾಗೆಯೇ ಬಿದ್ದುಕೊಂಡೆ.

ಪ್ಯಾರಿಗೆ ಕೊಟ್ಟ ವಚನದಂತೆ ನಡೆದುಕೊಂಡೆ. ಮನೆಗೆ ಮುಟ್ಟು ತ್ತಲೆ ಆಕೆಗೆ ಒಂದು ಪತ್ರವನ್ನು ಬರೆದೆ. ಆಕೆಯಿಂದ ಉತ್ತರವೂ ಬೇಗನೇ

ಬಂದಿತು. ಪ್ಯಾರಿಯು ತನ್ನ ಪಾಟಣಾನಗರದ ಮನೆಗೆ ಬರಲು ಒತ್ತಾಯ ಪಡಿಸಲಿಲ್ಲ ಹಾಗೇ ಬಾಯಿಂದಾದರೂ ಬರಲು ಆಮಂತ್ರಣವೀಯಲಿಲ್ಲ ಎಂಬುದನ್ನು ಕುರಿತು ನಾನು ಆಲೋಚಿಸುತ್ತಿದ್ದೆ ಪತ್ರದಲ್ಲಿಯೂ ಆಕೆಯು ಬನ್ನಿರಿ ಎಂದು ಬರೆದಿರಲಿಲ್ಲ ಆದರೆ ಕೆಳಗೆ ನಿವೇದನೆಯೊಂದು ಇದ್ದಿತು "ಸುಖದ ದಿನಗಳಲ್ಲಿ ಮರೆತರೂ ಪರವಾ ಇಲ್ಲ, ದುಃಖದ ದಿನಗಳಲ್ಲಿ ಮರೆಯಬಾರದೆಂದು ಬಿನ್ನಹ."

ದಿನಗಳು ಕಳೆಯುತೊಡಗಿದುವು. ಪ್ಯಾರಿಯ ಹೆಸರು ಕ್ಷೀಣವಾಗಿ ಪ್ರಾಯಃ ವಿಲೀನವಾಗಿ ಹೋಯಿತು. ಆದರೆ ಈ ಬಾರಿ ನಾನು ಬೇಟೆಯಿಂದ ಹಿಂದಿರುಗಿ ಬಂದಬಳಿಕ ನನ್ನ ಮುಖದಲ್ಲಿ ಅಷ್ಟು ನೆಮ್ಮದಿಯಿಲ್ಲ ಯಾವುದೋ ಒಂದು ವಸ್ತುವಿನ ಅಭಾವದಿಂದ ವೇದನೆಯು ನನ್ನ ನಾಡಿ ನಾಡಿಯಲ್ಲಿ ವ್ಯಾಪ್ತವಾದಂತೆ ಎನಿಸುತ್ತಿರುವುದು? ಮತ್ತು ಹಾಸಿಗೆಯ ಮೇಲೆ ಮಲಗುತ್ತಲೆ ಅದು ಚುಚ್ಚತೊಡಗುವುದು ಎಂಬದೊಂದು ಆಶ್ಚರ್ಯಕರವಾದ ಮಾತು ನನ್ನ ದೃಷ್ಟಿಗೆ ಬೀಳತೊಡಗಿರುವುದು

ಆ ದಿನ ಹೋಳೀಹುಣ್ಣಿವೆಯ ರಾತ್ರಿ ಹಣೆಯ ಮೇಲೆ ಹಚ್ಚಿದ ಗುಲಾಲಿನ ಚೂರ್ಣವನ್ನು ಸಾಬೂನು ನೀರಿನಿಂದ ತೊಳೆದು ಸ್ವಚ್ಛ ಮಾಡಿರಲಿಲ್ಲ. ದಣಿದು ಹಾಸಿಗೆಯ ಮೇಲೆ ಮಲಗಿಕೊಂಡಿದ್ದೆ ಬಳಿಯಲ್ಲಿದ್ದ ಕಿಡಿಕಿಯು ತೆರೆದಿದ್ದಿತು ಅದರೊಳಗಿಂದ ಎದುರಿಗಿರುವ ಅರಳಿಯ ಮರದ ಎಲೆಗಳೊಳಗಿಂದ ಆಗಸವನ್ನು ಮುತ್ತಿದ ಬೆಳದಿಂಗಳನ್ನು ನೋಡುತ್ತಿದ್ದೆ. ಇಷ್ಟೇ ನೆನವು ಬರುತ್ತಿರುವುದು ಆದರೆ ಅದೇಕೆ ಬಾಗಿಲು ತೆರೆದು ನೇರವಾಗಿ ಸ್ಟೇಶನ್ನಿಗೆ ಹೋಗಿ ಪಾಟಣಾದ ಟಿಕೇಟನ್ನು ತಗೆದುಕೊಂಡು ಗಾಡಿಯಲ್ಲಿ ಕುಳಿತೆನೆಂಬುದು ನೆನಪಿಲ್ಲ ರಾತ್ರಿಯು ಕಳೆಯಿತು. ಆದರೆ ಬೆಳಗಾಗುತ್ತಲೇ 'ಬಾಢ ಸ್ಟೇಶನ್ನು ಬಂದಿದೆ. ಇನ್ನು ಪಾಟಣಾ ಬಹಳ ದೂರಿಲ್ಲ, ಎಂಬುದನ್ನು ಅರಿತಕೂಡಲೆ ಅಲ್ಲಿಯೇ ಒಮ್ಮೆಲೇ ಇಳಿದುಬಿಟ್ಟೆ. ಜೇಬಿನಲ್ಲಿ ಕೈಹಾಕಿ ನೋಡಿದೆ, ಗಾಬರಿಗೊಳ್ಳುವಂತಿರಲಿಲ್ಲ. ಚವಲಿ ಮತ್ತು ೧೦ ಬಿಲ್ಲಿ ಇದ್ದವು. ಸಂತೋಷದಿಂದ ಅಂಗಡಿಯನ್ನು ಹುಡುಕುತ್ತ ಸ್ಟೇಶನ್ನದ ಹೊರಗೆ ಹೋದೆ. ಬಳಿಯಲ್ಲಿಯೇ ಒಂದು ಅಂಗಡಿ ಸಿಕ್ಕಿತು. ಅವಲಕ್ಕಿ, ಮೊಸರು ಮತ್ತು ಸಕ್ಕರೆ ಕೂಡಿಸಿ ಭೋಜನ

ವನ್ನು ಮಾಡಿದೆ. ಅರ್ಥ ಖರ್ಚಾಯಿತು. ಆಗಲಿಬಿಡಿರಿ. ಜೀವನದಲ್ಲಿ ಈ ರೀತಿ ಅದೆಷ್ಟೋ ಖರ್ಚಾಗಿದೆ, ಅದಕ್ಕಾಗಿ ವ್ಯಸನಪಡುವುದು ಹೇಡಿತನ.

ಊರಲ್ಲಿ ತಿರುಗಾಡಿ ಬರಲು ಹೊರಟೆ, ಒಂದು ಗಂಟೆ ಕೂಡ ನಾನು ತಿರುಗಾಡಿದೆನೋ ಇಲ್ಲವೋ, ಅಷ್ಟರಲ್ಲಿಯೆ ಈ ಊರಲ್ಲಿ ಎಷ್ಟು ಉತ್ತಮವಾದ ಅವಲಕ್ಕಿ-ಮೊಸರು ಸಿಕ್ಕುವುದೊ ಅಷ್ಟೇ ಕೆಟ್ಟ ನೀರೂ ಸಿಗುತ್ತದೆ ಎಂಬುದು ಅನುಭವಕ್ಕೆ ಬಂದಿತು. ಅವಲಕ್ಕಿ ಮೊಸರು ಸಂಪೂರ್ಣ ಪಚನವಾಗಿ ಹೋಗಿದ್ದುದಲ್ಲದೆ ಹತ್ತೆಂಟು ದಿನಗಳಿಂದ ಒಂದು ತುತ್ತು ಅನ್ನವನ್ನೂ ನಾನು ಉಂಡಿಲ್ಲವೇನೋ ಎಂಬಂತೆ ಎನಿಸತೊಡಗಿತು! ಇಂತಹ ಕೆಟ್ಟ ಸ್ಥಳದಲ್ಲಿ ವಾಸಿಸುವುದು ಒಳಿತಲ್ಲವೆಂದು ಬಗೆದು ಆ ಊರನ್ನು ಬಿಡುವ ಯೋಚನೆಯಲ್ಲಿದ್ದೆ. ಇಷ್ಟರಲ್ಲಿ ಎದುರಿಗೆ ಒಂದು ಮಾವಿನ ತೋಪಿನೊಳಗಿಂದ ಹೊಗೆ ಹೊರಡುವುದು ಕಾಣಿಸಿತು.

ನಾನು ನ್ಯಾಯಶಾಸ್ತ್ರವನ್ನು ಕಲಿತಿದ್ದೆ. ಹೊಗೆಯನ್ನು ನೋಡಿ ಅಲ್ಲಿ ಅಗ್ನಿಯು ಇರಲೇಬೇಕು ಎಂಬುದನ್ನು ನಿಶ್ಚಯಮಾಡಿಕೊಂಡೆ; ಅಗ್ನಿ ಇರುವ ಉದ್ದೇಶವನ್ನು ಕಂಡು ಹಿಡಿಯಲು ಕೂಡ ನನಗೆ ಹೊತ್ತು ಹಿಡಿಯಲಿಲ್ಲ ಆದುದರಿಂದ ನಾನು ನೇರವಾಗಿ ಅತ್ತ ಹೊರಟೆ ಮೊದಲೇ ಇಲ್ಲಿಯ ನೀರು ಬಹಳ ಕೆಟ್ಟುದು ಎಂದು ಹೇಳಿರುವೆ.

ಅಹಾ, ಇದೇ ಬೇಕಾಗಿದ್ದಿತು! ನಿಜವಾದ ಸನ್ಯಾಸಿಯ ಆಶ್ರಮವು ದೊರಕಿತು! ದೊಡ್ಡ ಅಗ್ನಿಯ ಮೇಲೆ ತಂಬಿಗೆಯಲ್ಲಿ ಚಹಾಕ್ಕೆ ನೀರು ಎಸರಿಟ್ಟಿದೆ. 'ಬಾವಾ' ಕಣ್ಣು ಅರ್ಧ ಮುಚ್ಚಿ ಎದುರಿಗೆ ಕುಳಿತಿದ್ದಾರೆ. ಅವರ ಬಳಿಯಲ್ಲಿ ಗಾಂಜೆಯ ಎಲ್ಲ ಸಾಮಗ್ರಿಯಿದೆ ಒಬ್ಬ ಹುಡುಗ ಸನ್ಯಾಸಿಯು ಆಡಿನ ಹಾಲನ್ನು ಹಿಂಡುತ್ತಿರುವ, ಸೇವೆಗಾಗಿ 'ಚಹಾ' ಬೇಕು, ಅದಕ್ಕಾಗಿ ಹಿಂಡುತ್ತಿರುವ ಹಾಲನ್ನು! ಎರಡು ಒಂಟೆ, ಎರಡು ಕುದುರೆ, ಒಂದು ಕರು ಸಹಿತ ಹಸು ಇವೆ. ಅವನ್ನು ಒಂದು ಮರಕ್ಕೆ ಕಟ್ಟಲಾಗಿದೆ. ಬಳಿಯಲ್ಲೇ ಒಂದು ಚಿಕ್ಕ ತಂಬೂ ಇರುವುದು. ಒಳಗೆ ಇಣಿಕಿ ನೋಡಿದೆ. ನನ್ನ ವಯಸ್ಸಿನವನೊಬ್ಬ ಶಿಷ್ಯ ತನ್ನ ಎರಡೂ ಕಾಲುಗಳ ನಡುವೆ ಒಂದು ಕಲ್ಲು ಇಟ್ಟುಕೊಂಡು ಅದರ ಮೇಲೆ ಬೇವಿನ ಕಟ್ಟಿಗೆಯಿಂದ ಭಂಗೀ ಸೊಪ್ಪನ್ನು ಅರೆಯುತ್ತಿರುವುದು ಕಾಣಿಸಿತು.

ನಾನು ಅದನ್ನು ನೋಡಿ ಭಕ್ತಿಯಿಂದ ಉಬ್ಬಿದೆ, 'ಬಾವಾ' ಅವರ ಪಾದದಲ್ಲಿ ಹಣೆಯಿಟ್ಟು ಅವರ ಪಾದಧೂಳಿಯನ್ನು ವಸ್ತ್ರಕದ ಮೇಲೆ ಏರಿಸಿಕೊಂಡು ಕೈಜೋಡಿಸಿ ನಿಂತು ಮನದಲ್ಲಿಯೇ ಎಂದುಕೊಂಡೆ.— "ನಿನ್ನ ಸೀಮಾತೀತ ಕರುಣೆಯೆಷ್ಟು ದೇವಾ! ಎಂತಹ ಸ್ಥಳಕ್ಕೆ ನನ್ನನ್ನು ಕರೆತಂದೆ! ಸತ್ತು ಹೋಗಲಿ ಪ್ಯಾರೀ ಮುಕ್ತಿಯು ಮಾರ್ಗದ ಈ ಸಿಂಹದ್ವಾರವನ್ನು ಬಿಟ್ಟು ಇಸಿತಾದರೂ ನಾನು ಇಲ್ಲಿಂದ ಸರಿದು ಹೋದರೆ ಅನಂತ ನರಕದಲ್ಲಿಯೂ ನನಗೆ ಸ್ಥಳವು ದೊರೆಯದಿರಲಿ!"

ಸಾಧುಗಳು ಕೇಳಿದರು "ಏಕೆ ಮಗೂ?"

ನಾನು ನಿವೇದಿಸಿದೆ "ನಾನು ಗೃಹತ್ಯಾಗೀ, ಮುಕ್ತಿಪಥಾನ್ವೇಷೀ, ಹತಭಾಗೀ ಶಿಶುವಾಗಿರುವೆ, ನನ್ನ ಮೇಲೆಯೂ ದಯೆತೋರಿ ತಮ್ಮ ಚರಣದ ಸೇವೆ ಮಾಡುವ ಅಧಿಕಾರವನ್ನೀಯಿರಿ"

ಸಾಧುಗಳು ಮೃದುವಾಗಿ ನಕ್ಕು ಎರಡುಬಾರಿ ತಲೆಯಲ್ಲಾಡಿಸಿ ಸಂಕ್ಷೇಪದಲ್ಲಿ "ಮಗೂ, ಮನೆಗೆ ಹಿಂತಿರುಗಿ ಹೋಗು ಈ ದಾರಿಯು ದುರ್ಗಮವಾದುದು" ಎಂದು ಹೇಳಿದರು

ನಾನು ಕರುಣ ಕಂಠದಿಂದ ಆಗಲೇ ಉತ್ತರವಿತ್ತೆ "ಬಾಬಾ ಮಹಾ ಪಾಪಿಷ್ಠರಾದ ಜಾಗಾಯೀ ಮಾಧಾಯೀ ಎಂಬರಿಬ್ಬರು ವಶಿಷ್ಠರ ಪಾದವನ್ನು ಹಿಡಿದುಕೊಂಡು ಸ್ವರ್ಗಕ್ಕೆ ಹೋದರೆಂದು ಮಹಾಭಾರತದಲ್ಲಿ ಬರೆದಿವೆ ನಾನು ತಮ್ಮ ಚರಣವನ್ನು ಹಿಡಿದುಕೊಂಡು ಮುಕ್ತಿಯನ್ನಾದರೂ ಪಡೆಯಲಾರೆನೆ? ನಿಶ್ಚಯವಾಗಿ ಪಡೆಯುವೆ"

ಸಾಧುಗಳು ಪ್ರಸನ್ನರಾಗಿ "ನಿನ್ನ ಮಾತು ನಿಜ. ಒಳ್ಳೇದು ಮಗೂ, ರಾಮನ ಇಚ್ಛೆ, ಸಂತೋಷ" ಎಂದರು. ಹಾಲುಹಿಂಡುತ್ತಿದ್ದವನು ಬಂದು ಚಹಾ ಮಾಡಿ ಸಾಧುಗಳಿಗೆ ಕೊಟ್ಟನು ಅವರ ಸೇವೆ ಮುಗಿಯಿತು, ನಮಗೂ ಪ್ರಸಾದ ಸಿಕ್ಕಿತು.

ಸಾಯಂಕಾಲಕ್ಕಾಗಿ ಬಂಗಿಯು ತಯಾರಾಗುತ್ತಿದ್ದಿತು. ಇನ್ನೂ ಕತ್ತಲವಾಗಲು ಸ್ವಲ್ಪ ವೇಳೆ ಇದ್ದುದರಿಂದ ಆನಂದದ ಅರಡನೆಯ ಸಾಧನವನ್ನು ಹುಡುಕುತ್ತಿದ್ದರು. ಆಗ ಗಾಂಜಿಯ ಚಿಲುಮೆಯು

ಕಾಣಿಸಿತು. ಅದನ್ನು ತುಂಬಿಕೊಡಲು ಒಬ್ಬ ಶಿಷ್ಯನಿಗೆ ಸನ್ನೆ ಮಾಡಿದರು— ವಿಶೇಷ 'ಉಪದೇಶ'ವನ್ನೂ ಕೊಟ್ಟರು

ಅರ್ಧ ಗಂಟೆಯು ಕಳೆಯಿತು ಸರ್ವದರ್ಶಿಗಳಾದ ಬಾಬಾಜೀಯವರು ನನ್ನ ಮೇಲೆ ಅತ್ಯಂತ ಸಂತುಷ್ಟರಾಗಿ 'ಹೌದು ಮಗೂ, ನಿನ್ನಲ್ಲಿ ಅನೇಕ ಗುಣಗಳಿವೆ ನೀನು ನನ್ನ ಶಿಷ್ಯನಾಗಲಿಕ್ಕೆ ಅತ್ಯಂತ ಉಪಯುಕ್ತ ಪಾತ್ರನಾಗಿರುವೆ" ಎಂದರು.

ನಾನು ಅತ್ಯಂತ ಆನಂದದಿಂದ ಮತ್ತೊಮ್ಮೆ ಸಾಧುಗಳ ಪಾದಕ್ಕೆರಗಿ ಅವರ ಪಾದಧೂಳಿಯನ್ನು ಹಣೆಗೆ ಹಚ್ಚಿಕೊಂಡೆ.

ಮರುದಿನ ನಾನು ಪ್ರಾತಃಸ್ನಾನ ಮುಗಿಸಿಕೊಂಡು ಬಂದೆ ಗುರುಗಳ ಆಶೀರ್ವಾದದಿಂದ ಯಾವ ವಸ್ತುವಿನ ಅಭಾವವೂ ಇರಲಿಲ್ಲ. ಹಿರಿಯ ಶಿಷ್ಯ ಗೋಣೀಚೀಲದ ಒಂದು ಕಾವಿ ಬಟ್ಟೆಯ ಸೂಟನ್ನೂ ಹತ್ತು ಜೋಡಿ ರುದ್ರಾಕ್ಷಿ ಮಾಲೆಗಳನ್ನೂ ಒಂದು ಜೋಡಿ ಹಿತ್ತಾಳೆಯ ಕಡೆಗಳನ್ನೂ ಹೊರಗೆ ತೆಗೆದು ನನಗೆ ಕೊಟ್ಟ ಇವನ್ನೆಲ್ಲ ಸರಿಯಾಗಿ ಧರಿಸಿಕೊಂಡು ಅಗ್ನಿಯ ಬಳಿಯಿಂದ ಬೂದಿಯನ್ನು ಎತ್ತಿಕೊಂಡು ಹಣೆಗೆ ಹಚ್ಚಿಕೊಂಡೆ ಬಳಿಕ ಕಣ್ಣು ಮುಚ್ಚಿಕೊಂಡು "ಗುರುಗಳೆ, ಕನ್ನಡಿಗಿನ್ನಡಿ ಏನಾದರೂ ಇರುವುದೇನು? ಮುಖವನ್ನು ನೋಡಿಕೊಳ್ಳಬೇಕೆಂಬಾಸೆಯಾಗಿದೆ' ಎಂದೆ ಅವರಿಗೂ ರಸದ ಜ್ಞಾನವಿದ್ದಿತು. ಆದಾಗ್ಯೂ ಮುಖವನ್ನು ಸ್ವಲ್ಪ ಗಂಭೀರವಾಗಿಸಿ ಉಪೇಕ್ಷೆಯಿಂದ "ಇದೆ ಒಂದು" ಎಂದರು

"ಅದನ್ನು ಮುಚ್ಚಿ ಸ್ವಲ್ಪ ಕೊಡಬಾರದೆ?"

ಒಂದೆರಡು ನಿಮಿಷಗಳಲ್ಲಿ ಕನ್ನಡಿಯು ಬಂದಿತು. ಅದನ್ನು ತೆಗೆದುಕೊಂಡು ಮರದ ಹಿಂದೆ ಹೋದೆ ಕನ್ನಡಿಯು ಕ್ಷೌರದವನ ಕನ್ನಡಿಯಂತಿದ್ದಿತು. ಅದರಲ್ಲಿ ನನ್ನ ಮುಖವನ್ನು ನೋಡಿಕೊಂಡಾಗ ನನಗೆ ನಗೆಯು ಬಾರದಿರಲಿಲ್ಲ. ಆಗಿನ ನನ್ನ ಮುಖವನ್ನು ನೋಡಿ ಅರಮನೆಗಳಲ್ಲಿ ಜರಗುವ ಸಂಗೀತ ಕಚೇರಿಯಲ್ಲಿ ಕುಳಿತು ಬೆಲೆವೆಣ್ಣುಗಳ ಗಾಯನವನ್ನು ಕೇಳುವ ಶ್ರೀಕಾಂತ ಇವನೇ ಎಂದು ಯಾರು ಹೇಳಬಲ್ಲರು! ಇರಲಿ ಬಿಡಿ.

ಒಂದು ಗಂಟೆಯ ಬಳಿಕ ನಾನು ದೀಕ್ಷೆಯನ್ನು ತೆಗೆದುಕೊಳ್ಳಲು ಗುರುಮಹಾರಾಜರ ಬಳಿಗೆ ಹೋದೆ. ಮಹಾರಾಜರು ನನ್ನ ಮುಖವನ್ನು ನೋಡಿ ಅತ್ಯಂತ ಪ್ರೀತಿಯಿಂದ "ಮಗೂ, ಒಂದು ತಿಂಗಳಾದರೂ ನನ್ನ ಕೂಡ ಇರು" ಎಂದರು.

"ಬಹಳ ಒಳ್ಳೇದು" ಎಂದು ಅವರಿಗೆ ತಲೆಬಾಗಿ ನಮಸ್ಕರಿಸಿ ಅವರ ಪಾದಧೂಳಿಯನ್ನು ಹಣೆಗೆ ಹಚ್ಚಿಕೊಂಡು ಒಂದು ಕಡೆಗೆ ಕುಳಿತೆ. ಗುರುಮಹಾರಾಜರು ಈ ದಿನ ಅಧ್ಯಾತ್ಮವಿದ್ಯೆಯನ್ನು ಅತ್ಯಂತ ಗಂಭೀರವಾದ ಶೈಲಿಯಲ್ಲಿ ಉಪದೇಶಿಸಿದರು ವೈರಾಗ್ಯದ ಕಠೋರವಾದ ಸಾಧನೆಗಳನ್ನು ವಿವರಿಸಿದರು ಇಂದಿನ ಢೋಂಗೀ ಸಾಧುಗಳ ಕಾರ್ಯವನ್ನು ಖಂಡಿಸಿದರು. ಪರಮಾತ್ಮನ ಪಾದಪದ್ಮಗಳಲ್ಲಿ ಮನಸ್ಸನ್ನು ಸ್ಥಿರವಾಗಿಡಲು ಯಾವ ಯಾವ ಉಪಾಯಗಳನ್ನು ಮಾಡಬೇಕು ಎಂಬುದನ್ನು ಹೃದಯಂಗಮವಾಗಿ ವರ್ಣಿಸಿದರು. ಒಂದು ವಿಶಿಷ್ಟ ಜಾತಿಯ ಗಿಡದ ಒಣಗಿದ ಸೊಪ್ಪನ್ನು ಸೇದುತ್ತ ಮೂಗಿನಿಂದ ಅದರ ಹೊಗೆಯನ್ನು ಹೊರಗೆ ಬಿಡಲೂ ಪ್ರಯತ್ನಿಸದೆ ಇರುವುದರಿಂದ ಆಶ್ಚರ್ಯಕರವಾದ ಮನಸ್ಥಿರತೆಯುಂಟಾಗಿ ಮಹದುಪಕಾರವಾಗುವುದು ಎಂಬುದನ್ನು ಚೆನ್ನಾಗಿ ವಿವರಿಸಿದರು ಇತ್ತ ನನ್ನ ಅಭಿರುಚಿಯಿರುವುದೆಂಬುದನ್ನು ತೋರಿಸಿ ಕೊಟ್ಟು ನನ್ನ ಉತ್ಸಾಹವನ್ನು ಇಮ್ಮಡಿ ಮಾಡಿದರು. ಈ ರೀತಿಯಾಗಿ ನಾನು ಆ ದಿನ ಮೋಕ್ಷ ಮಾರ್ಗದ ಅನೇಕ ಗೂಢ ತತ್ತ್ವಗಳ ಉಪದೇಶವನ್ನು ಪಡೆದುಕೊಂಡು ಗುರುಮಹಾರಾಜರ ಮೂರನೆಯ ಮುಖ್ಯ ಶಿಷ್ಯ ಪದವಿಯನ್ನು ಪಡೆದೆ.

ಗುರುಮಹಾರಾಜರ ಕಠೋರ ಆಜ್ಞೆಯನ್ನು ಪಾಲಿಸುವಾಗ ಆಗುವ ಕಷ್ಟದಷ್ಟೇ ಒಳ್ಳೆಯ ಸ್ವಾದಿಷ್ಟ ಆಹಾರವು ದೊರೆಯುತ್ತಿದ್ದಿತು. ಚಹಾ, ರೊಟ್ಟಿ, ತುಪ್ಪ, ಹಾಲು, ಮೊಸರು, ಅವಲಕ್ಕಿ ಮತ್ತು ಸಕ್ಕರೆ ಮೊದಲಾದ ವಸ್ತುಗಳು ಸಿಗುತ್ತಿದ್ದುವು. ಇವನ್ನು ಪಚನಮಾಡುವ ಅನುಪಾನಗಳೂ ಸಿಗುತ್ತಿದ್ದುವು. ಇದರಿಂದ ನಮ್ಮ ಮನಸ್ಸು ಭಗತ್ಪಾದಾರವಿಂದದಲ್ಲಿ ನೆಲೆಸಲು ಸಹಾಯಕವಾಗುತ್ತಿದ್ದಿತೆಂದು ಹೇಳಬಹುದು. ಈ ಶಿಷ್ಯತ್ವದ ಫಲಸ್ವರೂಪವಾಗಿ ನನ್ನ ಬಡವಾದ ಶರೀರವೂ ಚಿಗುರಿ,

ಹೂಬಿಟ್ಟು ಮಗಮಗಿಸತೊಡಗಿತು! ಅಲ್ಲದೆ ಹೊಟ್ಟೆ ದೊಡ್ಡದಾಗಿ ಬೆಳೆಯುವ ಲಕ್ಷಣಗಳೂ ಕಾಣತೊಡಗಿದುವು.

ಭಿಕ್ಷೆಗಾಗಿ ಹೊರಗೆ ಹೋಗುವ ಕೆಲಸವಿತ್ತು. ಸನ್ಯಾಸಿಗೆ ಈ ಕೆಲಸವು ಎಲ್ಲಕ್ಕೂ ಹೆಚ್ಚಿನ ಕಾರ್ಯವಾಗದಿದ್ದರೂ ಒಂದು ಮುಖ್ಯ ಕಾರ್ಯವಾಗಿತ್ತು. ಕಾರಣವೇನೆಂದರೆ ಸಾತ್ವಿಕ ಭೋಜನಕ್ಕೂ ಇದಕ್ಕೂ ನಿಕಟ ಸಂಬಂಧವುಂಟು. ಆದರೆ ಮಹಾರಾಜರು ಇದನ್ನು ಮಾಡುತ್ತಿರಲಿಲ್ಲ, ಅವರ ಶಿಷ್ಯಂದಿರೇ ಬಾರಿಬಾರಿಯಾಗಿ ಮಾಡುತ್ತಿದ್ದರು. ಸನ್ಯಾಸಿಯ ಇತರ ಕಾರ್ಯಗಳಲ್ಲಿ ನಾನು ಎಲ್ಲ ಸಹ-ಶಿಷ್ಯಂದಿರಕಿಂತ ಬಹಳ ಮುಂದುವರೆದೆ, ಆದರೆ ಈ ಭಿಕ್ಷೆಯ ಕಾರ್ಯದಲ್ಲಿ ಮಾತ್ರ ಮುಂದುವರೆಯಲಿಲ್ಲ, ಕುಂಟುತ್ತಾ ಸಾಗಿದ್ದೆ. ನನಗೆ ಈ ಕಾರ್ಯ ಸಹಜ ಮತ್ತು ಸುಲಭವಾಗಲಿಲ್ಲ. ಆದಾಗ್ಯೂ ಒಂದು ಸರಳವಾಗಿತ್ತು. ಅದೇನೆಂದರೆ ನಾವು ಇದ್ದ ದೇಶ ಹಿಂದುಸ್ತಾನಿಗಳದು, ಬಂಗಾಲವಿರಲಿಲ್ಲ. ಒಳ್ಳೆಯದು ಯಾವುದು, ಕೆಟ್ಟದು ಯಾವುದು ಎಂಬುದನ್ನು ನಾನು ಹೇಳುತ್ತಿರುವುದಿಲ್ಲ. ನಾನು ಹೇಳುವುದಿಷ್ಟೆ— ಬಂಗಾಲದ ಹೆಣ್ಣು ಮಕ್ಕಳಂತೆ- 'ಬಾಬಾ, ಮುಂದಿನ ಮನೆಗೆ ಹೋಗಿರಿ' ಎಂದು ಅಲ್ಲಿಯ ಹೆಣ್ಣುಮಕ್ಕಳು ಹೇಳುತ್ತಿರಲಿಲ್ಲ. ಪುರುಷರೂ ಬಂಗಾಲದ ಪುರುಷರಂತೆ 'ದುಡಿಯದೆ ಭಿಕ್ಷೆ ಬೇಡುವಿರಾ?' ಎಂದು ಮುಂದೆ ಕಳಿಸುತ್ತಿರಲಿಲ್ಲ. ಶ್ರೀಮಂತರೂ ಬಡವರೂ ಯಾವ ಭೇದಭಾವವನ್ನೂ ಎಣಿಸದೆ ಪ್ರತಿಯೊಂದು ಮನೆಯವರೂ ಭಿಕ್ಷೆ-ನೀಡುವರು, ಯಾರೂ "ಇಲ್ಲ ಮುಂದೆ ಹೋಗು!" ಎಂದು ಎನ್ನುವುದಿಲ್ಲ. ಇದೇ ರೀತಿಯಾಗಿ ದಿನಗಳು ಕಳೆಯತೊಡಗಿದವು. ೧೫ ದಿನಗಳು ಸುಖರೂಪವಾಗಿ ಆ ಆಮ್ರವನದಲ್ಲಿ ಕಳೆದುಹೋದುವು. ಹಗಲು ತೊಂದರೆಯೇನೂ ಇರಲಿಲ್ಲ; ಆದರೆ ರಾತ್ರಿಯನ್ನು ಮಾತ್ರ ಸೊಳ್ಳೆಗಳ ಮೂಲಕ ಕಳೆಯುವುದಾಗುತ್ತಿರಲಿಲ್ಲ. ಆಗ ಈ ಮೋಕ್ಷಸಾಧನೆಗೆ ಬೆಂಕಿ-ಹಚ್ಚಲಿ ಎಂದು ಎನಿಸುತ್ತಿತ್ತು. ಅಲ್ಲದೆ ಚರ್ಮವನ್ನು ಇನ್ನಿಷ್ಟು ದಪ್ಪಮಾಡಿಕೊಳ್ಳದಿದ್ದರೆ ಜೀವ ಬದುಕಿ ಉಳಿಯದು ಎಂದೂ ಎನಿಸುತ್ತಿತ್ತು. ಉಳಿದ ವಿಷಯಗಳಲ್ಲಿ ಬಂಗಾಲಿಗಳು ಎಷ್ಟೇ ಶ್ರೇಷ್ಠರಿದ್ದರೂ ಚರ್ಮದ ದೃಷ್ಟಿಯಿಂದ ನೋಡಿದರೆ

ಹಿಂದುಸ್ತಾನಿಗಳೇ ಹೆಚ್ಚಿನವರು, ಅವರ ಚರ್ಮವೇ ಸನ್ಯಾಸಕ್ಕೆ ಯೋಗ್ಯವಾದುದು ಎಂಬುದನ್ನು ಒಪ್ಪಲೇಬೇಕು. ಆ ದಿನ ಮುಂಜಾನೆ ಸ್ನಾನ ತೀರಿಸಿಕೊಂಡು ಸಾತ್ವಿಕ ಭೋಜನವನ್ನು ದೊರಕಿಸುವ ಪ್ರಯತ್ನ ಮಾಡಲು ಹೊರಡುವ ಸಿದ್ಧತೆಯಲ್ಲಿದ್ದೆ, ಇಷ್ಟರಲ್ಲಿ ಗುರುಮಹಾರಾಜರು ನನ್ನನ್ನು ಕೂಗಿ ಎಂದರು—

"ಭರದ್ವಾಜ ಮುನಿ ಬಸಹಿ ಪ್ರಯಾಗಾ |
ಜಿನಹಿ ರಾಮಪದ ಅತಿ ಅನುರಾಗಾ||"

ಎಂದರೆ "ಸ್ಟ್ರೈಯಿಕ್ ದಿ ಟೆಂಟ್" (ತಂಬೂ ಕಿತ್ತಿರಿ— ಗುಡಚಾಪಿ ಕಟ್ಟಿರಿ), ಪ್ರಯಾಗಕ್ಕೆ ನಮ್ಮ ಯಾತ್ರೆಯನ್ನು ಬೆಳೆಯಿಸಬೇಕು. ಸನ್ಯಾಸಿಯ ಯಾತ್ರೆಯು ಅಷ್ಟು ಸುಲಭವಾದುದಲ್ಲ! ಆಕಳು, ಕುದುರೆ, ಮೊದಲಾದ ಪಶುಗಳನ್ನು, ಹುಡುಕಿಕೊಂಡು ಬಂದು ಅವುಗಳ ಮೇಲೆ ಸಾಮಾನುಗಳನ್ನು ಗಂಟುಮುಟ್ಟೆಗಳನ್ನು ಹೇರಿ ಹೊರಡಲನುವಾಗಲು ಒಂದು ಪ್ರಹರವಾಯಿತು. ಬಳಿಕ ಊಟ ಮಾಡಿಕೊಂಡು ಎರಡು ಹರದಾರಿ ಹೋಗುವ ಹೊತ್ತಿಗೆ ಸಾಯಂಕಾಲವಾಯಿತು. ಹೊತ್ತು ಮುಳುಗುವ ಮೊದಲೇ ಬಿರೌರಾ ಎಂಬ ಊರಿನ ಹೊರಗೆ ಒಂದು ದೊಡ್ಡ ವಟವೃಕ್ಷದ ಕೆಳಗೆ ಬೀಡುಬಿಡಲಾಯಿತು. ಸ್ಥಾನವು ಬಹಳ ರಮ್ಯವಾಗಿತ್ತು, ಆದುದರಿಂದ ಗುರುಮಹಾರಾಜರಿಗೆ ಅದು ಬಹಳ ಮನಸ್ಸಿಗೆ ಬಂದಿತು. ಇದಾಯಿತು, ಆದರೆ ಭರದ್ವಾಜ ಮುನಿಗಳ ಸ್ಥಾನದ ವರೆಗೆ ಈ ರೀತಿಯಾಗಿ ಹೋಗಿ ಮುಟ್ಟಲು ಎಷ್ಟು ತಿಂಗಳು ಹಿಡಿಯಬಹುದೆಂಬುದರ ಕಲ್ಪನೆಯನ್ನು ಮಾಡದಾದೆ.

ಈ ಬಿರೌರದ ಹೆಸರು ನನಗೆ ಇದು ವರೆಗೆ ನೆನಪುಳಿಯಲು ಒಂದು ಕಾರಣವಿದೆ. ಅದನ್ನೀಗ ಇಲ್ಲಿ ಹೇಳುವೆ. ಆ ದಿನ ಹುಣ್ಣಿಮೆಯಾಗಿದ್ದಿತು. ಆದುದರಿಂದ ನಾವು ಮೂವರೂ ಶಿಷ್ಯರು ಮೂರು ದಿಕ್ಕಿಗೆ ಭಿಕ್ಷೆಗಾಗಿ ಹೊರಟಿದ್ದೆವು. ಒಬ್ಬನೇ ಇದ್ದಿದ್ದರೆ ಉದರಪೂರ್ತಿಗಾಗಿ ಕಡಮೆ ಪ್ರಯತ್ನ ಮಾಡುತ್ತಿರಲಿಲ್ಲ. ಇವೊತ್ತು ಆ ರೀತಿಯಾಗಿ ಮಾಡಲು ಮನಸ್ಸಿರಲಿಲ್ಲ. ಹೀಗೆಯೆ ಅತ್ತಿತ್ತ ನಿರರ್ಥಕವಾಗಿ ತಿರುಗಾಡುತ್ತಿದ್ದೆ. ಒಮ್ಮಿಂದೊಮ್ಮೆಲೆ ನನಗೆ ಒಂದು ಮನೆಯ ಕಿಡಕಿಯಲ್ಲಿ ಒಬ್ಬ ಬಂಗಾಲಿ ಹುಡುಗೆಯು

ಮುಖವು ಕಾಣಿಸಿತು. ಆಕೆಯುಟ್ಟ ಸೀರೆಯು ಕೈಮಗ್ಗದ ಮೇಲೆ ನೆಯ್ದುದಾಗಿದ್ದಿತು, ಅದನ್ನು ಉಟ್ಟ ರೀತಿಯು ನನ್ನಲ್ಲಿ ಕುತೂಹಲ ಪ್ರವೃತ್ತಿಯನ್ನು ಜಾಗ್ರತಗೊಳಿಸಿತು. ಐದಾರು ದಿನಗಳಿಂದ ಈ ಊರಲ್ಲಿ ಇರುವೆ, ಪ್ರಾಯಃ ಎಲ್ಲ ಮನೆಗಳನ್ನೂ ತಿರುಗಿ ಬಂದಿರುವೆ, ಬಂಗಾಲಿ ಹೆಣ್ಣುಮಗಳ ಮಾತಂತೂ ದೂರ ಉಳಿಯಿತು, ಬಂಗಾಲಿ ಗಂಡುಸರೊಬ್ಬರ ಮುಖವೂ ನನಗೆ ಕಾಣಿಸಲಿಲ್ಲವಲ್ಲ ಎಂದು ಯೋಚಿಸಿದೆ. ನಾನು ಮನೆಯನ್ನು ಹೊಕ್ಕಕೂಡಲೆ ಆ ಹೆಣ್ಣುಮಗಳು ನನ್ನನ್ನು ನೋಡತೊಡಗಿದಳು; ನಾನು ಮನೆಯನ್ನು ಹೀಗೆ ಹೊಕ್ಕ ದಕ್ಕಾಗಿ ಅಲ್ಲ. ಸನ್ಯಾಸಿಗಳಿಗೆ ಯಾವ ಬಾಧೆಯೂ ಇಲ್ಲ ಅವರು ಮನೆಯಲ್ಲಿ ಬೇಕಾದ ಹಾಗೆ ಹೋಗಬಹುದು. ಆದರೆ ನಾನು ಆಕೆಗೆ ಬಂಗಾಲಿಯಂತೆ ಕಂಡೆ ಇರಲಿ. ಆಕೆಯ ಮುಖವು ಇಂದಿಗೂ ನನ್ನ ಸ್ಮರಣದಲ್ಲಿದೆ. ಇದಕ್ಕೆ ಕಾರಣವಿಷ್ಟೆ— ಹತ್ತು ಹನ್ನೆರಡು ವರ್ಷದ ಹುಡುಗೆಯ ಕಣ್ಣುಗಳಲ್ಲಿ ಕಂಡಷ್ಟು ಕಾರುಣ್ಯ, ಮಲಿನ ಉದಾಸ ದೃಷ್ಟಿಯನ್ನು ಮತ್ತೆಲ್ಲಿಯೂ ಕಂಡಿರಲಿಲ್ಲ. ಆಕಯ ಮುಖದಿಂದ, ಆಕೆಯ ಅಧರಗಳಿಂದ, ಆಕೆಯ ನಯನಗಳಿಂದ— ಆಕೆಯ ಸರ್ವಾಂಗ ಗಳಿಂದ ದುಃಖ ಮತ್ತು ನಿರಾಸೆಗಳು ಹೊರಚಿಮ್ಮುತ್ತಿದ್ದುವು. ನಾನು ಒಮ್ಮೆ ಬಂಗಾಲಿ ಭಾಷೆಯಲ್ಲಿ "ಸ್ವಲ್ಪ ಭಿಕ್ಷೆ ನೀಡಿ ಅಮ್ಮಾ" ಎಂದೆ. ಮೊದಲು ಆಕೆಯು ಏನನ್ನೂ ಮಾತನಾಡಲಿಲ್ಲ. ಬಳಿಕ ಆಕೆಯ ತುಟಿಗಳು ಒಂದೆರಡು ಬಾರಿ ನಡುಗಿದುವು ಮತ್ತು ಆಕೆಯು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ನನಗೆ ಮನದಲ್ಲಿಯೆ ನಾಚಿಕೆಯಾಯಿತು. ಏಕೆಂದರೆ ಅಲ್ಲಿ ಯಾರೂ ಎದುರಿನಲ್ಲಿ ಇರಲಿಲ್ಲ, ಆದಾಗ್ಯೂ ಬಳಿಯ ಬಿಡಾರಗಳಿಂದ ಬಿಹಾರಿ ಹೆಂಗುಸರ ಮಾತುಕತೆ ಕೇಳಿಬರುತ್ತಿದ್ದಿತು. ಅವರಲ್ಲಿ ಯಾರಾದರೂ ಒಬ್ಬರು ಹೊರಗೆ ಬಂದು ನಮ್ಮಿಬ್ಬರನ್ನೂ ಈ ಸ್ಥಿತಿಯಲ್ಲಿ ನೋಡಿದರೆ ಏನೆಂದು ತಿಳಿದುಕೊಂಡಾರು, ಏನೆಂದಾರು? ಎಂಬುದನ್ನು ನಾನು ಯೋಚಿಸದಾದೆ ನಾನು ಇಲ್ಲಿ ನಿಲ್ಲಬೇಕೊ ಅಥವಾ ಬಾರದೊ ಎಂಬುದನ್ನು ನಿಶ್ಚಯಿಸುವ ಮೊದಲೇ ಆ ಹುಡುಗೆಯು ಅಳುದನಿಯಿಂದ

ಅನೇಕ ಪ್ರಶ್ನೆಗಳನ್ನು ಕೇಳಿದಳು "ನೀವು ಎಲ್ಲಿಂದ ಬರುತ್ತಿರುವಿರಿ? ಎಲ್ಲಿ ಇರುವಿರಿ? ನಿಮ್ಮ ಮನೆ ವರ್ಧಮಾನ ಜಿಲ್ಲೆಯಲ್ಲಿ ಇರುವುದೇನು? ನೀವು ಅಲ್ಲಿಗೆ ಯಾವಾಗ ಹೋಗುವಿರಿ? ರಾಜಾಪುರವನ್ನು ನೋಡಿರುವಿರಾ? ಅಲ್ಲಿ ಇರುವ ಗೌರಿ ತಿವಾರಿಯನ್ನು ಬಲ್ಲಿರಾ?"

"ನಿಮ್ಮ ಮನೆ ವರ್ಧಮಾನ ಜಿಲ್ಲೆಯ ರಾಜಾಪುರದಲ್ಲಿರುವುದೇನು?" ಎಂದು ನಾನು ಕೇಳಿದೆ.

ಆ ಹುಡುಗಿಯು ಕೈಗಳಿಂದ ಕಂಬನಿಗಳನ್ನೊರಸಿಕೊಳ್ಳುತ್ತ "ಹೌದು, ನನ್ನ ತಂದೆಯ ಹೆಸರೇ ಗೌರೀ ತಿವಾರಿ ಎಂದು, ಅಣ್ಣನ ಹೆಸರು ರಾಮಲಾಲ ತಿವಾರಿ ಎಂದು. ಅವರ ಗುರುತು ನಿಮಗೆ ಇದೆಯೆ? ಮೂರು ತಿಂಗಳಾಯಿತು ನಾನು ಅತ್ತೆಯ ಮನೆಗೆ ಬಂದು. ಇನ್ನೂ ನನಗೆ ಒಂದು ಪತ್ರವೂ ಬಂದಿಲ್ಲ. ತಂದೆ, ಅಣ್ಣ, ತಂಗಿ, ತಾಯಿ, ಗಿರಿಬಾಲಾ ಮತ್ತು ಬಾಬೂ ಹೇಗಿರುವರೊ ಗೊತ್ತಿಲ್ಲ. ಆ ಅರಳಿಯ ಮರದ ಕೆಳಗೆ ನನ್ನ ಸಹೋದರಿಯ ಮಾವನ ಮನೆಯಿದೆ. ಆ ದಿನ ಅಕ್ಕ ಉರುಲು ಹಾಕಿಕೊಂಡು ಸತ್ತುಹೋದಳು. ಆದರೆ ಈ ಜನರು ಉರುಲು ಹಾಕಿಕೊಂಡು ಸತ್ತಿಲ್ಲ, ಕಾಲರಾದಿಂದ ಸತ್ತಳು ಎಂದು ಹೇಳುತ್ತಾರೆ" ಎಂದಳು.

ನನಗೆ ಅತ್ಯಂತ ಆಶ್ಚರ್ಯವಾಗಿ ನಾನು ದಿಕ್ಕು ತೋಚದವನಂತೆ ನಿಂತುಬಿಟ್ಟೆ. ಇದೇನು? ಈ ಜನರು ಪೂರ್ಣವಾಗಿ ಹಿಂದುಸ್ತಾನಿಗಳಂತೆ ಕಾಣುವರು. ಆದರೆ ಈ ಹುಡುಗಿ ಮಾತ್ರ ಶುದ್ಧ ಬಂಗಾಲಿಯಂತೆ ಕಾಣುವಳು. ಇಷ್ಟು ದೂರ ಈ ಮನೆಗೆ ಸೊಸೆಯಾಗಿ ಹೇಗೆ ಬಂದಳು? ಈಕೆಯ ಪತಿ ಮತ್ತು ಮಾವಂದಿರು ಇಲ್ಲಿಗೆ ಏನು ಮಾಡಲು ಬಂದರು? ಎಂಬುದು ತಿಳಿಯದಾಯಿತು. ನಾನು "ನಿನ್ನಕ್ಕ ಏಕೆ ಉರುಲು ಹಾಕಿಕೊಂಡಳು?" ಎಂದು ಕೇಳಿದೆ.

ಆ ಹುಡುಗಿಯು ಮತ್ತೊಮ್ಮೆ ಅತ್ತು "ಅಕ್ಕ ರಾಜಾಪುರಕ್ಕೆ ಹೋಗಬೇಕೆಂದು ಹಟ ಹಿಡಿದು ಅಳುತ್ತಿದ್ದಳು. ಊಟ ಮಾಡುತ್ತಿದ್ದಿಲ್ಲ. ಆದ್ದರಿಂದ ಆಕೆಯ ಕೂದಲಿಂದ ಆಕೆಯನ್ನು ಒಂದು ಜಂತೆಗೆ ಕಟ್ಟಿ ನಿಲ್ಲಿಸಿದರು. ಆದ್ದರಿಂದ ಉರುಲು ಹಾಕಿಕೊಂಡು ಸತ್ತಳು." ಎಂದು

ಹೇಳಿದಳು. ನಾನು ಆಕೆಯನ್ನು ವಿಚಾರಿಸಿದೆ "ನಿನ್ನ ಅತ್ತೆ ಮಾವಂದಿರು ಹಿಂದುಸ್ತಾನಿಗಳೇನು ?" ಪುನಃ ಆಕೆಯು ಅತ್ತು "ಹೌದು, ನನಗೆ ಅವರ ಮಾತು ಎಳ್ಳಷ್ಟೂ ತಿಳಿಯುವದಿಲ್ಲ. ಅವರ ಊಟವೂ ನನಗೆ ಆಗುವದಿಲ್ಲ. ನಾನು ಹಗಲು ರಾತ್ರಿ ಅಳುತ್ತಿರುವೆ. ತಂದೆಯವರು ನನಗೆ ಪತ್ರವನ್ನೂ ಬರೆಯುವದಿಲ್ಲ. ಕರೆದುಕೊಂಡೂ ಹೋಗುವುದಿಲ್ಲ." ಎಂದಳು.

"ಒಳ್ಳೇದು, ನಿನ್ನ ತಂದೆಯು ನಿನ್ನನ್ನು ಇಷ್ಟು ದೂರ ಕೊಟ್ಟು ಏಕೆ ಮದುವೆ ಮಾಡಿದ ?"

"ನಾವು ತಿವಾರಿ ಮನೆತನದವರು. ನಮ್ಮ ಜಾತಿಯಲ್ಲಿ ವಿವಾಹ ಯೋಗ್ಯ ವರ ನಮ್ಮ ನಾಡಿನಲ್ಲಿ ಸಿಕ್ಕುವುದಿಲ್ಲ"

ನಾನು "ನಿನ್ನನ್ನು ಅವರು ಹೊಡೆಯುವರೇನು ?" ಎಂದು ಕೇಳಿದೆ ಅದಕ್ಕೆ ಆಕೆಯು 'ಹೌದು ಇಗೋ ನೋಡಿರಿ!' ಎಂದು ತನ್ನ ಭುಜ, ಬೆನ್ನು, ಗಲ್ಲಗಳನ್ನು ತೋರಿಸಿದಳು ಎಲ್ಲವುಗಳ ಮೇಲೆ ಹೊಡೆತದ ಚಿಹ್ನಗಳು ಇದ್ದುವು ಪುನಃ ಆಕೆಯು ಅಳುತ್ತ "ನಾನು ಸಹ ಅಕ್ಕನಂತೆ ಉರುಲು ಹಾಕಿಕೊಂಡು ಸತ್ತು ಹೋಗುವೆ.' ಎಂದಳು.

ಆಕೆಯ ಅಳುವು ನನ್ನ ನಯನಗಳನ್ನೂ ನೀರಲ್ಲಿ ತೇಲಾಡಿಸಿತು. ನಾನು ಪುನಃ ಮಾತನಾಡದೆ, ಭಿಕ್ಷೆಯ ಮಾತೆತ್ತದೆ ಹಾಗೆಯೆ ಹೊರಗೆ ಹೋಗಿಬಿಟ್ಟೆ. ಆದರೆ, ಆ ಹುಡುಗೆಯು ನನ್ನ ಬೆನ್ನ ಹಿಂದೆ ಹಿಂದೆಯೇ ಬಂದಳು ಮತ್ತು ಎನ್ನತೊಡಗಿದಳು "ನನ್ನ ತಂದೆಯವರ ಬಳಿಗೆ ಹೋಗಿ ಈ ಸಮಾಚಾರವನ್ನು ಮುಟ್ಟಿಸುವದಿಲ್ಲವೆ? ಅವರು ಒಂದು ಬಾರಿ ನನ್ನನ್ನು ಇಲ್ಲಿಂದ ಕರೆದುಕೊಂಡು ಹೋದರೆ ಸಾಕು—ಇಲ್ಲವಾದರೆ-—" ನಾನು ಹಾಗೂ ಹೀಗೂ ಮಾಡಿ ಕೊಂಚ ತಲೆಯಲ್ಲಾಡಿಸಿ ವೇಗವಾಗಿ ಹೊರಟು ಬೇಗ ಅದೃಶ್ಯನಾದೆ. ಆ ಹುಡುಗೆಯು ಹೃದಯವಿದಾರಕ ಬಿನ್ನಹವು ನನ್ನ ಎರಡೂ ಕಿವಿಗಳಲ್ಲಿ ಗುಂಜಿಸತೊಡಗಿತು.

ಮಾರ್ಗದ ಒಂದು ಮೂಲೆಯಲ್ಲಿ ಒಬ್ಬ ವೈಶ್ಯನ ಅಂಗಡಿ ಇದ್ದಿತು. ಅಲ್ಲಿಗೆ ಹೋಗುತ್ತಲೆ ಅಂಗಡಿಕಾರನು ಎದ್ದು ನನ್ನ ಆದರ-ಸತ್ಕಾರ ಮಾಡಿದ. ನಾನು ಖಾದ್ಯ ಪದಾರ್ಥಗಳನ್ನು ಬೇಡದೆ ಮಸಿ-ಲೆಕ್ಕಣಿಕೆ-

ಕಾಗದಗಳನ್ನು ಬೇಡಿದೆ. ಅವನಿಗೆ ಕೊಂಚ ಆಶ್ಚರ್ಯವಾದರೂ ಅವನು ಅವನ್ನು ಕೊಟ್ಟನು. ನಾನು ಗೌರೀ ತಿವಾರಿಗೆ ಎಲ್ಲ ಸಮಾಚಾರವನ್ನು ವಿವರಿಸಿ ಕೊನೆಗೆ ಇದನ್ನೂ ಬರೆಯಲು ಮರೆಯಲಿಲ್ಲ. ಏನೆಂದರೆ— ಸ್ವಲ್ಪ ದಿನಗಳ ಹಿಂದೆ ಹುಡುಗೆಯ ಅಕ್ಕ ಉರುಲು ಹಾಕಿಕೊಂಡು ಸತ್ತು ಹೋಗಿರುವಳು ಮತ್ತು ಈಕೆಯೂ ಏಟು, ಅತ್ಯಾಚಾರವನ್ನು ಸಹಿಸಲಾರದೆ ಅಕ್ಕನ ದಾರಿಯನ್ನೇ ಹಿಡಿಯುವವಳಿದ್ದಾಳೆ. ನೀವು ಸ್ವತಃ ಬಂದು ಏನಾದರೊಂದು ಉಪಾಯವನ್ನು ಮಾಡದೆ ಹೋದರೆ ಮುಂದೇನಾಗುವದನ್ನು ಹೇಳಬೇಕಾದುದಿಲ್ಲ ನಿಮ್ಮ ಕಾಗದಗಳು ಬಂದರೆ ಅವು ಈ ಹುಡುಗಿಗೆ ಸಿಕ್ಕುವಂತೆ ಸಹ ಇಲ್ಲ!! ಬಳಿಕ ಕಾಗದವನ್ನು ಒಂದು ಪಾಕೀಟಿನಲ್ಲಿ ಹಾಕಿ ಅದರ ಮೇಲೆ ವಿಳಾಸವನ್ನು ಬರೆದೆ—ಗೌರೀ ತಿವಾರಿ, ರಾಜಾಪುರ ಗ್ರಾಮ, ವರ್ಧಮಾನ ಜಿಲ್ಲೆ. ಬಳಿಕ ಅದನ್ನು ಬಂದು ಮಾಡಿ ಟಪ್ಪಾಲು ಪೆಟ್ಟಿಗೆಯಲ್ಲಿ ಹಾಕಿಬಿಟ್ಟೆ. ಅದು ಗೌರೀ ತಿವಾರಿಗೆ ಮುಟ್ಟಿತೋ ಇಲ್ಲವೋ, ಮುಟ್ಟಿದ ಮೇಲೆ ಅವನೇನು ಮಾಡಿದ ಎಂಬುದು ಗೊತ್ತಿಲ್ಲ. ಆದರೆ ಈ ಸಂಗತಿಯು ಇಷ್ಟು ವರ್ಷಗಳಾದರೂ ಮರೆತಿಲ್ಲ. ಅದರ ನೆನಹು ಇನ್ನೂ ಹಾಗೆಯೇ ಇದೆ. ನಮ್ಮ ಆದರ್ಶ ಹಿಂದೂ ಸಮಾಜದ ಸೂಕ್ಷ್ಮಾತಿಸೂಕ್ಷ್ಮ ಜಾತಿಭೇದದ ವಿರುದ್ಧವಾಗಿ ಒಂದು ವಿರೋಧ-ವಿದ್ರೋಹ ಭಾವನೆಯು ಇಂದಿಗೂ ನನ್ನ ಮನದಿಂದ ಈ ಕಾರಣದ ಮೂಲಕ ಹೋಗದಾಗಿದೆ.

ಈ ಜಾತಿಭೇದದ ಸಿದ್ಧಾಂತವು ಒಳ್ಳೆಯದಾಗಿರಬಹುದು. ಈ ಜಾತಿಭೇದದ ಮೂಲಕವೇ ಹಿಂದೂ ಜಾತಿಯು ಇದು ವರೆಗೆ ಬದುಕಿರುವುದೆಂದ ಬಳಿಕ ಇದು ಬಹಳ ಯೋಗ್ಯವಾದುದು, ಸಮಾಜಹಿತಕ್ಕೆ ಅನುಕೂಲವಾದುದು ಎಂದು ಒಪ್ಪದಿರಲು ಮಾರ್ಗವೇ ಉಳಿಯುವದಿಲ್ಲ. ಎಲ್ಲಾದರೂ ಒಂದಿಬ್ಬರು ಹುಡುಗಿಯರು ದುಃಖವನ್ನು ಸಹಿಸದೆ ಉರುಲು ಹಾಕಿಕೊಂಡು ಸತ್ತಾಕ್ಷಣಕ್ಕೆ ಸಮಾಜದ ಬಂಧನಗಳನ್ನು ಸಡಿಲಿಸಲು ಯತ್ನಿಸುವುದು ಹುಚ್ಚುತನವೇ ಸರಿ. ಆದರೆ ಆ ಹುಡುಗೆಯ ಅಳುವನ್ನು ಕಿವಿಯಾರೆ ಕೇಳಿದ ಮನುಷ್ಯನಿಗೆ ಸಮಾಜದ ಈ ಕಠೋರ ಬಂಧನವನ್ನು ಕುರಿತು ವಿಚಾರ ಮಾಡಬೇಕೆಂಬ ಇಚ್ಛೆಯನ್ನು ಹತ್ತಿಕ್ಕಲಾಗುವುದಿಲ್ಲ.

ಕೇವಲ ತನ್ನ ಅಸ್ತಿತ್ವವನ್ನು ಪಶುಗಳಂತೆ ಕಾಯ್ದುಕೊಂಡು ಹೋಗುವುದೇ ಜೀವನದ ಗುರಿಯೆಂದು ವಿಚಾರ ಮಾಡಿ ಜೀವಿಸಲಾಗುವುದಿಲ್ಲ. ಅನೇಕ ಜಾತಿಗಳು ಕೇವಲ ಪಶುಪಕ್ಷಿಗಳಂತೆ ಜೀವಿಸುವುವು. ಕೋರಕೂ, ಭಿಲ್ಲರು, ಸಂತಾಲರು ಶಾಂತ-ಸಾಗರದೊಳಗಿರುವ ಅನೇಕ ದ್ವೀಪಗಳಲ್ಲಿ ವಾಸಿಸುವ ಚಿಕ್ಕ ಚಿಕ್ಕ ಜಾತಿಗಳು ಮನುಷ್ಯ-ಸೃಷ್ಟಿಯ ಕಾಲದಿಂದಲೂ ಪಶುಗಳಂತೆಯೇ ಜೀವಿಸುತ್ತ ಬಂದಿವೆ ಪಶುಗಳಲ್ಲಿರುವ ಕಾಯಿದೆ ಕಾನೂನುಗಳೇ ಅವರಲ್ಲಿಯೂ ಇವೆ, ಆಫ್ರಿಕೆಯಲ್ಲಿ ಅಮೇರಿಕೆಯಲ್ಲಿ ಕೆಲವು ಜಾತಿಗಳು ಇವೆ ಆ ಜಾತಿಗಳಲ್ಲಿಯೂ ಬಗೆಬಗೆಯ ಸಾಮಾಜಿಕ ಕಾಯಿದೆಗಳು ಇವೆ. ಆ ಕಾನೂನುಗಳ ವಿಚಾರವಾಗಿ ನಾವು ಕೇಳಿದರೆ ನಮ್ಮ ರಕ್ತವು ನೀರಾಗುವುದು ಅವು ಯುರೋಪದ ಅನೇಕ ಜಾತಿಗಳಿಗಿಂತ ಹೆಚ್ಚು ಪುರಾತನ ಕಾಲದಿಂದ ಇಂದಿನ ವರೆಗೂ ಬಾಳಿವೆ ನಮಗಿಂತಲೂ ಹೆಚ್ಚು ಪುರಾತನ ಜಾತಿಗಳಾಗಿವೆ. ಆದುದರಿಂದಲೇ ನಮಗಿಂತಲೂ ಈ ಜಾತಿಗಳು ಸಾಮಾಜಿಕ ಆಚಾರ-ವ್ಯವಹಾರಗಳಲ್ಲಿ ಶ್ರೇಷ್ಠವಾಗಿವೆ ಎಂಬ ಸಂದೇಹವು ಯಾರ ಮನದಲ್ಲೂ ಏಳಲಿಕ್ಕಿಲ್ಲವೆಂದು ನನಗೆನಿಸುತ್ತಿರುವುದು. ಸಾಮಾಜಿಕ ಸಮಸ್ಯೆಗಳು ಗುಂಪುಗುಂಪಾಗಿ ನಮ್ಮೆದುರು ಬಂದು ನಿಲ್ಲುವುದಿಲ್ಲ ಎಲ್ಲಾದರೊಂದು ಸಮಸ್ಯೆಯು ಏಳಬಹುದೇ ವಿನಾ ಯಾವಾಗಲೂ ಸಮಸ್ಯೆಗಳು ಬಹು-ಸಂಖ್ಯೆಯಲ್ಲಿ ನಮ್ಮ ಮುಂದೆ ಬರುವುದಿಲ್ಲ ಇದೇ ಬಗೆಯ ವಿಚಾರವು ಈ ತನ್ನ ಇಬ್ಬರು ಬಂಗಾಲಿ ಹೆಣ್ಣುಮಕ್ಕಳನ್ನು ಹಿಂದುಸ್ತಾನೀ ಜನರ ಮನೆಗೆ ಮದುವೆ ಮಾಡಿಕೊಡುವಾಗ ಗೌರೀ ತಿವಾರಿಯ ಮನದಲ್ಲಿ ಉತ್ಪನ್ನವಾಗಿರಬಹುದು. ಈ ಬಿಡಿಸಲಾಗದ ಪ್ರಶ್ನೆಯಿಂದ ತೊಳಲಿಬಳಲಿ ಆ ತಿವಾರಿಯು ತನ್ನ ಮಕ್ಕಳ ಬಲಿದಾನವನ್ನು ಈ ರೀತಿ ಮುಂಗಾಣದೆ ಮಾಡಿರಬಹುದು.

ಅಂಗಡಿಯಿಂದ ಎದ್ದು ನಾನು ಅಂಚೆ ಪೆಟ್ಟಿಗೆಯಲ್ಲಿ ಆ ತಿಕೀಟಿಲ್ಲದ ಕಾಗದವನ್ನು ಹಾಕಿ ನಮ್ಮ ಬಿಡಾರಕ್ಕೆ ಹೋದೆ. ನನ್ನ ಸಂಗಡಿಗರು ಇನ್ನೂ ಹಿಟ್ಟು, ಬೇಳೆ, ಅಕ್ಕಿ ಸಂಗ್ರಹಿಸಿಕೊಂಡು ಹಿಂತಿರುಗಿ ಬಂದಿರಲಿಲ್ಲ.

ಈ ದಿನ ಸಾಧು ಬಾಬಾ ಅವರು ಸ್ವಲ್ಪ ಕೋಪಗೊಂಡಂತೆ ನನಗೆ ತೋರಿತು. ಕೋಪದ ಕಾರಣವನ್ನು ಅವರೇ ಹೇಳಿದರು. "ಈ ಊರು ಸಾಧು-ಸನ್ಯಾಸಿಗಳಿಗೆ ಭಕ್ತಿ ತೋರುವಂತಹದಿಲ್ಲ. ನಮಗೆ ಬೇಕಾಗುವ ಸಾಮುಗ್ರಿಗಳನ್ನೂ ಒದಗಿಸುವುದಿಲ್ಲ. ನಾಳೆಯೆ ಇಲ್ಲಿಂದ ಬಿಡಾರವನ್ನು ಕಿತ್ತಬೇಕು" 'ಅಪ್ಪಣೆ' ಎಂದು ನಾನು ಅವರ ಮಾತನ್ನು ಒಪ್ಪಿದೆ. ಪಾಟಣಾ ಕಾಣಬೇಕೆಂಬ ಕುತೂಹಲವನ್ನು ನಾನು ಈ ದಿನ ಬಚ್ಚಿಡದಾದೆ. ಮೇಲಾಗಿ ಬಿಹಾರದ ಈ ಊರುಗಳಲ್ಲಿ ಆಕರ್ಷಣವೇ ಇರಲಿಲ್ಲ ನಾನು ಬಂಗಾಲದ ಹಳ್ಳಿಹಳ್ಳಿಗಳನ್ನು ತಿರುಗಿರುವೆ, ಅವುಗಳೊಡನೆ ಇವನ್ನು ಹೋಲಿಸಲಿಕ್ಕಾಗುವುದೇ ಇಲ್ಲ ಇಲ್ಲಿಯ ಗಂಡುಸರು-ಹೆಂಗುಸರು, ನದಿಗಳು, ಬೆಟ್ಟಗಳು, ಮರಗಳು ಆತ್ಮೀಯವಾಗಿ ಕಾಣುವುದಿಲ್ಲ ಬೆಳಗಿನಿಂದ ಸಾಯಂಕಾಲದವರೆಗೆ ಮನಸ್ಸು 'ಓಡಿಹೋಗಬೇಕು ಓಡಿಹೋಗಬೇಕು' ಎನ್ನುತ್ತಿದೆ.

ಸಾಯಂಕಾಲ ಇಲ್ಲಿ ಆ ಬೀದಿ, ಈ ಬೀದಿಯಿಂದ, ಮರದ ಕೆಳಗಿಂದ ಕೀರ್ತನೆಯ ದನಿಯು ಕೇಳಿಬರುವುದಿಲ್ಲ, ದೇವಾಲಯಗಳಲ್ಲಿ ಆ ಬಗೆಯ ಮಧುರ ಘಂಟಾನಾದವೂ ಕೇಳಿಸುವದಿಲ್ಲ. ಈ ದೇಶದ ಹೆಣ್ಣುಮಕ್ಕಳಿಗೆ ನಮ್ಮಲ್ಲಿಯ ಹೆಣ್ಣುಮಕ್ಕಳಂತೆ ಗಂಟೆಯನ್ನು ಊದಲು ಕೂಡ ಬರುವುದಿಲ್ಲ. ಈ ದೇಶದ ಮಾನವರು ಅದಾವ ಸುಖಕ್ಕಾಗಿ ಜೀವಿಸುತ್ತಿರುವರು ? ಈ ಊರುಗಳಿಗೆ ನಾನು ಬಾರದೆ ಇದ್ದರೆ ನನ್ನ ನಾಡಿನ ಊರುಗಳ ಬೆಲೆಯೂ ನನಗೆ ಗೊತ್ತಾಗುತ್ತಿರಲಿಲ್ಲ ಎಂದು ಮನದಲ್ಲಿ ಎಂಗುಕೊಳ್ಳುವೆ ನಮ್ಮ ನಾಡಿನ ಹಳ್ಳಿಗಳ ಕೆರೆಗಳಲ್ಲಿ ಕೈವಾಲವು ಹರಡಿರುತ್ತದೆ. ಹವೆಯಲ್ಲಿ ಮಲೇರಿಯಾ ಇದೆ, ಪ್ರಾಯಃ ಪ್ರತಿಯೊಬ್ಬರ ಹೊಟ್ಟೆಯಲ್ಲಿ ಪ್ಲೀಹವು ಬೆಳೆದಿರುತ್ತದೆ, ಮನೆಮನೆಯಲ್ಲಿ ಜಗಳಗಳು ನಡೆದಿರುತ್ತವೆ, ಬೀದಿಬೀದಿಗೂ ಪಕ್ಷಪಂಗಡಗಳಿವೆ, ಆದಾಗ್ಯೂ ಅಲ್ಲಿ ಜೀವನದಲ್ಲಿ ಎಷ್ಟು ರಸವಿದ್ದಿತು ! ಮನಕ್ಕೆ ಎಷ್ಟು ತೃಪ್ತಿಯಿದ್ದಿತು ! ಆಗ ಇದೆಲ್ಲವನ್ನು ನಾನು ಅರಿಯದಿದ್ದರೂ ಈಗ ಅರಿತುಕೊಳ್ಳತೊಡಗಿರುವೆ.

ಮರುದಿನ ನಮ್ಮ ಬಿಡಾರವನ್ನು ಕಿತ್ತಿ ನಾವು ಯಾತ್ರೆಯನ್ನು ಪ್ರಾರಂಭಿಸಿದೆವು. ಸಾಧುಬಾಬಾ ಅವರು ಭರದ್ವಾಜ ಮುನಿಗಳ

ಆಶ್ರಮವನ್ನು ಹತ್ತಿರ ಮಾಡಿಕೊಳ್ಳುತ್ತ ಸಾಗಿದರು: ದಾರಿಯು ಸುತ್ತಾ ಗಲಿಕ್ಕಿಲ್ಲವೆಂದೊ ನನ್ನ ಮನದೊಳಗಿನ ಮಾತನ್ನು ಅರಿತುಕೊಂಡೊ ಏನೋ ಬಾಬಾ ಅವರು ಪಾಟಣಾದಿಂದ ಇತ್ತ ಹತ್ತು ಹರದಾರಿಯು ಒಳಗೆ ಎಲ್ಲೂ ಬೀಡು ಬಿಡಗೊಡಲಿಲ್ಲ ಮನದಲ್ಲಿ ಒಂದು ವಾಸನಾ ಇದ್ದಿತು.— ಇರಲಿ, ಆದಿರಲಿ ಈಗ ನಾನು ಅನೇಕ ಪಾಪ-ತಾಪಗಳನ್ನು ಮಾಡಿರುವೆ, ಸಾಧು ಸಂಗತಿಯಲ್ಲಿ ಸ್ವಲ್ಪ ದಿನ ಕಳೆದು ಜೀವನ ಪವಿತ್ರ ಮಾಡಿಕೊಳ್ಳೋಣ ಎಂದು ಬಾಬಾ ಅವರ ಬೆನ್ನು ಹತ್ತಿರುವೆ.

ಒಂದು ದಿನ ನಮ್ಮ ಬೀಡು ಒಂದು ಕಡೆ ಬಿಟ್ಟಿತು ಆ ಸ್ಥಳದ ಹೆಸರು ಚಿಕ್ಕತೋಟ. ಈ ಸ್ಥಳ ಆರಾ ಸ್ಟೇಶನ್ನಿಗೆ ಎಂಟು ಹರದಾರಿ ದೂರದಲ್ಲಿದೆ ಈ ಊರಿನ ಓರ್ವ ಪ್ರಸಿದ್ಧ ಬಂಗಾಲಿ ಸಜ್ಜನನೊಡನೆ ನನ್ನ ಪರಿಚಯವಾಯಿತು ಅವರು ನನಗೆ ತೋರಿದ ಸದಿಚ್ಛೆಯ ವರ್ಣನೆ ಯನ್ನಿಷ್ಟು ಇಲ್ಲಿ ಮಾಡುವೆ ಅವರ ನಿಜವಾದ ಹೆಸರನ್ನು ಈಗ ಹೇಳದೆ ಅವರಿಗೆ 'ರಾಮಬಾಬೂ' ಎಂದು ಹೇಳುವುದೇ ಇಲ್ಲಿ ವಿಹಿತವೆನಿಸುವುದು. ಏಕೆಂದರೆ ಅವರು ಇನ್ನೂ ಜೀವಿಸಿರುವರು. ರಾಮಬಾಬೂ ಈ ಹಳ್ಳಿಗೆ ಹೇಗೆ ಬಂದಿದ್ದರು, ಯಾವ ರೀತಿ ಹೊಲ ಮನೆ ಗಳಿಸಿದರು ಎಂಬುದು ನನಗೆ ತಿಳಿಯದ ವಿಷಯ ಅವರು ಇನ್ನೊಂದು ಬಾರಿ ಮದುವೆಯನ್ನು ಮಾಡಿಕೊಂಡಿದ್ದರು ಮತ್ತು ಅವರು ಮೂರು ನಾಲ್ಕು ಜನ ಗಂಡು ಹೆಣ್ಣು ಮಕ್ಕಳೊಡನೆ ಅಲ್ಲಿ ಸುಖವಾಗಿ ಇದ್ದರು ಎಂದು ಮಾತ್ರ ನಾನು ಬಲ್ಲೆ.

ಬೆಳಿಗ್ಗೆ ಈ ಚಿಕ್ಕ-ತೋಟ ಮತ್ತು ದೊಡ್ಡ-ತೋಟ ಎಂಬ ಹಳ್ಳಿ ಗಳಲ್ಲಿ ವ್ಯಾಲಿ ಬೇನೆಯು ಹಬ್ಬಿದೆ ಎಂಬ ಸಮಾಚಾರವು ಕೇಳಿ ಬಂದಿತು. ಇಂತಹ ಸಂಕಟ ಸಮಯದಲ್ಲಿಯೇ ಸಾಧು ಸನ್ಯಾಸಿಗಳಿಗೆ ಸೇವೆಯು ಯಥೇಚ್ಛವಾಗಿ ಸಲ್ಲಿಸಲ್ಪಡುವುದು. ಆದುದರಿಂದಲೇ ಸಾಧು ಬಾಬಾ ಅವರು ಇಲ್ಲಿ ಸ್ಥಿರಚಿತ್ತರಾಗಿ ಉಳಿಯುವ ಸಂಕಲ್ಪ ಮಾಡಿದ್ದರು.

ಒಳ್ಳೇದು, ಸನ್ಯಾಸಿಯ ಜೀವನವನ್ನು ಕುರಿತು ಒಂದೆರಡು ಮಾತು ಗಳನ್ನು ನಾನಿಲ್ಲಿ ಹೇಳಬಯಸುವೆ. ನನ್ನ ಜೀವನದಲ್ಲಿ ನಾನು ಅನೇಕ ಸಾಧು ಸನ್ಯಾಸಿಗಳನ್ನು ಕಂಡಿರುವೆ. ಮೂರು ನಾಲ್ಕು ಬಾರಿ ಹೀಗೆಯೇ ಅವರೊಡನೆ ನಾನು ಕೂಡಿಕೊಂಡಿರುವೆ. ಅವರಲ್ಲಿ ಇರುವ ದೋಷಗಳು

ಇದ್ದೇ ಇರುತ್ತವೆ ನಾನು ಮಾತ್ರ ಗುಣಗಳನ್ನೇ ಹೇಳವೆ. ಹೊಟ್ಟೆಯ ಪಾಡಿಗಾಗಿ ಸಾಧುಗಳಾಗಿರುವವರ ಬಗ್ಗೆ ನೀವು ಬಲ್ಲಿರಿ ಅವರಲ್ಲಿಯೂ ನನಗೆ ದೋಷಗಳು ಕಾಣಿಸುವುದಿಲ್ಲ ನನ್ನ ದೃಷ್ಟಿಯೂ ಅಷ್ಟು ಸ್ಥೂಲ ವಾಗಿಲ್ಲ. ಸ್ತ್ರೀಯರ ಸಂಬಂಧವಾಗಿ ಸಂಯಮ ಅಥವಾ ಉತ್ಸಾಹದ ಅಲ್ಪತೆ ಬಹಳ ಹೆಚ್ಚು ಇದೆ. ಇವರಲ್ಲಿ ಜೀವದ ಭಯ ಬಹಳ ಕಡಿಮೆ ಇರುವುದು. 'ಯಾವಜ್ಜೀವೇತ್ ಸುಖಂ ಜೀವೇತ್' ಎಂಬ ಧ್ಯೇಯ ವಿದ್ದರೂ 'ಬಹು ದಿನಂ ಜೀವೇತ್' ಧ್ಯೇಯವನ್ನಿಟ್ಟುಕೊಳ್ಳಲಿಕ್ಕೆ ಏನು ಮಾಡಬೇಕೆಂಬ ವಿಚಾರವು ಇವರಿಗೆ ಇರುವದಿಲ್ಲ. ನಮ್ಮ ಸಾಧು ಬಾಬಾ ಅವರೂ ಹೀಗೆಯೇ ಇರುವರು. 'ಸುಖ' ಮತ್ತು 'ಜೀವೇತ್' ಎಂಬುದು ತುಚ್ಛವೆಂದು ಅವರು ತಿಳಿಯುತ್ತಿದ್ದರು!

ಸ್ವಲ್ಪ ಧೂನೀ ಅಗ್ನಿಯ ಬೂದಿ ಮತ್ತು ಕಮಂಡಲದೊಳಗಿನ ಜಲದ ಹನಿಗಳ ಪ್ರೋಕ್ಷಣೆಯಿಂದ ನಮ್ಮ ಬಿಡಾರಕ್ಕೆ ಅಗಣಿತ ವಸ್ತುಗಳು ಬರ ತೊಡಗಿದವು ಆ ವಸ್ತುಗಳನ್ನು ಕಂಡರೆ ಅವುಗಳಿಂದ ಯಾರಿಗೂ ವಿರಕ್ತಿ ಯುಂಟಾಗದು ಎಂದು ಹೇಳಬಹುದು

ರಾಮಬಾಬೂ ಅವರು ಹೆಂಡತಿಯನ್ನು ಕರೆದುಕೊಂಡು ಅಳುತ್ತಾ ಬಂದರು. ನಾಲ್ಕು ದಿನ ಜ್ವರಬಂದು ಐದನೆಯ ದಿನ ಮೈಲಿಗಳು ಅವರ ಹಿರಿಯ ಮಗನ ಮೈಮೇಲೆ ಕಾಣಿಸಿದುವು. ಚಿಕ್ಕ ಮಗು ನಿನ್ನೆ ರಾತ್ರಿ ಯಿಂದ ಜ್ವರಬಂದುದಕ್ಕಾಗಿ ಬಳಲುತ್ತಿದೆ ಅವರು ಬಂಗಾಲಿಗಳು ಎಂದು ತಿಳಿದುಕೊಂಡು ನಾನೇ ಸ್ವತಃ ಅವರ ಬಳಿಗೆ ಹೋಗಿ ಅವರ ಪರಿಚಯ ಮಾಡಿಕೊಂಡೆ.

ಇದಾದ ಬಳಿಕ ನಾನು ಕತೆಯಲ್ಲಿ ಒಂದು ತಿಂಗಳದ ಅಂತರವನ್ನು ಮಾಡುವೆ ಏಕೆಂದರೆ ಈ ಎರಡೂ ಮಕ್ಕಳು ಯಾವ ರೀತಿಯಾಗಿ ಗುಣ ಹೊಂದಿದವು ಮತ್ತು ಈ ರಾಮಬಾಬೂಗಳ ಪರಿವಾರದೊಡನೆ ಸ್ನೇಹ ಸಂಬಂಧವು ಘನಿಷ್ಠವಾಗುತ್ತ ಹೇಗೆ ಸಾಗಿತೆಂಬುದು ಒಂದು ದೊಡ್ಡ ಕತೆ ಆಗಿದೆ. ಹೇಳತೊಡಗಿದರೆ ನನಗೆ ಧೈರ್ಯವೇ ಸಾಲದಾದೀತು, ಪಾಠಕರದಂತೂ ದೂರೇ ಉಳಿಯಿತು. ಆದಾಗ್ಯೂ ನಡುವಿನ ಈ ಒಂದು ವಿಷಯವನ್ನು ಹೇಳಿಬಿಡುವೆ. ಹದಿನೈದು ದಿನಗಳನಂತರ ರೋಗದ

ಕೋಪವು ಮಿತಿಮೀರಿತು ಆಗ ಸಾಧುಬಾಬಾ ಅವರು ತಮ್ಮ ಡೇರೆಯನ್ನು ಕಿತ್ತುವ ನಿಶ್ಚಯ ಮಾಡಿದರು. ರಾಮಬಾಬೂಗಳ ಹೆಂಡತಿ ಅಳುತ್ತಳುತ್ತ "ಸನ್ಯಾಸಿ ಅಣ್ಣಾ, ನೀವು ನಿಜವಾಗಿಯೂ ಸನ್ಯಾಸಿಗಳಲ್ಲ—ನಿಮ್ಮಲ್ಲಿ ದಯಾ-ಮಾಯಾ ಇದೆ. ನವೀನ ಮತ್ತು ಜೀವನರನ್ನು ಬಿಟ್ಟು ಹೋದರೆ ಅವರೆಂದಿಗೂ ಬದುಕರು. ನೀವು ಎಲ್ಲಿಗೆ ಮತ್ತು ಹೇಗೆ ಹೋಗುವಿರೊ ನೋಡುವೆ?" ಎಂದು ನನ್ನ ಪಾದಕ್ಕೆರಗಿದಳು ಮತ್ತು ಅವನ್ನು ಗಟ್ಟಿಯಾಗಿ ಹಿಡಿದುಕೊಂಡಳು. ನನ್ನ ಕಣ್ಣುಗಳಿಂದಲೂ ನೀರು ಹರಿದವು, ರಾಮಬಾಬೂಗಳು ಕೂಡ ಹೆಂಡತಿಯ ಮಾತಿಗೆ ದನಿಗೂಡಿಸಿ ವಿನಂತಿಯನ್ನು ಮಾಡಿಕೊಳ್ಳತೊಡಗಿದರು. ಆದುದರಿಂದ ನಾನು ಸಾಧುಬಾಬಾ ಅವರ ಕೂಡ ಹೊರಡಲಿಲ್ಲ. ಸಾಧುಬಾಬಾ ಅವರಿಗೆ ಹೇಳಿದೆ "ಪ್ರಭೋ, ತಾವು ಮುಂದೆ ಸಾಗಿರಿ. ನಾನು ಪ್ರಯಾಗದಲ್ಲಾಗಲಿ, ಮತ್ತೆ ದಾರಿಯಲ್ಲಿ ಎಲ್ಲಾದರೂ ತಮ್ಮನ್ನು ಸೇರಿಕೊಂಡು ತಮ್ಮ ಪಾದಧೂಳಿಯನ್ನು ಹಣೆಗೆ ಹಚ್ಚಿಕೊಳ್ಳುವೆ. ಇದಕ್ಕೆಂದೂ ತಪ್ಪುವುದಿಲ್ಲ" ಪ್ರಭುಗಳು ಸ್ವಲ್ಪ ದಿಙ್ಮೂಢರಾದರು. ನನಗೆ ವಚನದ ಎಚ್ಚರಿಕೆಯನ್ನು ಕೊಟ್ಟು, ತಡಮಾಡಬಾರದೆಂದು ಒತ್ತಾಯದಿಂದ ಹೇಳಿ ತಮ್ಮ ದಳದೊಡನೆ ಯಾತ್ರೆಯನ್ನು ಪ್ರಾರಂಭಿಸಿದರು. ನಾನು ರಾಮಬಾಬೂಗಳ ಮನೆಯಲ್ಲಿ ಉಳಿದುಕೊಂಡೆ. ಏತನ್ಮಧ್ಯದಲ್ಲಿ ಸನ್ಯಾಸಿ-ಪ್ರಭುಗಳ ಅತ್ಯಂತ ಸ್ನೇಹಕ್ಕೆ ನಾನು ಪಾತ್ರನಾಗಿಬಿಟ್ಟಿದ್ದೆ. ಅವರ ಬಳಿಯಲ್ಲಿ ಹೀಗೆಯೆ ಇನ್ನು ಕೆಲವು ದಿನ ನಾನು ಇದ್ದುದಾಗಿದ್ದರೆ ಅವರ ಸನ್ಯಾಸಲೀಲೆಯ ಆಸನದ ಮೇಲೆ ಉತ್ತರಾಧಿಕಾರಿಯಾಗಿ ಕುಳಿತುಕೊಳ್ಳುತ್ತಿದ್ದೆ ಮತ್ತು ಅವರ ಕುದುರೆ-ಒಂಟೆಗಳ ಮೇಲೆ ನನ್ನ ಹಕ್ಕನ್ನು ಸ್ಥಾಪಿಸಿಬಿಡುತ್ತಿದ್ದೆ ಎಂಬುದರಲ್ಲಿ ಇನಿತೂ ಸಂದೇಹವಿಲ್ಲ. ಇರಲಿ ಬಿಡಿರಿ ಈ ಮಾತು. ಕೈಗೆ ಬಂದ ಲಕ್ಷ್ಮಿಯನ್ನು ಕಾಲಿನಿಂದ ಒದೆದು, ಹಿಂದಿನ ಮಾತನ್ನು ನೆನಸಿಕೊಂಡು ವ್ಯಥೆಪಡುವುದರಿಂದ ಈಗೇನು ಪ್ರಯೋಜನ?

ಇಬ್ಬರೂ ಬಾಲಕರು ಗುಣಹೊಂದಿದರು. ಮೈಲೀ ಬೇನೆಯು ಈ ಬಾರಿ ನಿಜವಾಗಿಯೂ ರೌದ್ರಾವತಾರವನ್ನು ತಾಳಿದ್ದಿತು. ಈ ಬೇನೆಯು

ಲೀಲೆಯನ್ನು ಕಣ್ಣಾರೆ ಕಾಣದವರು ಯಾರಾದರೂ ಬರೆದ ಲೇಖನವನ್ನು ಓದಿ, ಕೇಳಿ, ಅದರ ನಿಜವಾದ ಕಲ್ಪನೆಯನ್ನು ಮಾಡಿಕೊಳ್ಳುವರೆಂಬುದ ಅಸಂಭವ. ಆದ್ದರಿಂದ ಈ ಅಸಂಭವ ಕಾರ್ಯವನ್ನು ಸಂಭವ ಮಾ ತೋರಿಸುವ ಹವ್ಯಾಸಕ್ಕೆ ನಾನು ಹೋಗುವುದಿಲ್ಲ ಜನರು ಊರನ್ನು ಬಿಟ್ಟು ಓಡಿಹೋಗತೊಡಗಿದರು. ವಿವೇಕ-ವಿಚಾರ ಶೂನ್ಯರಾಗಿ ಕಾಲಿ ಬುದ್ಧಿ ಹೇಳಿದರು. ಯಾವುದಾದರೊಂದು ಮನೆಯಲ್ಲಿ ಇಣಿಕಿ ನೋ ದಾಗ ತಾಯಿಯೊರ್ವಳು ತನ್ನ ರೋಗಪೀಡಿತ ಮಕ್ಕಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತಿರುವ ದೃಶ್ಯವು ಕಣ್ಣಿಗೆ ಬೀಳುತ್ತಿದ್ದಿತು

ರಾಮಬಾಬೂಗಳೂ ಒಂದು ಚಕ್ಕಡಿಯಲ್ಲಿ ತಮ್ಮ ಸಾಮಾನ ಗಳನ್ನೆಲ್ಲ ಹೇರಿದರು. ಎಷ್ಟೋ ದಿವಸ ಮೊದಲೇ ಊರನ್ನು ಬಿ ಬೇಕೆಂದಿದ್ದರು. ಆದರೆ ನಿರುಪಾಯರಾಗಿ ಹಾಗೆ ಮಾಡಿರಲಿಲ್ಲ ಈ ಐದಾರು ದಿನಗಳಿಂದ ನನ್ನ ಮೈಯಲ್ಲಿ ಎಷ್ಟು ನೆಮ್ಮದಿಯಿರಲಿಲ್ಲ. ರಾತ್ರಿ ಯಲ್ಲಿ ಎಚ್ಚತ್ತಿರುವುದರಿಂದ, ಪರಿಶ್ರಮದಿಂದ ಹೀಗೆ ಆಗುತ್ತಿರುವುದೊ ಏನೊ ಎಂಬಂತೆ ಎನಿಸುತ್ತಿತ್ತು. ಆದಿನ ಬೆಳಗಿನಿಂದಲೇ ತಲೆ ನೋಯ ತೊಡಗಿತು. ಊಟವು ರುಚಿಹತ್ತದಿದ್ದರೂ ಮಧ್ಯಾಹ್ನ ಉಂಡುದೇ ಸಾಯಂಕಾಲ ವಾಂತಿಯಾಗಿ ಹೋಯಿತು. ರಾತ್ರಿ ೯-೧೦ ಗಂಟೆಗೆ ಜ್ವ ಬಂದಿವೆಯೆಂದು ಎನಿಸಿತು ಆ ದಿನ ರಾತ್ರಿ ಮನೆಯವರೆಲ್ಲರೂ ಎಚ್ಚ ತ್ತಿದ್ದರು, ಹೊರಡುವ ಸಿದ್ಧತೆಯಲ್ಲಿ ತೊಡಗಿದ್ದರು. ಬಹಳ ರಾತ್ರಿ ಯಾಗಿತ್ತು, ಆಗ ರಾಮಬಾಬುಗಳ ಹೆಂಡತಿಯು ನನ್ನ ಕೋಣೆಯೊಳ ಹೊರಗಿಂದ ಇಣಿಕಿ ನೋಡಿ “ಸನ್ಯಾಸಿ ಅಣ್ಣ, ನೀವೂ ನಮ್ಮ ಕೂ ಆರಾಡವರೆಗೆ ಬರುವುದಿಲ್ಲವೆ?” ಎಂದು ಕೇಳಿದಳು.

“ಬರುವೆ. ಅಗತ್ಯವಾಗಿ ಬರುವೆ ಆದರೆ ನೀವು ನನಗೆ ನಿಮ್ಮ ಗಾಡಿಯಲ್ಲಿ ಸ್ವಲ್ಪ ಸ್ಥಳವನ್ನು ಕೊಡಬೇಕಾಗುವುದು.”

ಸಹೋದರಿಯು ಉತ್ಸುಕತೆಯಿಂದ “ಅದು ಹೇಗೆ ಸಾಧ್ ಸನ್ಯಾಸಿ ಅಣ್ಣ ? ಗಾಡಿಗಳು ಎರಡೇ ದೊರೆತಿವೆ. ಅವುಗಳಲ್ಲಿ ನವ ಗೋಸ್ಕರವೇ ಸ್ಥಳ ಸಾಲದು” ಎಂದಳು.

"ನಡೆಯುವಷ್ಟು ಶಕ್ತಿ ನನಗಿಲ್ಲ ತಂಗೀ, ಬೆಳಗಿನಿಂದ ಜ್ವರ ಬಂದಿದೆ."

"ಜ್ವರ? ಏನು ಹೇಳುತ್ತಿರುವಿರಿ?" ಎಂದು ಉತ್ತರದ ದಾರಿ ಕಾಯದೆ ಮುಖವನ್ನು ಕಪ್ಪಾಗಿಸಿಕೊಂಡು ಹೊರಟುಹೋದಳು.

ಎಷ್ಟು ಹೊತ್ತಿನ ತನಕ ನಾನು ಮಲಗಿದ್ದೆನೆಂಬುದು ನನಗೆ ಗೊತ್ತಿಲ್ಲ. ಎದ್ದು ನೋಡಿದೆ, ಹೊತ್ತು ಬಹಳ ಏರಿತ್ತು ಮನೆಯ ಪ್ರತಿಯೊಂದು ಕೋಣೆಗೂ ಬೀಗ ಹಾಕಿದೆ, ಮನುಷ್ಯ ಪ್ರಾಣಿಯ ಸುಳಿವೇ ಇಲ್ಲ.

ಈ ಮನೆಯ ಹೊರಗೆ ಇದ್ದ ಒಂದು ಕೋಣೆಯಲ್ಲಿ ನಾನಿದ್ದೆ. ಅದರ ಎದುರಿಗಿಂದಲೇ ಒಂದು ದಾರಿಯು ಆರಾ ಸ್ಟೇಶನಕ್ಕೆ ಹೋಗಿರುವುದು ಈ ದಾರಿಯಿಂದ ಪ್ರತಿ ದಿವಸ ಐದಾರು ಚಕ್ಕಡಿಗಳು ಮರಣಕ್ಕೆ ಅಂಜಿ ಓಡಿಹೋಗುವ ನರನಾರಿಯರ ಸಾಮಾನುಗಳನ್ನು ಹೇರಿಕೊಂಡು ಹೋಗುತ್ತಿರುವುವು ಇಡಿ ದಿನ ಪ್ರಯತ್ನಪಟ್ಟು ನಾನು ಒಂದು ಚಕ್ಕಡಿಯಲ್ಲಿ ಸ್ಥಾನವನ್ನು ಪಡೆದುಕೊಂಡು ಕುಳಿತೆ. ನನ್ನನ್ನು ಗಾಡಿಯಲ್ಲಿ ದಯೆ ತೋರಿ ಕುಳ್ಳಿರಿಸಿಕೊಂಡ ಮುದುಕ ಬಿಹಾರ-ಪ್ರಾಂತೀಯನು ನನ್ನನ್ನು ಸ್ಟೇಶನದ ಬಳಿ ಒಂದು ಮರದ ಕೆಳಗೆ ಇಳಿಸಿದನು ಆಗ ಇನ್ನೂ ನಸುಕಾಗಿತ್ತು. ಆಗ ಕುಳ್ಳಿರುವಷ್ಟು ಸಾಮರ್ಥ್ಯವೂ ನನ್ನಲ್ಲಿರಲಿಲ್ಲ ಅಲ್ಲಿಯೆ ಅಡ್ಡಾದೆ ಬಳಿಯಲ್ಲೆ ಪರಿತ್ಯಕ್ತ ತಗಡಿನ ಒಂದು ಮನೆಯಿದ್ದಿತು ಮೊದಲು ಅದು ಪ್ರಯಾಣಿಕರ ಬಂಗ್ಲೆಯು; ಈಗ ಅದು ಎತ್ತುಗಳನ್ನು ಕಟ್ಟಲು ಉಪಯೋಗಿಸಲ್ಪಡುತ್ತಿತ್ತು. ಈ ಮುದುಕ ಒಬ್ಬ ಯುವಕ ಬಂಗಾಲಿಯನ್ನು ಸ್ಟೇಶನದಿಂದ ಕರೆದುಕೊಂಡು ಬಂದ ಅವನ ದಯೆಯಿಂದ ಅನೇಕ ಕೂಲಿಗಳು ನನ್ನನ್ನು ಹೊತ್ತುಕೊಂಡು ಆ ತಗಡಿನ ಮನೆಗೆ ತಂದು ಹಾಕಿದರು ಆ ಯುವಕನ ಪರಿಚಯವನ್ನು ನಾನಿಲ್ಲಿ ಕೊಡಲಾರೆ ನನ್ನ ದುರ್ಭಾಗ್ಯ, ಅವನ ಪರಿಚಯವನ್ನು ಆಗ ಮಾಡಿಕೊಳ್ಳದೆ ಹೋದೆ. ಐದಾರು ತಿಂಗಳ ನಂತರ ಅವನ ಪರಿಚಯ ಮಾಡಿಕೊಳ್ಳುವ ಸುಯೋಗವು ನನಗೆ ದೊರಕಿತು, ಅಷ್ಟೊತ್ತಿಗೆ ಅವನು ಮೈಲೀಬೇನೆಗೆ ತುತ್ತಾಗಿ ಈ ಲೋಕವನ್ನು ಬಿಟ್ಟುಹೋಗಿದ್ದ. ಅವನ ಬಗ್ಗೆ ವಿಚಾರಿಸಲಾಗಿ ಅವನು ಪೂರ್ವ

ಬಂಗಾಲದವ, ತಿಂಗಳೊಂದಕ್ಕೆ ಹದಿನೈದು ರೂಪಾಯಿ ಸಂಬಳದ ಮೇಲೆ ಸ್ಟೇಶನ್ನಿನಲ್ಲಿ ನೌಕರಿಯನ್ನು ಮಾಡುತ್ತಿದ್ದ, ಅವನೇ ನನಗೆ ಎಲ್ಲಿಂದಲೊ ಹರಕು ಬಟ್ಟೆಗಳನ್ನು ತಂದು ಹೊದಿಸಿದ್ದ, ತಾನು ಕೈಯಿಂದ ಅಡಿಗೆ ಮಾಡಿಕೊಂಡು ಊಟಮಾಡಿ ಬೇರೊಬ್ಬರ ಮನೆಯಲ್ಲಿ ಇರುವೆನೆಂದು ಹೇಳಿ ಬಲವಂತದಿಂದ ಔಷಧ ಕುಡಿಸಿ 'ಅಂಜಬೇಡಿರಿ, ಯಾರಾದರೂ ಸ್ವಜನರಿದ್ದರೆ ಹೇಳಿರಿ. ತಾರು ಮಾಡುವೆ' ಎಂದು ಹೇಳಿದ್ದ ಎಂಬುದು ತಿಳಿದುಬಂದಿತು. ಆಗಿದ್ದ ಜ್ವರದಲ್ಲಿ ನಾನು ಹೆಚ್ಚು ವಿಚಾರ ಮಾಡಿದ್ದರೆ ಇನ್ನೂ ಜ್ವರ ಹೆಚ್ಚಾಗಿ ಎಚ್ಚರವನ್ನು ನಾನು ಕಳೆದುಕೊಳ್ಳುವಂತಹ ಪರಿಸ್ಥಿತಿ ಇದ್ದಿತು. ತಾರಿನ ಮಾತನ್ನು ಅವನು ಹೇಳುವಾಗ ನಾನು ಆ ಬಡವನಿಗೆ ಏಕೆ ಭಾರವಾಗಬೇಕೆಂಬುದನ್ನು ಕುರಿತು ವಿಚಾರಿಸತೊಡಗಿದೆ. ಆ ಬಡವನ ಹಣವನ್ನು ತಾರಿಗಾಗಿ ವೆಚ್ಚ ಮಾಡಿಸಬೇಕೇಕೆ? ಎಂದು ನಾನು ಸುಮ್ಮನಿದ್ದೆ. ಅವನು ಸ್ವತಃ ಸಾಯಂಕಾಲ ನೌಕರಿಯಿಂದ ಬಿಡುವು ದೊರಕಿಸಿಕೊಂಡು ದೀಪವನ್ನು ತಂದ. ಆಗ ನನಗೆ ಜ್ವರ ಬಹಳ ಬಂದಿದ್ದುವು. ನಾನು ಅವನನ್ನು ಬಳಿಗೆ ಕರೆದು "ನನಗೆ ಎಚ್ಚರ ಇರುವ ವರೆಗೆ ಆಗಾಗ್ಗೆ ಬಂದು ನೋಡುತ್ತಿರಬೇಕು. ಎಚ್ಚರ ತಪ್ಪಿದ ಬಳಿಕ ಆಗುವುದಾಗಲಿ, ನೀನು ಕಷ್ಟಪಡಬೇಡ" ಎಂದು ಹೇಳಿದೆ

ಮುಖ-ತಪ್ಪಿಸುವ ಮನುಷ್ಯನಿದ್ದ ಅವ. ಮಾತಾಡುವ ಧೈರ್ಯ ಅವನಲ್ಲಿ ಇರಲಿಲ್ಲ; "ಇಲ್ಲ, ಇಲ್ಲ" ಎಂದು ಅವನು ಸುಮ್ಮನಾದ

"ಆತ್ಮೀಯರಿಗೆ ತಾರು ಕಳುಹಲೇನು ಎಂದು ಕೇಳಿದ್ದಿರಿ. ಆದರೆ ನಾನು ಸನ್ಯಾಸಿ ನಿಜವಾಗಿ ನೋಡಿದರೆ ನನ್ನವರು ಯಾರೂ ಇಲ್ಲ ಆದರೂ ನೀವು ಪಾಟನಾದಲ್ಲಿರುವ ಪ್ಯಾರೀ ಬಾಯಿಗೆ ಶ್ರೀಕಾಂತ ಆರಾ ಸ್ಟೇಶನ್ನಿನ ಬಳಿ ತಗಡಿನ ಒಂದು ಮನೆಯಲ್ಲಿ ಮರಣಾಸನ್ನನಾಗಿ ಬಿದ್ದಿರುವ—ಎಂದು ಒಂದು ಕಾರ್ಡು ಬರೆದರೆ ಸಾಕು."

ಅವನು ಅತ್ಯಂತ ವ್ಯಗ್ರತೆಯಿಂದ "ಈಗಲೇ ಬರೆಯುವೆ, ತಾರನ್ನು ಕೊಡುವೆ" ಎಂದು ಹೊರಟುಹೋದ. ನಾನು ಮನದಲ್ಲಿಯೆ ಎಂದುಕೊಂಡೆ "ದೇವಾ, ಆಕೆಗೆ ಸುದ್ದಿಯು ಬೇಗ ತಿಳಿಯಲಿ!"

* * *

ಎಚ್ಚರ ಬಂದ ಮೇಲೆ ನನ್ನ ಸ್ಥಿತಿಯು ನನಗೇ ತಿಳಿಯದಾಯಿತು. ಹಣೆಯ ಮೇಲೆ ಕೈಯಿಟ್ಟು ನೋಡಿದೆ—ಐಸ್‌ಬ್ಯಾಗ್ ಇತ್ತು. ಕಣ್ಣು ಬಿಟ್ಟು ನೋಡಿದೆ—ಮಂಚದ ಮೇಲೆ ಮಲಗಿದ್ದೆ. ಎದುರಿಗೆ ಒಂದು ಸ್ಟೂಲಿನ ಮೇಲೆ ಔಷಧದ ಮೂರು ನಾಲ್ಕು ಬಾಟಲಿಗಳಿವೆ. ಅದರ ಬಳಿಯಲ್ಲಿ ಒಬ್ಬ ಒಂದು ಹೊರಸಿನ ಮೇಲೆ ಕೆಂಪು ಚಾದರವನ್ನು ಹೊದ್ದುಕೊಂಡು ಮಲಗಿರುವ ಬಹಳ ಹೊತ್ತಿನ ವರೆಗೆ ನನಗೆ ಯಾವುದೂ ನೆನಪು ಬರಲಿಲ್ಲ, ಬಳಿಕ ಅದೆಷ್ಟೊ ಸ್ವಪ್ನಗಳನ್ನು ನಾನು ನೋಡಿರುವೆನೆಂದು ಎನಿಸಿತು. ಬಹಳ ಜನರು ಬರುವುದು-ಹೋಗುವುದು, ಡೋಲಿಯಲ್ಲಿ ಹಾಕುವುದು, ತಲೆಯನ್ನೆತ್ತಿ ಔಷಧ ಕುಡಿಸುವುದು, ಈ ಮುಂತಾದ ಅನೇಕ ಸಂಗತಿಗಳನ್ನು ನೋಡಿದೆ.

ಸ್ವಲ್ಪ ಹೊತ್ತಿನ ಮೇಲೆ ಆ ವ್ಯಕ್ತಿಯು ಎದ್ದು ಕುಳಿತ. ಅವನು ಬಂಗಾಲಿ ಎಂದು ತೋರಿತು; ವಯಸ್ಸು ಅವನದು ಹದಿನೆಂಟು ಹತ್ತೊಂಬತ್ತಕ್ಕೆ ಮಿಕ್ಕಿಲ್ಲ ಆಗ ನನ್ನ ದಿಂಬಿನ ಬಳಿಯಲ್ಲಿ ಕುಳಿತ ವ್ಯಕ್ತಿಯು ಅವನನ್ನು ಸಂಬೋಧಿಸಿತು; ಅದರ ದನಿಯ ಗುರುತು ನನಗೆ ಸಿಕ್ಕಿತು.

ಪ್ಯಾರಿಯು ಅತ್ಯಂತ ಮೃದುಸ್ವರದಿಂದ ‘ಬಂಕೂ, ಬರ್ಫವನ್ನು ಇನ್ನೊಂದು ಬಾರಿ ಏಕೆ ಬದಲಿಸಲಿಲ್ಲ ಮಗೂ!’ ಎಂದಳು

“ಬದಲಾಯಿಸುವೆ. ನೀನು ಸ್ವಲ್ಪ ಮಲಗಿಕೊ ಅಮ್ಮಾ ಡಾಕ್ಟರರು ಮೈಲೀಬೇನೆಯಲ್ಲವೆಂದು ಹೇಳಿ ಹೋದ ಬಳಿಕ ಅಂಜಿಕೆ ಏನೂ ಇಲ್ಲಮ್ಮ”

“ಡಾಕ್ಟರರು ಭಯವಿಲ್ಲವೆಂದು ಹೇಳಿದರೆ, ಹೆಂಗುಸರ ಭಯ ದೂರಾಗುವುದೇನು? ನೀನು ಚಿಂತಿಸಬೇಕಾಗಿಲ್ಲ ಬಂಕೂ, ನೀನು ಬರಫನ್ನು ಬದಲಾಯಿಸಿ ಮಲಗಿಕೊ, ಮತ್ತೆ ರಾತ್ರಿ ಪುನಃ ನೀನು ಏಳಬೇಕಾಗಿಲ್ಲ.”

ಬಂಕೂ ಬಂದು ಬರ್ಫವನ್ನು ಬದಲು ಮಾಡಿದ ಪುನಃ ಆ ಹೊರಸಿನ ಮೇಲೆ ಮಲಗಿದ ಸ್ವಲ್ಪ ಹೊತ್ತಿನ ಮೇಲೆ ಅವನು ಗೊರಕೆ ಹೊಡೆಯತೊಡಗಿದ. ಆಗ ನಾನು ಮೆಲ್ಲಗೆ ಕೂಗಿದೆ—

“ಪ್ಯಾರೀ!”

ಪ್ಯಾರಿಯು ಬಾಗಿ ಹಣೆಯ ಮೇಲಿನ ಜಲಬಿಂದುಗಳನ್ನು ತನ್ನ ಸೆರಗಿನಿಂದ ಒರೆಸುತ್ತ "ನನ್ನನ್ನು ಗುರುತಿಸುವಿರಾ? ಈಗ ಹೇಗಿದೆ? ನಿನ್ನೆ—" ಎಂದಳು.

"ಚೆನ್ನಾಗಿದೆ. ಯಾವಾಗ ಬಂದೆ? ಇದು ಆರಾ ಏನು?"

"ಹೌದು, ಆರಾ ನಾಳೆ ನಾವು ಊರಿಗೆ ಹೊರಡೋಣ."

"ಎಲ್ಲಿಗೆ?"

"ಪಾಟನಾಕ್ಕೆ. ಮನೆಗೆ ಕರೆದುಕೊಂಡು ಹೋಗದೆ ಎಲ್ಲಾದರೂ ನಿಮ್ಮನ್ನು ಬಿಟ್ಟು ಹೋಗುವೆನೇನು?"

"ಈ ಹುಡುಗನಾರು ರಾಜಲಕ್ಷ್ಮಿ?"

"ನನ್ನ ಸವತಿಯ ಮಗ. ಆದರೆ ನನ್ನ ಹೊಟ್ಟೆಯ ಮಗನಂತೆಯೇ ಇರುವ. ನನ್ನ ಹತ್ತಿರ ಇದ್ದುಕೊಂಡು ಪಾಟನಾ ಕಾಲೇಜಿನಲ್ಲಿ ಓದುತ್ತಿರುವ ಇನ್ನು ಹೆಚ್ಚಿಗೆ ಈ ದಿನ ಮಾತನಾಡಬೇಡಿರಿ—ನಾಳೆ ಎಲ್ಲವನ್ನೂ ಹೇಳುವೆ" ಎಂದು ಪ್ಯಾರಿಯು ನನ್ನ ಬಾಯ ಮೇಲೆ ಅಂಗೈಯನ್ನು ಇಟ್ಟು ಬಾಯನ್ನು ಬಂದು ಮಾಡಿದಳು.

ನಾನು ಕೈಯನ್ನು ಮುನ್ನೀಡಿ ಆಕೆಯ ಬಲಗೈಯನ್ನು ಹಿಡಿದು ಕೊಂಡು ಮಗ್ಗುಲಾಗಿ ಮಲಗಿದೆ.

ನನಗೆ ಬಂದ ಜ್ವರ ಮೈಲಿಯಿಂದಲ್ಲ ಜ್ವರದ ಕಾರಣ ಬೇರೆಯೇ ಇದ್ದಿತು. ವೈದ್ಯ ಶಾಸ್ತ್ರದಲ್ಲಿ ನಿಶ್ಚಯವಾಗಿಯೂ ಅದರ ಹೆಸರು ಬಹಳ ಭಯಂಕರವಾಗಿತ್ತು, ಅದು ಈಗ ನೆನಪಿಲ್ಲ ನನ್ನ ಕಾಯಿಲೆಯ ಸುದ್ದಿಯನ್ನು ಕೇಳಿ ಪ್ಯಾರಿಯು ತನ್ನ ಮಗ, ಇಬ್ಬರು ಆಳುಮಕ್ಕಳನ್ನು ಕರೆದುಕೊಂಡು ಬಂದಳು. ಒಬ್ಬ ದಾಸಿಯೂ ಜೊತೆಯಲ್ಲಿದ್ದಳು, ಆ ಟೆನ್ನಿನ ಮನೆಯೊಳಗಿಂದ ಒಂದು ಬಾಡಿಗೆಯ ಮನೆಗೆ ಸಾಗಿಸಲಾಯಿತು ಮತ್ತು ಒಳ್ಳೆಯ ಹಾಗೂ ಕೆಟ್ಟ ಚಿಕಿತ್ಸಕರೆಲ್ಲರನ್ನೂ ಒಟ್ಟು ಗೂಡಿಸಲಾಯಿತು ಹೀಗೆ ಮಾಡದೆ ಹೋಗಿದ್ದರೆ ಯಾವ ಹಾನಿಯಾ ಗದಿದ್ದರೂ 'ಭಾರತವರ್ಷ' * ದ ಪಾಠಕ-ಪಾಠಿಕೆಯರಿಗೆ ಶ್ರೀಕಾಂತನ

* ಶ್ರೀಕಾಂತನ ಈ ಭ್ರಮಣ ವೃತ್ತಾಂತವು ಬಂಗಾಲದ ಪ್ರಸಿದ್ಧ ಮಾಸಿಕ ಪತ್ರಿಕೆಯಾದ 'ಭಾರತ ವರ್ಷ'ದಲ್ಲಿ ಧಾರಾವಾಹಿಯಾಗಿ ಅಚ್ಚಾಗಿದ್ದಿತು.

ಭ್ರಮಣ ವೃತ್ತಾಂತವನ್ನು ಓದುವ ತಾಳ್ಮೆ ಎಷ್ಟಿದೆಯೆಂಬುದು ಜಗತ್ತಿಗೆ ತಿಳಿಯದೆ ಹೋಗುತ್ತಿದ್ದಿತು!

ಬೆಳಿಗ್ಗೆ ಎದ್ದೊಡನೆಯೇ ಪ್ಯಾರಿಯು "ಬಂಕೂ, ಈಗಲೇ ಹೋಗಿ ಸೆಕಂಡಕ್ಲಾಸ್ ಡಬ್ಬಿಯೊಂದನ್ನು ರಿಝರ್ವ ಮಾಡಿ ಬಾ, ಒಂದು ಕ್ಷಣ ಕೂಡ ಇಲ್ಲಿ ಇರುವ ಧೈರ್ಯವಿಲ್ಲ ನನಗೆ." ಎಂದಳು.

ಬಂಕೂಗೆ ಇನ್ನೂ ನಿದ್ದೆ ಪೂರ್ಣವಾಗಿರಲಿಲ್ಲ. ಅದು ಇನ್ನೂ ಅವನ ಕಣ್ಣುಗಳಲ್ಲಿ ತುಂಬಿದ್ದಿತು ಅವನು ಕಣ್ಣು ಮುಚ್ಚಿಕೊಂಡೇ "ನೀನು ಹುಚ್ಚಿಯಾಗಿರುವೆಯಮ್ಮಾ, ಇಂತಹ ಸ್ಥಿತಿಯಲ್ಲಿ ರೋಗಿಯನ್ನು ಇಲ್ಲಿಂದ ಸ್ಥಳಾಂತರಿಸಲಾದೀತೇ?" ಎಂದ.

ಪ್ಯಾರಿಯು ನಕ್ಕು "ನೀನೇಳು ಮೊದಲು ಮುಖಕ್ಕೆ ಕಣ್ಣಿಗೆ ನೀರನ್ನು ಹಚ್ಚಿಕೊ ನೋಡೋಣ? ಆಮೇಲೆ ಅಲ್ಲಿಗೆ ಕರೆದುಕೊಂಡು ಹೋಗುವ ಅಥವಾ ಬಿಡುವ ಮಾತನ್ನು ವಿಚಾರಿಸ ಬಂದೀತು. ನನ್ನ ಅರಸು-ಮಗ, ಏಳು" ಎಂದಳು

ಬಂಕೂ ನಿರುಪಾಯನಾಗಿ ಎದ್ದು ಮುಖಮಾರ್ಜನ ಮಾಡಿಕೊಂಡು ಒಟ್ಟೆ ಹಾಕಿಕೊಂಡು ಸ್ಟೇಶನ್ನಿಗೆ ಹೋದ

ಆಗ ಇನ್ನೂ ಬಹಳ ಚೆನ್ನಾಗಿ ಬೆಳಗಾಗಿರಲಿಲ್ಲ ಮನೆಯಲ್ಲಿ ಮತ್ತೆ ಯಾರೂ ಇರಲಿಲ್ಲ. ನಾನು ಮೆಲ್ಲಗೆ "ಪ್ಯಾರೀ!" ಎಂದು ಕೂಗಿದೆ. ನನ್ನ ದಿಂಬಿನ ಬಳಿ ಒಂದು ಮಂಚವಿತ್ತು ಅದರ ಮೇಲೆ ಆಕೆಯು ದಣಿವಿನಿಂದ ಸ್ವಲ್ಪ ಈಗ ಕಣ್ಣು ಮುಚ್ಚಿ ಮಲಗಿದ್ದಳು. ನಾನು ಕೂಗಿದ ಕೂಡಲೆ ಎದ್ದು ಕುಳಿತು ನನ್ನ ತಲೆಯ ಮೇಲೆ, ಕಪೋಲಗಳ ಮೇಲೆ ಕೈಯಾಡಿಸಿ, ಬಾಗಿ ಕೋಮಲ ದನಿಯಿಂದ 'ನಿದ್ದೆಯಾಯಿತೇನು?' ಎಂದು ಕೇಳಿದಳು

"ನಾನು ಎಚ್ಚತ್ತೇ ಇದ್ದೇನೆ.'

ಆಕೆಯು ಪುನಃ ನನ್ನ ಗಲ್ಲಗಳ ಮೇಲೆ ಕೈಯಾಡಿಸುತ್ತ "ಜ್ವರ ಬಹಳ ಕಡಿಮೆ ಇವೆ. ಕಣ್ಣು ಮುಚ್ಚಿಕೊಂಡು ಸ್ವಲ್ಪ ನಿದ್ರಿಸಲು ಯತ್ನ ಮಾಡಿರಿ." ಎಂದಳು.

"ನಾನು ಅದನ್ನು ಮಾಡಿಯೇ ಮಾಡುತ್ತಿರುವೆ. ಜ್ವರ ಬಂದು ಇವೊತ್ತಿಗೆ ಎಷ್ಟು ದಿನಗಳಾದವು ?"

"ಹದಿಮೂರು ದಿನ" ಎಂದು ಆಕೆಯು ಅತ್ಯಂತ ಹಿರಿಯ ಮುದುಕಿಯ ಹಾಗೆ ಗಂಭೀರವಾಗಿ ಎಂದಳು "ಹುಡುಗರ ಎದುರಿಗೆ ನನ್ನ ಈ ಹೆಸರನ್ನು ತೆಗೆದುಕೊಂಡು ಕೂಗಬೇಡಿರಿ. ಬಹಳ ದಿನಗಳ ವರೆಗೆ 'ಲಕ್ಷ್ಮೀ' ಎಂದು ಕೂಗಿದ್ದೀರಿ ಅದೇ ಹೆಸರಿನಿಂದ ಯಾಕೆ ಕೂಗುವದಿಲ್ಲ ?"

ಎರಡು ದಿನಗಳಿಂದ ಮೈಮೇಲೆ ಚೆನ್ನಾಗಿ ಎಚ್ಚರವಿತ್ತು. ನನಗೆ ಎಲ್ಲ ಸಂಗತಿಗಳೂ ನೆನಪಿಗೆ ಬಂದಿದ್ದುವು. ನಾನೆಂದೆ "ಒಳ್ಳೇದು" ಬಳಿಕ ಯಾವ ಮಾತನ್ನು ಹೇಳಬೇಕೆಂದಿದ್ದೆನೋ ಅದನ್ನು ಚೆನ್ನಾಗಿ ಸಜ್ಜುಗೊಳಿಸಿ "ನನ್ನನ್ನು ಕರೆದುಕೊಂಡು ಹೋಗುವ ಯತ್ನವನ್ನು ಮಾಡುತ್ತಿರುವೆ. ನಾನು ನಿನಗೆ ಬಹಳ ಕಷ್ಟವನ್ನು ಕೊಟ್ಟಿರುವೆ ಇನ್ನು ಮತ್ತೆ ಹೆಚ್ಚಿಗೆ ಕೊಡಲಾರೆ" ಎಂದೆ.

"ಹಾಗಾದರೆ ಏನು ಮಾಡಬೇಕೆನ್ನುವಿರಿ?"

"ಈಗಿನ ನನ್ನ ಸ್ಥಿತಿಯನ್ನು ನೋಡುತ್ತಿರಲಿಕ್ಕೆ ಮೂರು ನಾಲ್ಕು ದಿನಗಳಲ್ಲಿಯೇ ಪೂರ್ಣ ಗುಣ ಹೊಂದುವೆನೆಂದು ಎನಿಸುತ್ತದೆ ಇವಿಷ್ಟು ದಿನ ಇಲ್ಲೇ ಇದ್ದು ನೀವು ಮನೆಗೆ ಹೊರಟು ಹೋಗಿರಿ"

"ಆಗ ನೀವೇನು ಮಾಡುವಿರಿ?"

"ಆಗುವುದು ಆಗಿ ಹೋಗಲಿ."

"ಆಗಿ ಹೋಗುವುದು" ಎಂದು ಪ್ಯಾರಿಯು ನಕ್ಕಳು ಬಳಿಕ ನನ್ನೆದುರಿಗೆ ಬಂದು ಮಂಚದ ಮೇಲೆ ಕುಳಿತು, ನನ್ನ ಮುಖವನ್ನು ಸ್ವಲ್ಪ ಹೊತ್ತು ನೋಡಿದಳು ಆಮೇಲೆ ನಕ್ಕು "ಮೂರು ನಾಲ್ಕು ದಿನಗಳಲ್ಲಿ ಗುಣವಾಗದಿದ್ದರೆ ಹತ್ತು ಹದಿನೈದು ದಿನಗಳಲ್ಲಾದರೂ ಪೂರ್ಣ ಗುಣವಾಗುವದು ಎಂಬುದನ್ನು ನಾನು ಬಲ್ಲೆ. ಆದರೆ ನಿಜವಾದ ರೋಗವು ಎಷ್ಟು ದಿನಗಳಲ್ಲಿ ಇಲ್ಲದಂತಾಗುವುದು ಎಂಬುದನ್ನು ಹೇಳಬಲ್ಲಿರಾ?" ಎಂದಳು.

“ ನಿಜವಾದ ರೋಗವಾವುದು ಮತ್ತೆ? ”

“ ಯೋಚನೆ ಮಾಡುವದು ಒಂದು, ಮಾಡುವುದು ಇನ್ನೊಂದು. ಇದೇ ರೋಗವು ನಿಮಗೆ ಬಹು ದಿನಗಳಿಂದ ಇದೆ. ನಿಮ್ಮನ್ನು ನಾನು ಒಂದು ತಿಂಗಳಿಗಿಂತ ಮೊದಲು ಕಣ್ಮರೆಯಾಗಗೊಡುವುದಿಲ್ಲವೆಂಬು ದನ್ನು ಬಲ್ಲಿರಿ. ಆದಾಗ್ಯೂ ನಿಮಗೆ ಕಷ್ಟ ಕೊಟ್ಟೆ. ಹೋಗು ಎಂದು ಹೇಳುವಿರಿ. ಓ, ದಯಾಮಯ! ನನ್ನ ಬಗ್ಗೆ ನಿಮ್ಮ ಹೃದಯದಲ್ಲಿ ಇಷ್ಟು ದಯವಿದ್ದರೆ ನೀವು ಬೇಕಾದುದಾಗಿರಿ— ಆದರೆ ಸನ್ಯಾಸಿಯಾಗ ಬೇಡಿರಿ. ಸನ್ಯಾಸಿಯಾಗಿ ಈಗೇನು ಮಾಡಿರುವಿರಿ ನೋಡಿರಿ! ನಾನು ಬಂದು ನೋಡಿದಾಗ ಒಂದು ಟಿನ್ನಿನ ಮನೆಯಲ್ಲಿ ಚಿಂದಿಯ ಮೇಲೆ ಮಲಗಿದ್ದಿರಿ. ಮೈಮೇಲೆ ಎಚ್ಚರವಿಲ್ಲ! ಧೂಳಿಯಿಂದ ಜಡೆಗಳು ಹೊಲಸಾಗಿವೆ. ಇಡೀ ದೇಹದ ತುಂಬ ರುದ್ರಾಕ್ಷಿಯ ಮಾಲೆಗಳು, ಕೈಯಲ್ಲಿ ಹಿತ್ತಾಳಿಯ ಎರಡು ಬಳೆಗಳು. ಅಮ್ಮಮ್ಮಾ! ನಿಮ್ಮ ಮುಖ ನೋಡಿದ ಕೂಡಲೆ ಅಳುವೇ ಬಂದಿತು!” ಎಂದು ನುಡಿಯುತ್ತಿರುವಾಗ ಒಮ್ಮೆಗೇ ಆಕೆಯ ಕಣ್ಣುಗಳಲ್ಲಿ ನೀರು ಉಕ್ಕೇರಿ ಬಂದುವು ಅವನ್ನು ಕೂಡಲೆ ಒರಸಿಕೊಂಡು ‘‘ ಬಂಕೂ ಕೇಳಿದ ಇವರು ಯಾರು ಅಮ್ಮಾ? ಎಂದು. ಮನದಲ್ಲೆ ಎಂದುಕೊಂಡೆ—ನೀನಿನ್ನೂ ಹುಡುಗ, ನಿನ್ನೆದುರಿಗೆ ಏನೆಂದು ಹೇಳಲಿ? ಹಾಯ್‌ ಆ ದಿನ ಎಷ್ಟು ಗಂಡಾಂತರದಿದ್ದಿತು! ಅಮ್ಮಮ್ಮ, ಎಂತಹ ಶುಭ ಮುಹೂರ್ತದೊಳಗೆ ಆ ಪಾಠಶಾಲೆಯಲ್ಲಿ ನಮ್ಮಿರ್ವರ ನಯನಮಿಲನವಾಗಿದ್ದಿತು ನನಗೆ ಕೊಟ್ಟಷ್ಟು ದುಃಖವನ್ನು ನೀವು ಮತ್ತಾರಿಗೂ ಕೊಟ್ಟಿರಲಿಕ್ಕಿಲ್ಲ ಮತ್ತು ಇನ್ನಾರಿಗೂ ಕೊಡಲಿಕ್ಕಿಲ್ಲ. ಈ ಊರಲ್ಲಿ ಮೈಲಿಯ ಕೋಪ ಹೆಚ್ಚಾಗಿದೆ. ನಿಮ್ಮೆಲ್ಲರನ್ನು ಒಳಿತಾದ ಅವಸ್ಥೆಯಲ್ಲಿ ಕರೆದುಕೊಂಡು ಎಷ್ಟು ಬೇಗ ಇಲ್ಲಿಂದ ಹೊರಡುವೆನೋ ಅಷ್ಟು ಚೆನ್ನು. ಆಗ ನನ್ನ ಮನಕ್ಕೆ ನೆಮ್ಮದಿ” ಎಂದು ಆಕೆಯು ನೀಳವಾದ ಉಸಿರ್ಗರೆದಳು.

ಅದೇ ದಿನ ರಾತ್ರಿ ನಾವು ಆರಾ ಬಿಟ್ಟೆವು. ಒಬ್ಬ ಎಳೆಯ ವಯಸ್ಸಿನ ಡಾಕ್ಟರನೊಬ್ಬ ಅನೇಕ ಔಷಧಗಳನ್ನು ತೆಗೆದುಕೊಂಡು ಪಾಟಣಾದ ವರೆಗೆ ನಮ್ಮನ್ನು ಕಳಿಸಲು ಜೊತೆಗೆ ಬಂದಿದ್ದ.

ಪಾಟ್ಣಾಕ್ಕೆ ಬಂದ ಬಳಿಕ ಹದಿಮೂರು ಹದಿನಾಲ್ಕು ದಿನಗಳಲ್ಲಿ ನಾನು ಒಂದು ಬಗೆಯಿಂದ ಗುಣ ಹೊಂದಿದೆ ಒಂದು ದಿನ ಒಬ್ಬನೇ ಪ್ಯಾರಿಯ ಮನೆಯ ಪ್ರತಿಯೊಂದು ಕೋಣೆಯನ್ನೂ ನಿರೀಕ್ಷಿಸಿ ಬಂದೆ. ಆಕೆಯ ಸಾಮಾನುಗಳನ್ನು ಕಂಡು ನನಗೆ ಸ್ವಲ್ಪ ವಿಸ್ಮಯವಾಯಿತು, ಇದಕ್ಕೂ ಮೊದಲು ನಾನಿಂಥ ಸಾಮಾನುಗಳನ್ನು ನೋಡಿಲ್ಲವೆಂತಲ್ಲ ಸಾಮಾನುಗಳು ಬೆಲೆಯುಳ್ಳವೂ ಒಳ್ಳೆಯವೂ ಇದ್ದುವು. ಆದರೆ ಈ ಮಾರವಾಡಿಗಳ ಬೀದಿಯಲ್ಲಿ, ಈ ಶ್ರೀಮಂತರೂ ಅಲ್ಪ ಶಿಕ್ಷಿತರೂ ಆದ ವಿಲಾಸಿ ಮನುಷ್ಯರ ಸಂಸರ್ಗದಲ್ಲಿ ಇಷ್ಟು ಸಾಧಾರಣವಾದ ವಸ್ತುಗಳಿಂದ ಈಕೆ ಎಷ್ಟು ಸಂತುಷ್ಟಳಾಗಿ ಇರುವಳಲ್ಲ? ಇದಕ್ಕೂ ಮೊದಲು ನಾನು ಇಂತಹರ ಎಷ್ಟೋ ಮನೆಗಳನ್ನು ಕಂಡಿರುವೆ ಆದರೆ ಅವುಗಳನ್ನು ಬಹ್ವಂಶದಲ್ಲಿ ಈ ಮನೆಗೆ ಹೋಲಿಸಲು ಬರುವಂತಿಲ್ಲ ಅವುಗಳಲ್ಲಿ ಹೊಕ್ಕ ಕೂಡಲೆ ಈ ಬಗೆಯ ಮನೆಗಳಲ್ಲಿ ಮನುಷ್ಯರು ಹೇಗಿರಬಲ್ಲರು? ಎಂಬ ವಿಚಾರವು ಬರುತ್ತಿತ್ತು. ಆ ಮನೆಗಳಲ್ಲಿ ಇರುವ ಕಪಾಟು, ಚಿತ್ರ, ಗೋಡೆ, ಕನ್ನಡಿ, ಗ್ಲಾಸ್-ಕೇಸ್ ಮೊದಲಾದ ಆನಂದದ ಸಾಮಗ್ರಿಗಳನ್ನು ನೋಡಿದಾಗ ಅವುಗಳ ಬಗ್ಗೆ ಸಂದೇಹವೇ ಹುಟ್ಟುತ್ತಿತ್ತು—ಸಹಜವಾಗಿ ಉಸುರಾಡಿಸಲು ಕೂಡ ಅವಕಾಶವೇ ದೊರೆಯುತ್ತಿರಲಿಲ್ಲ ನಾನಾಬಗೆಯ ನಾನಾರುಚಿಯ ಜನರ ಕಾಮ-ವಿಷಯಕ ಸಾಧನ-ಸಾಮಗ್ರಿಗಳು ರಾಶಿರಾಶಿಯಾಗಿ ಬಿದ್ದಿರುತ್ತಿದ್ದುವು. ಅವನ್ನು ನೋಡಿದಾಗ ಈ ಅಚೇತನ ವಸ್ತುಗಳಂತೆ ಅವುಗಳ ಒಡೆಯರಾದ ಸಚೇತನ ದಾನಿಗಳು ಈ ಮನೆಯಲ್ಲಿ ಒಂದು ಇನಿತು ಸ್ಥಳಕ್ಕಾಗಿ ಜನಸಂದಣಿಯನ್ನು ಹೆಚ್ಚಿಸಿ, ಜನರಲ್ಲಿ ಪರಸ್ಪರ ಸಂಗ್ರಾಮವನ್ನು ಹೂಡಲು ಯತ್ನಿಸುತ್ತಿರುವರೊ ಏನೊ ಎಂಬಂತೆ ಎನಿಸುತ್ತಿದ್ದಿತು ಆದರೆ ಈ ಮನೆಯಲ್ಲಿ ಆವಶ್ಯಕ ವಸ್ತುವಿನ ವಿನಾ ಮತ್ತಾವ ಅನಾವಶ್ಯಕ ವಸ್ತುವೂ ಕಣ್ಣಿಗೆ ಬೀಳಲಿಲ್ಲ ಇನ್ನೂ ಕೆಲವು ವಸ್ತುಗಳು ಇದ್ದುವು, ಅವು ಕೇವಲ ಮನೆಯ ಒಡತಿಯ ಉಪಯೋಗಕ್ಕಾಗಿ ತಂದುವಿದ್ದುವು. ಆಕೆಯ ಇಚ್ಛೆಗೆ ವಿರುದ್ಧವಾಗಿ ಯಾರದಾದರೂ ಇಚ್ಛೆಯನ್ನು ಪೂರ್ತಿಮಾಡುವುದಕ್ಕಾಗಿ ತಂದ ವಸ್ತುಗಳಲ್ಲ ಅವು ಎಂಬುದು ಒಡೆದು ಕಾಣುವಂತಿತ್ತು.

ಇನ್ನೂ ಒಂದು ವಿಷಯವು ನನ್ನ ಮನಸ್ಸನ್ನು ಆಕರ್ಷಿಸಿತು ಇಷ್ಟು ಪ್ರಸಿದ್ಧ 'ಬಾಯಿ'ಯ * ಮನೆಯಲ್ಲಿ ಸಂಗೀತದ ಸಾಮಗ್ರಿಯೊಂದೂ ಕಾಣಲಿಲ್ಲ. ಈ ಕೋಣೆಯಿಂದ ಆ ಕೋಣೆಗೆ ಹೋಗುತ್ತ ನಾನು ಎರಡನೆಯ ಅಂತಸ್ತಿನ ಕೊನೆಯಲ್ಲಿ ಒಂದು ಮೂಲೆಯಲ್ಲಿರುವ ಕೋಣೆಯ ಎದುರಿಗೆ ಹೋಗಿ ನಿಂತೆ ಅದನ್ನಿಣಿಕಿ ನೋಡುತ್ತಲೆ ಅದು ಬಾಯಿಯ ಶಯನ ಮಂದಿರವೆಂಬುದು ಗೊತ್ತಾಯಿತು. ಆದರೆ ನನ್ನ ಕಲ್ಪನೆಯಲ್ಲಿರುವ ಈಕೆಯ ಕೋಣೆಗೂ ಈ ಕೋಣೆಗೂ ನಡುವೆ ಅದೆಷ್ಟು ಅಂತರವಿದ್ದಿತು! ನಾನು ಯೋಚಿಸಿದುದು ಅದರಲ್ಲಿರಲಿಲ್ಲ. ಬಿಳಿಯ ಕಲ್ಲಿನ ಒಂದು ಮೇಜಿತ್ತು. ಗೋಡೆಗಳು ಪಾಲ್ಕೈನೆಯಂತೆ ಮಿಂಚುತ್ತಿದ್ದುವು. ಕೋಣೆಯ ಒಂದು ಮೂಲೆಯಲ್ಲಿ ಕಟ್ಟಿಗೆಯ ಮಂಚದ ಮೇಲೆ ಹಾಸುಗೆ ಹಾಸಿತ್ತು. ಬಟ್ಟೆಗಳನ್ನು ತೂಗು ಹಾಕುವ ಕಟ್ಟಿಗೆಯ ಸ್ಟ್ಯಾಂಡ್ ಇತ್ತು. ಅದರ ಮೇಲೆ ವಸ್ತ್ರಗಳು ತೂಗಾಡುತ್ತಿದ್ದುವು. ಅದರ ಹಿಂಬದಿಯಲ್ಲಿ ಒಂದು ಕಬ್ಬಿಣದ ಕಪಾಟಿದ್ದಿತು. ಮತ್ತೇನೂ ಇರಲಿಲ್ಲ ಜೋಡುಗಳನ್ನು ಹಾಕಿಕೊಂಡು ಒಳಗೆ ಹೋಗಲು ಮನಸ್ಸಾಗಲಿಲ್ಲ ಹೊರಗೇ ಪಾದರಕ್ಷೆಗಳನ್ನು ಬಿಟ್ಟು ಒಳಗೆ ಹೋದೆ ದಣುವಿನಿಂದಲೊ ಏನೊ, ನಾನು ನೇರವಾಗಿ ಮಂಚದ ಬಳಿಗೆ ಹೋಗಿ ಹಾಸುಗೆಯ ಮೇಲೆ ಕುಳಿತೆ ಕುಳಿತುಕೊಳ್ಳಲು ಬೇರೊಂದು ಸ್ಥಳ ವಿದ್ದಿದ್ದರೆ ಅದರ ಮೇಲೆಯೆ ಕುಳಿತುಕೊಳ್ಳುತ್ತಿದ್ದೆ ಎದುರಿಗೆ ಒಂದು ಕಿಡಿಕಿ ಇದ್ದಿತು ಹೊರಗೆ ಒಂದು ಬೇವಿನಮರ. ಕಿಡಿಕಿಯೊಳಗಿಂದ ಗಾಳಿಯು ಸೋಸಿ ಸೋಸಿ ಬರುತ್ತಿದ್ದಿತು. ನಾನು ಅತ್ತ ನೋಡುತ್ತ ಮೈಮರೆತು ಕುಳಿತೆ. ಒಂದು ಇನಿನಾದ ಕೇಳಿಸಿತು. ಪ್ಯಾರಿಯು ಗುನುಗುನು ಮಾಡುತ್ತ ತನ್ನ ಕೋಣೆಯೊಳಗೆ ಬಂದಳು. ಆಕೆಯು ಗಂಗೆಗೆ ಸ್ನಾನಮಾಡಲು ಹೋಗಿದ್ದಳು ಅಲ್ಲಿಂದ ಹಿಂತಿರುಗಿ ಒದ್ದೆಯಾದ ಬಟ್ಟೆಯನ್ನು ತ್ಯಜಿಸಿ ಒಣ ಬಟ್ಟೆಯನ್ನು ಧರಿಸಲು ಬಂದಳು. ಆಕೆಯು ಇತ್ತ ನೋಡಲೇ ಇಲ್ಲ. ನೇರವಾಗಿ ಬಟ್ಟೆಗಳು ಇದ್ದ ಕಡೆಗೆ ಹೋಗಿ ಒಣಗಿದ ಬಟ್ಟೆಗಳ ಮೇಲೆ ಕೈಯಿಕ್ಕಿದಾಗ ನಾನು ವ್ಯಸ್ತನಾಗಿ "ಘಟ್ಟಕ್ಕೇ ಒಣಗಿದ ಬಟ್ಟೆಗಳನ್ನು ಏಕೆ ತೆಗೆದುಕೊಂಡು ಹೋಗುವುದಿಲ್ಲ?" ಎಂದೆ.

* ಉತ್ತರ ಹಿಂದುಸ್ತಾನದಲ್ಲಿ "ಬಾಯಿ' ಎಂದರೆ ವೇಶ್ಯೆ.

ಪ್ಯಾರಿಯು ಬೆಚ್ಚಿ ಬಿದ್ದು ನನ್ನನ್ನು ನೋಡಿ ನಕ್ಕಳು. ಬಳಿಕ "ಕಳ್ಳರಂತೆ ನನ್ನ ಕೋಣೆಯಲ್ಲಿ ಬಂದು ಕುಳಿತಿರುವಿರಾ? ಇಲ್ಲ, ಇಲ್ಲ, ಕುಳಿತಿರಿ, ಹೋಗಬೇಡಿರಿ. ನಾನು ಆ ಕೋಣೆಗೆ ಹೋಗಿ ಬೇರೆ ಬಟ್ಟೆ ಧರಿಸುವೆ." ಎಂದು ಆಕೆಯು ಮೆಲ್ಲಗೆ ಮುಸುಕು ಬಣ್ಣದ ಸೀರೆಯನ್ನು ತೆಗೆದುಕೊಂಡು ಹೊರಗೆ ಹೋದಳು

ಐದು ನಿಮಿಷಗಳ ನಂತರ ಪ್ರಸನ್ನವದನಳಾಗಿ ಬಂದು ನಕ್ಕು "ನನ್ನ ಕೋಣೆಯಲ್ಲಿ ಏನೂ ಇಲ್ಲ ಏನನ್ನು ಕದಿಯಲು ಬಂದಿರುವಿರಿ ಹೇಳಿರಿ? ನನ್ನನ್ನೇನು?" ಎಂದಳು. ನಾನೆಂದೆ "ನಾನು ಇಷ್ಟು ಅಕೃತಜ್ಞನೆಂದು ತಿಳಿದಿರುವೆಯೊ? ನೀನು ನನಗಾಗಿ ಇಷ್ಟು ಮಾಡಿದೆ. ನಾನು ನಿನ್ನನ್ನೂ ಕದಿಯಬೇಕೆ? ನಾನಷ್ಟು ಲೋಭಿಯಲ್ಲ"

ಪ್ಯಾರಿಯ ಮುಖವು ಮಲಿನವಾಯಿತು ಮಾತನಾಡುವಾಗ ಆಕೆಗೆ ಇಷ್ಟು ವ್ಯಥೆಯಾದೀತೆಂದು ಯೋಚಿಸಿರಲಿಲ್ಲ. ಹಾಗೆ ಮಾಡುವ ಇಚ್ಛೆಯೂ ನನಗಿರಲಿಲ್ಲ ನಾನು ಒಂದೆರಡು ದಿನಗಳಲ್ಲಿ ಹೊರಡುವವನಿದ್ದೆ, ಆಗ ಹೀಗೆ ಮಾಡುವದು ತರವಲ್ಲ ಎಂಬುದು ನನಗೆ ಗೊತ್ತು ಒಡೆದು ಹೋದ ಮಾತನ್ನು ಪುನಃ ಜೋಡಿಸುವುದಕ್ಕಾಗಿ ನಾನು ನಕ್ಕು "ತನ್ನ ವಸ್ತುವನ್ನು ಯಾವನಾದರೂ ಕಳವು ಮಾಡಲು ಹೋಗುವನೆ? ನಿನಗಿಷ್ಟೂ ತಿಳಿಯದೇ?" ಎಂದೆ.

ಇಷ್ಟು ಸಹಜವಾಗಿ ಆಕೆಯನ್ನು ಸಮಾಧಾನಪಡಿಸಲಾಗಲಿಲ್ಲ ಆಕೆಯು ಮಲಿನಮುಖದಿಂದ "ನೀವು ಇನ್ನು ಹೆಚ್ಚಾಗಿ ಕೃತಜ್ಞರಾಗಿರುವುದು ಬೇಕಿಲ್ಲ ನೀವು ದಯೆಯಿಟ್ಟು ಆಗ ಸುದ್ದಿಯನ್ನು ತಿಳಿಸಿದಿರಿ, ಅಷ್ಟೇ ನನಗೆ ಸಾಕು" ಎಂದಳು.

ಆಕೆಯ ಶುದ್ಧ-ಸ್ನಾತ, ಪ್ರಸನ್ನ ನಗುಮೊಗವನ್ನು ನಾನು ಈ ಉಜ್ವಲ ಪ್ರಭಾತಕಾಲದಲ್ಲಿಯೆ ಕುಂದಿಸಿದೆನಲ್ಲ ಎಂದು ಬಗೆದೆ. ನನಗೆ ಅದರಿಂದಾಗಿ ಹೃದಯದಲ್ಲಿ ಒಂದು ವೇದನೆಯು ಹುಟ್ಟಿತು. ನಸುನಗುವಿನಲ್ಲಿ ಇದ್ದ ಮಾಧುರ್ಯವು ಮಾಯವಾದೊಡನೆ ಹಾನಿಯು ಸ್ಪಷ್ಟವಾಗಿ ಕಾಣಿಸಿತು. ಅದನ್ನು ಪುನಃ ಬರಮಾಡಿಕೊಳ್ಳುವುದಕ್ಕಾಗಿ ನಾನು ವೇದನೆತುಂಬಿದ ದನಿಯಿಂದ "ಲಕ್ಷ್ಮೀ, ನಿನ್ನೆದುರಿಗೆ ಗುಪ್ತವಾಗಿ ನಾನು

ಏನನ್ನು ಇಟ್ಟಿರುವೆ? ನಿನಗೆಲ್ಲವೂ ಗೊತ್ತಿದೆ ನೀನು ಅಲ್ಲಿಗೆ ಬಾರದಿದ್ದರೆ ನಾನು ಆ ಹುಡಿಯ ಮೇಲೆ ಮಲಗಿ ಸಾಯಬೇಕಾಗುತ್ತಿತ್ತು. ಯಾವನೂ ಅಷ್ಟು ದೂರ ಹೋಗಿ ಆಸ್ಪತ್ರೆಗೆ ಕಳುಹಲು ಕಷ್ಟವನ್ನು ಪಡುತ್ತಿರಲಿಲ್ಲ ನೀನು ಪತ್ರದಲ್ಲಿ ಬರೆದಿದ್ದೆ 'ಸುಖದ ದಿನಗಳಲ್ಲಾಗದಿದ್ದರೆ ದುಃಖದ ದಿನಗಳಲ್ಲಾದರೂ ನನ್ನನ್ನು ನೆನಸಬೇಕು ' ನನ್ನ ಆಯುಷ್ಯವಿನ್ನೂ ಇದ್ದಿತೆಂದು ಈ ಮಾತು ನೆನಪಿಗೆ ಬಂತು ಇದನ್ನು ನಾನು ಚೆನ್ನಾಗಿ ಬಲ್ಲೆ ಇದರ ಅನುಭವ ನನಗೆ ಆಗುತ್ತಿದೆ. '' ಎಂದೆ.

'' ಆಗುತ್ತಿದೆಯೆ ಅನುಭವ ? ''

'' ನಿಶ್ಚಯವಾಗಿ ''

'' ಹಾಗಾದರೆ ನನಗಾಗಿಯೆ ಪ್ರಾಣವನ್ನು ಪಡೆದಿರುವಿರಾ? ''

'' ಇದರಲ್ಲಿ ಸಂದೇಹವೇನೂ ಇಲ್ಲ. ''

'' ಹಾಗಾದರೆ ನಾನು ನಿಮ್ಮ ಪ್ರಾಣಗಳ ಮೇಲೆ ಅಧಿಕಾರವನ್ನು ಕೂಡಿಸಲಾ ? ''

''ಅಗತ್ಯವಾಗಿ ಆದರೆ ನನ್ನ ಪ್ರಾಣ ಅತ್ಯಂತ ತುಚ್ಛವಾಗಿದೆ ಅದರ ಮೇಲೆ ಅಧಿಕಾರ ಪಡೆಯುವುದು ಒಂದು ಲೋಭ. ಅದು ನಿನಗೆ ಶೋಭಿಸದು ''

ಪ್ಯಾರಿಯು ಇಷ್ಟು ಹೊತ್ತಿನ ನಂತರ ನಕ್ಕಳು. ಬಳಿಕ '' ಇಷ್ಟು ದಿನಗಳಾದ ಬಳಿಕ ನಿಮ್ಮ ಬೆಲೆಯನ್ನು ನೀವು ಅರಿತುಕೊಂಡಿರಿ, ಅಷ್ಟೇ ಸಾಕು '' ಎಂದು ಮರುಕ್ಷಣದಲ್ಲಿ ಗಂಭೀರಳಾಗಿ '' ತಮಾಷೆಯು ಇರಲಿ, ರೋಗವಂತೂ ದೂರಾಯಿತು, ಇನ್ನೆಂದು ಹೊರಡಬೇಕೆಂದಿರುವಿರಿ? '' ಎಂದಳು

ಆಕೆಯ ಪ್ರಶ್ನೆಯು ಸರಿಯಾಗಿ ನನಗೆ ಅರ್ಥವಾಗದಾಯಿತು. ನಾನು ಗಂಭೀರನಾಗಿ '' ಎಲ್ಲಿಗಾದರೂ ಹೋಗಲೇಬೇಕಾದುದೇನೂ ಇಲ್ಲ ಅಂತಹ ಅವಸರದ ಅಗತ್ಯದ ಕೆಲಸವು ಎಲ್ಲಿಯೂ ಇಲ್ಲ ಇನ್ನೂ ಸ್ವಲ್ಪ ದಿನ ಇಲ್ಲಿಯೆ ಇರಬೇಕೆಂದು ಯೋಚಿಸುತ್ತಿರುವೆ. '' ಎಂದೆ.

'' ಆದರೆ ನನ್ನ ಮಗ ಇಲ್ಲಿಗೆ ಆಗಾಗ್ಗೆ ಬಾಂಕಿಪುರದಿಂದ ಇಲ್ಲಿಗೆ ಬರುವ. ಬಹಳ ದಿನ ಇದ್ದರೆ ಅವನೇನಾದರೂ ತಿಳಿದುಕೊಳ್ಳುವ ಸಂಭವವಿದೆ. ''

" ತಿಳಿದುಕೊಳ್ಳಲಿ ಬಿಡು ಅವನಿಗೆ ಅಂಜಿ ನೀನು ನಡೆಯುವೆಯೇನು? ಇಷ್ಟು ವಿಶ್ರಾಂತಿಯ ಸ್ಥಾನವನ್ನು ಬಿಟ್ಟು ಬೇಗ ನಾನೆಲ್ಲಿಗೂ ಹೋಗುವದೇ ಇಲ್ಲ. "

ಪ್ಯಾರಿಯು ವಿಷಣ್ಣವದನಳಾಗಿ " ಇದೆಂದಾದರೂ ಆಗಬಹುದೇ!" ಎಂದು ಒಮ್ಮಿಂದೊಮ್ಮೆಲೆ ಅಲ್ಲಿಂದ ಹೋಗಿಬಿಟ್ಟಳು

ಮರುದಿನ ಸಾಯಂಕಾಲ ನಾನು ನನ್ನ ಕೋಣೆಯ ಎದುರಿಗೆ ಒಂದು ಆರಾಮ ಕುರ್ಚಿಯ ಮೇಲೆ ಕುಳಿತು ಸೂರ್ಯಾಸ್ತವನ್ನು ನೋಡುತ್ತಿದ್ದೆ. ಇದೇ ವೇಳೆಗೆ ಬಂಕೂ ಅಲ್ಲಗೆ ಬಂದ ಇದುವರೆಗೆ ಅವನ ಕೂಡ ಚೆನ್ನಾಗಿ ಮಾತನಾಡುವ ಸುಯೋಗ ದೊರೆತಿರಲಿಲ್ಲ. ಒಂದು ಕುರ್ಚಿಯ ಮೇಲೆ ಅವನಿಗೆ ಕುಳ್ಳಿರ ಹೇಳಿ " ಏನು ಓದುತ್ತಿರುವೆ ಬಂಕೂ ? " ಎಂದು ಕೇಳಿದೆ

ಹುಡುಗ ಅತ್ಯಂತ ಸರಳ ಸುಸ್ವಭಾವದವನಿದ್ದ ಅವನೆಂದ " ಹೋದವರ್ಷ ನಾನು ಮ್ಯಾಟ್ರಿಕ್ ಪಾಸಾಗಿರುವೆ "

" ಈಗ ಬಾಂಕೀಪುರದ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಾ ಇರುವೆಯಾ ? "

" ಹೌದು ಸರ್ "

" ನೀವು ಎಷ್ಟು ಜನ ಅಣ್ಣತಮ್ಮಂದಿರು? '

" ಸಹೋದರರು ಇಲ್ಲ, ನಾಲ್ವರು ಸಹೋದರಿಯರಿರುವರು "

" ಅವರ ಮದುವೆಯಾಗಿದೆಯೆ? "

" ಹೌದು, ಅಮ್ಮನೇ ಅವರ ಮದುವೆ ಮಾಡಿದಳು "

" ನಿನ್ನ ತಾಯಿ ಬದುಕಿರುವಳೆ? '

" ಹೌದು, ಆಕೆಯೂ ತನ್ನ ಊರಲ್ಲಿಯೆ ಇರುವಳು. "

" ನಿನ್ನ ಈ ತಾಯಿ ಎಂದಾದರೂ ನಿಮ್ಮ ಊರಿಗೆ ಹೋಗಿದ್ದಳೆ?"

" ಬಹಳ ಬಾರಿ ಹೋಗಿರುವಳು. ಐದಾರು ತಿಂಗಳಾದುವು ಅಲ್ಲಿಂದ ಬಂದು. "

" ಇದರಿಂದ ನಿಮ್ಮ ಊರಲ್ಲಿ ಯಾರಿಗೂ ಯಾವ ತೊಂದರೆಯೂ ಆಗುವುದಿಲ್ಲ ತಾನೆ ? "

ಸ್ವಲ್ಪ ಹೊತ್ತು ಸುಮ್ಮಗಿದ್ದು ಬಂಕೂ ಎಂದ "ಆಗುತ್ತಿರಲಿ. ನಮ್ಮನ್ನು ಜಾತಿಯಿಂದ ಹೊರಗೆ ಇಟ್ಟಿರುವರು. ಇಟ್ಟರೇನಾಯಿತು? ನಾವು ನಮ್ಮ ತಾಯಿಯನ್ನು ಬಿಟ್ಟು ಬೇರೆ ಇರಬಲ್ಲೆವೇನು? ಇಂತಹ ತಾಯಿಯನ್ನು ಪಡೆದ ಸೌಭಾಗ್ಯ ಅದೆಷ್ಟು ಜನರಿಗೆ ಇದೆ!"

"ತಾಯ ಮೇಲೆ ಇಷ್ಟು ಭಕ್ತಿಯುಂಟಾದುದಾದರೂ ಹೇಗೆ?" ಎಂದು ಕೇಳಬೇಕೆಂಬ ಮಾತು ಬಾಯಿಗೆ ಬಂದಿತ್ತು. ಆದರೆ ಅದು ಅಲ್ಲಿಗೇ ನಿಂತುಹೋಯಿತು.

"ಒಳ್ಳೇದು, ತಾವೇ ಹೇಳಿರಿ, ಹಾಡುವುದರಲ್ಲಿ ಬಾರಿಸುವುದರಲ್ಲಿ ಏನಾದರೂ ಕೆಡಕು, ದೋಷ ಇದೆಯೇನು? ನಮ್ಮ ತಾಯಿ ಕೇವಲ ಈ ಉದ್ಯೋಗವನ್ನು ಮಾಡುವಳು ಪರರ ನಿಂದೆ, ಚರ್ಚೆಯನ್ನು ಎಂದೂ ಮಾಡುವುದಿಲ್ಲ ಊರಲ್ಲಿ ಜನರು ನಮಗೆ ಪರಮ ಶತ್ರುಗಳಾಗಿದ್ದಾರೆ. ಅವರ ೮-೧೦ ಮಕ್ಕಳಿಗೇ ಓದುಬರೆಹಕ್ಕಾಗಿ ನನ್ನ ತಾಯಿ ಹಣ ಕೊಡುತ್ತಾಳೆ ಚಳಿಗಾಲದಲ್ಲಿ ಎಷ್ಟೋ ಜನಗಳಿಗೆ ಬಟ್ಟೆಗಳನ್ನು ಕೊಡುತ್ತಾಳೆ, ಕಂಬಳಿಗಳನ್ನು ಕೊಡುತ್ತಾಳೆ ಇದು ಕೆಟ್ಟ ಕಾರ್ಯವೇನು?"

"ಅಲ್ಲ, ಇದು ಬಹಳ ಒಳ್ಳೆಯ ಕೆಲಸ."

ಬಂಕೂ ಉತ್ಸಾಹದಿಂದ "ಹಾಗಾದರೆ ನಮ್ಮ ಊರಿನಷ್ಟು ಕೆಟ್ಟ ಊರು ಬೇರೊಂದು ಇದೆಯೆ? ನೀವೇ ಹೇಳಿರಿ ಆಚೆಯ ವರ್ಷ ಇಟ್ಟಿಗೆಗಳಿಂದ ನಾವು ಮನೆಯನ್ನು ಕಟ್ಟಿಸಿದೆವು ಊರಲ್ಲಿ ನೀರಿನ ತೊಂದರೆ ಬಹಳವಿತ್ತು ಆಗ ನನ್ನ ತಾಯಿ ಈ ನನ್ನ ತಾಯಿಗೆ ಇನ್ನಿಷ್ಟು ರೂಪಾಯಿ ಖರ್ಚುಮಾಡಿ ಒಂದು ಕೆರೆಯನ್ನು ಕಟ್ಟಿಸಿದರೆ ಒಳಿತು ಎಂದು ಹೇಳಿದಳು ಮೂರು ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿ ಬಹಳ ಉತ್ತಮವಾದ ಕೆರೆಯನ್ನು ಕಟ್ಟಿಸಿದಳು. ಆದರೆ ಊರವರು ತಾಯಿಗೆ ಅದರ ಪ್ರತಿಷ್ಠಾಪನೆ ಮಾಡಗೊಡಲಿಲ್ಲ. ಇಷ್ಟು ಒಳ್ಳೆಯ ನೀರಿದೆ-ಏನು ಹೇಳಲಿ? ಯಾರೂ ಕುಡಿವಂತಿಲ್ಲ-ಮುಟ್ಟುವಂತಿಲ್ಲ. ಇಂತಹ ಕೆಟ್ಟ ಜನರು ಆ ಊರಿನವರು. ನಮ್ಮ ಮನೆಯು ಚೆನ್ನಾದುದನ್ನು ಕಂಡು ಎಲ್ಲರಿಗೂ ಹೊಟ್ಟೆಕಿಚ್ಚು. ತಮಗೆ ತಿಳಿಯುತಲ್ಲವೆ?" ಎಂದ.

ತಾಯಿಯು ಆಶ್ಚರ್ಯದಿಂದ "ಏನು ಹೇಳುವೆಯೊ? ನೀರಿಲ್ಲದೆ ಕಷ್ಟಪಡುವರು, ಆದಾಗ್ಯೂ ಆ ನೀರನ್ನು ಉಪಯೋಗಿಸುವದಿಲ್ಲವೆ?" ಎಂದಳು

ಬಂಕೂ ಸ್ವಲ್ಪ ನಕ್ಕು "ಇದನ್ನೇ ನಾನು ಹೇಳುವುದು. ಹೀಗೆಯೆ ನೀರನ್ನು ಎಷ್ಟು ದಿನ ಉಪಯೋಗಿಸದೆ ಇರುವರು? ಆಚೆಯ ವರ್ಣ ಯಾರೂ ನೀರನ್ನು ಮುಟ್ಟಲಿಲ್ಲ. ಈ ವರ್ಣ ಕೆಳಗಿನ ಜಾತಿಗಳ ಜನರು ಉಪಯೋಗಿಸುತ್ತಾರೆ, ಕುಡಿಯುತ್ತಾರೆ. ಬ್ರಾಹ್ಮಣರೂ ಕಾಯಸ್ಥರೂ ಬೇಸಿಗೆಯಲ್ಲಿ ಕದ್ದು-ಮುಚ್ಚಿ ನೀರನ್ನು ಒಯ್ಯುವರು ಆದಾಗ್ಯೂ ಅವರು ಕೆರೆಯ ಪ್ರತಿಷ್ಠಾಪನೆ ಮಾಡಗೊಡಲಿಲ್ಲ ಇದು ತಾಯಿಗೆ ಕಡಮೆ ದುಃಖದಾಯಕವಿರುವುದೆ?" ಎಂದ

"ತಮ್ಮ ಮೂಗನ್ನು ಕೊಯ್ದುಕೊಂಡು ಬೇರೆಯವರಿಗೆ ಅಪಶಕುನವನ್ನು ಬಗೆದಂತಿದೆ ಈ ವ್ಯವಹಾರ" ಎಂದೆ ನಾನು

ಬಂಕೂ ಗಟ್ಟಿಯಾಗಿ ನುಡಿದ "ಹೌದು, ಹೀಗೆಯೆ ಇದೆ ಅವರ ವ್ಯವಹಾರ! ಇಂತಹ ಊರಲ್ಲಿ ಶಾಪದಿಂದ ಪ್ರತ್ಯೇಕ ಮನೆಯಲ್ಲಿರುವುದು ವರದಾನದಂತೆ ಇದೆ ತಮ್ಮ ಅಭಿಪ್ರಾಯವೇನು?" ನಾನು ಕೇವಲ ನಕ್ಕು ತಲೆಯಲ್ಲಾಡಿಸಿದೆ ಹೌದು ಅಥವಾ ಅಲ್ಲ ಎಂದು ಸ್ಪಷ್ಟವಾಗಿ ಹೇಳಲಿಲ್ಲ ಆದರೆ ಇದರಿಂದಾಗಿ ಬಂಕೂನ ಉತ್ಸಾಹ ಕುಗ್ಗಲಿಲ್ಲ. ಮಗು ತನ್ನ ಈ ತಾಯಿಯನ್ನೂ ಹೆಚ್ಚು ಪ್ರೀತಿಸುತ್ತಿರುವನೆಂಬುದನ್ನು ಅರಿತೆ ತನಗೆ ಯೋಗ್ಯನಾದ ಶ್ರೋತೃವನ್ನು ಪಡೆದುದರಿಂದ ಅವನು ಭಕ್ತಿಯಿಂದ ಆವೇಶಯುಕ್ತನಾದ ಮತ್ತು ಅವನ ಧಾರಾವಾಹಿಯಾದ ಸ್ತುತಿ-ಪಾಠವು ನನ್ನನ್ನು ವ್ಯಾಕುಲಗೊಳಿಸಿಬಿಟ್ಟಿತು

ಅವನಿಗೆ ಒಮ್ಮಿಂದೊಮ್ಮೆಗೆ ಎಚ್ಚರವುಂಟಾಯಿತು— ನಾನು ಈ ವರಗೂ ಆಕೆಯ ಒಂದು ಮಾತಿಗೂ ನನ್ನ ಸಹಯೋಗವನ್ನು ಕೊಡಲಿಲ್ಲ ಅವನು ಅಪ್ರತಿಭನಾಗಿ ಈ ಪ್ರಸಂಗವನ್ನು ಮರೆಮಾಜು ಮಾಡುವುದಕ್ಕಾಗಿ "ತಾವು ಇನ್ನೂ ಸ್ವಲ್ಪ ದಿವಸ ಇಲ್ಲಿ ಇರುವಿರಲ್ಲವೆ?" ಎಂದ.

ನಾನು ನಕ್ಕು "ಇಲ್ಲ, ನಾಳೆ ಬೆಳಗ್ಗೇ ಹೊರಟುಹೋಗುವೆ." ಎಂದೆ

" ನಾಳೆಯೆ ? "

" ಹೌದು, ನಾಳೆಯೆ. "

" ಆದರೆ ನಿಮ್ಮ ಶರೀರಕ್ಕೆ ಇನ್ನೂ ಶಕ್ತಿ ಬಂದಿಲ್ಲ ರೋಗವು ಪೂರ್ತಿಯಾಗಿ ಹೋಯಿತೆಂದು ತಾವು ತಿಳಿದಿರುವಿರೇನು ? "

"ಬೆಳಗಿನವರೆಗೆ ನಾನು ನನ್ನ ರೋಗವು ದೂರವಾಯಿತು ಎಂದೇ ತಿಳಿದಿದ್ದೆ ಆದರೆ ಈಗ ಅದು ಇನ್ನೂ ಹೋಗಿಲ್ಲ ಎಂದು ತಿಳಿಯುತ್ತೊಡಗಿರುವೆ ಈ ದಿನ ಮಧ್ಯಾಹ್ನದಿಂದಲೇ ನನಗೆ ತಲೆನೋವು ಉಂಟಾಗಿದೆ "

" ಹಾಗಾದರೆ ಇಷ್ಟು ಬೇಗ ಏಕೆ ಹೋಗುವಿರಿ ? ಇಲ್ಲಿ ತಮಗೆ ಯಾವ ತರಹದ ಕಷ್ಟವೂ ಇಲ್ಲ ತಾನೆ ? " ಎಂದು ಆ ಹುಡುಗ ಚಿಂತಿತನಾಗಿ ನನ್ನ ಮುಖವನ್ನು ನೋಡತೊಡಗಿದ

ನಾನೂ ಸ್ವಲ್ಪ ಹೊತ್ತು ಅವನ ಮುಖದ ಕಡೆಗೆ ನೋಡುತ್ತ ಅವನ ಮುಖದ ಮೇಲೆ ಅಂತಃಕರಣದ ಯಾವ ಭಾವವು ಮೂಡಿದೆ ಎಂಬುದನ್ನು ಓದಲು ಯತ್ನಿಸಿದೆ ನಾನು ಓದಿದಷ್ಟೂ ಅವನು ಸತ್ಯವನ್ನು ಬಚ್ಚಿಡಲು ಪ್ರಯತ್ನವನ್ನು ಮಾಡುತ್ತಿರುವನೆಂಬ ಅನುಭವವು ನನಗಾಗಲಿಲ್ಲ ಹುಡುಗನಿಗೆ ನಾಚಿಕೆ ಬಂದಿತು; ಅದನ್ನು ಬಚ್ಚಿಡಲು ಯತ್ನಿಸಿದ. ಬಳಿಕ ಅವನೆಂದ " ತಾವು ಇಲ್ಲಿಂದ ಹೋಗಬೇಡಿರಿ. "

" ಏಕೆ ಹೋಗಬಾರದು ಹೇಳು ? "

" ತಾವು ಇಲ್ಲಿ ಇರುವುದರಿಂದ ಅಮ್ಮ ಬಹಳ ಆನಂದದಿಂದ ಇರುವಳು " ಎಂದು ಹೇಳಿಬಿಟ್ಟ— ಆದರೆ ಈ ಮಾತಿನಿಂದ ಅವನ ಮುಖವು ಕೆಂಪೇರಿತು ಅವನು ಚಟಕ್ಕನೆದ್ದು ಹೋಗಿಬಿಟ್ಟ ಹುಡುಗ ಸರಳ ಸ್ವಭಾವದವ, ಆದರೆ ಮೂರ್ಖನಲ್ಲ ಎಂಬುದನ್ನು ಅರಿತೆ. ಪ್ಯಾರಿಯೂ ಎಂದಿದ್ದಳು " ಹೆಚ್ಚು ದಿವಸ ಇದ್ದರೆ ನನ್ನ ಮಗ ಏನೆಂದು ತಿಳಿದುಕೊಂಡಾನು ? " ಎಂತ. ಈ ಹುಡುಗನ ವ್ಯವಹಾರ ಮತ್ತು ಪ್ಯಾರಿಯ ಈ ಮಾತು ಇವನ್ನು ಕುರಿತು ನಾನು ಯೋಚಿಸಿದೆ. ಅರ್ಥವನ್ನೂ ಮಾಡಿದೆ ಮಾತೃತ್ವದ ಈ ಹೊಸ ಚಿತ್ರವು ನನಗೆ ನೋಡಲು ದೊರೆತುದರಿಂದ ನನಗೊಂದು ಹೊಸ ಜ್ಞಾನವೂ ಉಂಟು

ಆಯಿತು. ಪ್ಯಾರಿಯ ಹೃದಯದೊಳಗಿರುವ ಒಂದೇ ಒಂದಾದ ವಾಸನಾದ ಅನುಮಾನವನ್ನು ಮಾಡುವುದು ಕಠಿನವಿಲ್ಲ, ಆದು ಪ್ರಪಂಚದಲ್ಲಿ ಎಲ್ಲ ಬಗೆಯಿಂದಲೂ ಸ್ವತಂತ್ರವಿದೆ ಎಂದು ಯೋಚಿಸುವುದೂ ಪಾಪವಲ್ಲ ಎಂದು ನನ್ನ ಕಲ್ಪನೆ. ಆದಾಗ್ಯೂ ಆಕೆಯು ಒಬ್ಬ ಬಡ ಹುಡುಗನನ್ನು ಮಗನನ್ನಾಗಿಸಿಕೊಂಡು ಮಾತೃಪದವನ್ನು ಸ್ವೇಚ್ಛೆಯಿಂದ ಎಂದಿನಿಂದ ಪಡೆದಿರುವಳೊ ಅಂದಿನಿಂದ ಆಕೆಯು ತನ್ನ ಕಾಲುಗಳಲ್ಲಿ ಬೇಡಿಗಳನ್ನು ಹಾಕಿಕೊಂಡಿರುವಳು. ಆಕೆಯು ಸ್ವತಃ ಹೇಗೇ ಇರಲಿ, ಆಕೆಗೆ ತಾಯ-ಸನ್ಮಾನವನ್ನು ಈಗ ಕೊಡಲೇಬೇಕು! ಆಕೆಯ ಸಂಯಮವಿಲ್ಲದ ಬಯಕೆ ಮತ್ತು ಉಚ್ಛೃಂಖಲವೃತ್ತಿ ಇವೆರಡೂ ಆಕೆಯನ್ನು ಅಧಃಪತನದ ಕಡೆಗೆ ಒಯ್ಯಲು ಯತ್ನಿಸಲೊಲ್ಲವೇಕೆ? ಆಕೆಯೊಬ್ಬ ಹುಡುಗನ ತಾಯಿ ಎಂಬ ಮಾತನ್ನು ಅವು ಮರೆಯಿಸಲಾರವು. ಆ ಹುಡುಗನ ತಾಯ ಭಕ್ತಿಯ ಎದುರಿಗೆ ತನ್ನ ತಾಯತನವನ್ನು ಎಳ್ಳಷ್ಟೂ ಅಪಮಾನಿತ ಮಾಡಗೊಡಳು! ಆಕೆಯ ಮದೋನ್ಮತ್ತ ಯೌವನದ ಲಾಲಸೆದುಂಬಿದ ವಸಂತ ಮಾಸದಲ್ಲಿ ಪ್ರೀತಿಯಿಂದ 'ಪ್ಯಾರೀ' ಎಂದು ಹೆಸರನ್ನು ಆಕೆಗೆ ಯಾರು ಇಟ್ಟಿದ್ದರು ಎಂಬುದು ಗೊತ್ತಿಲ್ಲ ಈ ಮಾತನ್ನೂ ಆಕೆಯು ತನ್ನ ಮಗನ ಎದುರಿಗೆ ಬಚ್ಚಿಡಲು ಬಯಸುತ್ತಿರುವಳು ಎಂಬ ಮಾತೂ ನನ್ನ ನೆನಪಿಗೆ ಬಂದಿತು!

ನೋಡು ನೋಡುವಷ್ಟರಲ್ಲಿ ಸೂರ್ಯ ತಾಯ-ಮಡಿಲನ್ನು ಸೇರಿದ. ಅತ್ತ ನೋಡುತ್ತಿರುವಾಗ ನನ್ನ ಅಂತಃಕರಣ ಕರಗಿ ಕಂಪೊಡೆಯಿತು. ರಾಜಲಕ್ಷ್ಮಿಯನ್ನು ಇನ್ನು ನಾನು ಕೀಳು ದೃಷ್ಟಿಯಿಂದ ನೋಡಲಾರೆ. ನಮ್ಮಿಬ್ಬರ ಹೊರಗಿನ ನಡತೆ ಇಷ್ಟು ದಿನಗಳ ವರೆಗೆ ನಮ್ಮ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುತ್ತ ಸಾಗಿದ್ದರೂ ಸ್ನೇಹವು ಬೇಕಾದಷ್ಟು ಮಾಧುರ್ಯವನ್ನು ಹಾಕಿರದಿದ್ದರೂ ನಮ್ಮಿಬ್ಬರ ಬಯಕೆಗಳು ಒಂದುಗೂಡಲಿಕ್ಕೆ ಪ್ರತಿಕ್ಷಣವೂ ಅಸಾಧ್ಯ ವೇಗದಿಂದ ಓಡುತ್ತಿರುವುವು ಎಂಬುದರಲ್ಲಿ ಸಂದೇಹವೇನೂ ಇಲ್ಲ ಆದರೆ ಈ ದಿನ 'ಬಂಕೂನ ತಾಯಿ' ಎಂಬುದು ಆಕಾಶವನ್ನು ಭೇದಿಸುವ ಹಿಮಾಲಯಪರ್ವತದಂತೆ ಮಾರ್ಗವನ್ನು ಅಡ್ಡಗಟ್ಟಿ ರಾಜಲಕ್ಷ್ಮಿಯ ಮತ್ತು ನನ್ನ ನಡುವೆ ಬಂದು

ನಿಂತಿದೆ. ನಾನು ಬೆಳಿಗ್ಗೆ ಇಲ್ಲಿಂದ ಹೋಗಬೇಕೆಂದು ವಿಚಾರ ಮಾಡ ತೊಡಗಿದೆ ಆದರೆ ಇಲ್ಲಿಂದ ಹೊರಡುವಾಗ ಲಾಭ-ಹಾನಿಯ ಮಾತು ಮುಂದೆ ಬಂದು ಇಲ್ಲಿ ಏನನ್ನಾದರೂ ಉಳಿಸಿ ಹೋಗಬೇಕೆಂಬ ಪ್ರಯತ್ನ ವನ್ನು ನಾನು ಮಾಡಬಾರದು. ನಾನು ಇಲ್ಲಿಂದ ಈಗ ಹೊರಡುವುದು ಕೊನೆಯ ಹೊರಡುವಿಕೆಯಾಗಬೇಕು. ಪುನಃ ತಿರುಗಿ ಆಕೆಯನ್ನು ಕಾಣದಿರಬಹುದೆಂದು ಬಗೆದು ಅತಿಸೂಕ್ಷ್ಮ ವಾಸನಾದ ಬಂಧನವನ್ನು ನಾನಿಲ್ಲಿ ಇಟ್ಟುಹೋದರೆ ಪುನಃ ಅದರ ಆಧಾರದಿಂದ ಇಲ್ಲಿಗೆ ಬರುವ ಮನಸ್ಸು ಆಗಬಹುದು, ಇದೂ ನನ್ನಿಂದಾಗಬಾರದು ಎಂದು ಯೋಚಿಸಿದೆ.

ಅನ್ಯ ಮನಸ್ಕನಾಗಿ ಅದೇ ಸ್ಥಳದ ಮೇಲೆ ಕುಳಿತಿದ್ದೆ ಸಾಯಂಕಾಲ ಧೂಪ-ಪಾತ್ರದಲ್ಲಿ ಧೂಪವನ್ನು ಹಾಕಿಕೊಂಡು ರಾಜಲಕ್ಷ್ಮಿಯು ನನ್ನ ಎದುರಿಗಿಂದ ಹಾಯ್ದು ಬೇರೊಂದು ಕೋಣೆಗೆ ಹೊರಟಿದ್ದಳು ಬೆಚ್ಚಿ ಬಿದ್ದು ನಿಂತಳು ಮತ್ತು ನುಡಿದಳು "ತಲೆ ನೋಯುತ್ತಿದೆಯೆನ್ನುವಿರಿ. ಹೊರಗೆ ಮಂಜು ಬೀಳುತ್ತಿರುವುದು ಇಲ್ಲಿ ಏಕೆ ಕುಳಿತಿರುವಿರಿ? ಕೋಣೆಯೊಳಗೆ ಹೋಗಿರಿ"

ನನಗೆ ನಗುವು ಬಂದಿತು ನಾನೆಂದೆ "ದಿಙ್ಮೂಢ ಮಾಡಿಬಿಟ್ಟಿ ನೀನು ಲಕ್ಷ್ಮೀ! ಮಂಜು ಇಲ್ಲಿ ಎಲ್ಲಿದೆ?"

"ಮಂಜಿಲ್ಲದಿದ್ದರೇನಾಯಿತು ತಂಗಾಳಿಯು ಬೀಸುತ್ತಿದೆಯಲ್ಲ. ಇದೇನು ಒಳಿತಾದುದೇ ನಿಮಗೆ?"

"ಇಲ್ಲ ಇದು ನಿನ್ನ ತಪ್ಪುತಿಳಿವಳಿಕೆ. ತಂಗಾಳಿಯೂ ಬೀಸುತ್ತಿಲ್ಲ, ಬಿಸಿಗಾಳಿಯೂ ಚಲಿಸುತ್ತಿಲ್ಲ." ಎಂದು ಲಕ್ಷ್ಮಿಯು "ನನ್ನದೆಲ್ಲಾ ತಪ್ಪು ತಿಳಿವಳಿಕೆಯೆ. ನಿಮ್ಮ ತಲೆನೋಯುವುದು, ಅದು ಮಾತ್ರ ತಪ್ಪು ತಿಳಿವಳಿಕೆಯಲ್ಲವಷ್ಟೆ? ಕೋಣೆಯೊಳಗೆ ಹೋಗಿ ಸ್ವಲ್ಪ ಮಲಗಿಕೊಂಡಿರಬಾರದೆ? ರತನ ಏನು ಮಾಡುತ್ತಿದ್ದಾನೆ? ಅವನು ಸ್ವಲ್ಪ ಓಡಿಕೊಲೋನ್ ತಲೆಗೆ ತಿಕ್ಕಲಾರನೆ? ಈ ಮನೆಯ ಆಳುಮಕ್ಕಳಂತೆ ನವಾಬ-ನೌಕರರು ಪೃಥ್ವಿಯಲ್ಲಿ ಎಲ್ಲೂ ಇಲ್ಲ." ಎಂದು ತನ್ನ ಕೆಲಸಕ್ಕೆ ಹೋದಳು.

ರತನ ಗಾಬರಿಯಾಗಿ ನಾಚಿಕೆಪಟ್ಟು ಓಡಿಹೋಗಿ ಕೊಲೋನ್, ನೀರು ತೆಗೆದುಕೊಂಡು ಬಂದ ಮತ್ತು ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಡತೊಡಗಿದ. ಆಗ ನನಗೆ ನಗುವನ್ನು ಬಿಗಿಹಿಡಿದುಕೊಳ್ಳಲಾಗಲಿಲ್ಲ.

ರತನನಿಗೆ ಸ್ವಲ್ಪ ಧೈರ್ಯ ಬಂದಿತು. ಅವನು "ಇದರಲ್ಲಿ ನನ್ನ ದೋಷ ಇಲ್ಲ ಬಾಬೂ, ಇದನ್ನು ನಾನು ಅರಿಯೆನೆ? ನಿಮಗೆ ಸಿಟ್ಟು ಬಂದಾಗ ಮನೆಯವರ ಮೇಲಿಲ್ಲ ದೋಷವನ್ನು ಹೊರಿಸುವಿರಿ ಎಂದು ಅಮ್ಮನವರಿಗೆ ಹೇಳುವಂತಿಲ್ಲ!" ಎಂದ.

ಕುತೂಹಲದಿಂದ ನಾನು ವಿಚಾರಿಸಿದೆ "ಸಿಟ್ಟೇಕೆ ಬರುವುದು?"

"ಇದನ್ನು ತಿಳಿಯಲು ಉಪಾಯವೇನಾದರೂ ಇದೆಯೆ? ದೊಡ್ಡವರಿಗೆ ಸಿಟ್ಟು ಹೀಗೆಯೆ ಬರುತ್ತದೆ, ಹೀಗೆಯೆ ಹೋಗುತ್ತದೆ ಬಾಬೂಜೀ ಆಗ ತಮ್ಮ ಮೋರೆ ತಪ್ಪಿಸಿಕೊಳ್ಳದಿದ್ದರೆ ಆಳುಮಕ್ಕಳ ಪ್ರಾಣವೇ ಹೋಯಿತೆಂದು ತಿಳಿಯಿರಿ!" ಬಾಗಿಲ ಬಳಿಯಿಂದ ಒಮ್ಮೆಲೆ ಒಂದು ಪ್ರಶ್ನೆ ಬಂದಿತು "ಆಗ ನಿಮ್ಮ ಕುತ್ತಿಗೆ ಕತ್ತರಿಸುವವಲ್ಲವೆ ರತನ? ದೊಡ್ಡವರ ಮನೆಯಲ್ಲಿ ಅಷ್ಟು ತೊಂದರೆಯಿದ್ದರೆ ಬೇರೆ ಏಕೆ ಹೋಗುವುದಿಲ್ಲ?"

ಯಜಮಾನಿಯ ಪ್ರಶ್ನೆಯಿಂದ ರತನ ಕುಂಠಿತನಾಗಿ ತಲೆಯನ್ನು ಕೆಳಗೆ ಮಾಡಿಕೊಂಡು ಸುಮ್ಮಗೆ ಕುಳಿತುಬಿಟ್ಟ. ರಾಜಲಕ್ಷ್ಮಿಯೆಂದಳು "ನಿನ್ನ ಕೆಲಸವೇನು? ಅವರ ತಲೆನೋಯುತ್ತಿರುವುದೆಂಬುದನ್ನು ಬಂಕೂನಿಂದ ತಿಳಿಯಿತು. ನಾನು ನಿನಗೆ ಹೇಳಿದೆ. ಆದುದರಿಂದ ರಾತ್ರಿ ಎಂಟು ಗಂಟೆಗೆ ಇಲ್ಲಿಗೆ ಬಂದು ನನ್ನ ದೊಡ್ಡಸ್ತಿಕೆಯ ಮಾತನ್ನು ಹೇಳುತ್ತಿರುವೆಯಾ! ನಾಳೆಯಿಂದ ಬೇರೆ ಕಡೆಗೆ ನೌಕರಿಯನ್ನು ಹುಡುಕಿಕೊ—ಇನ್ನು ಇಲ್ಲಿ ಕೆಲಸವಿಲ್ಲ, ತಿಳಿಯಿತೇನು?'

ರಾಜಲಕ್ಷ್ಮಿಯು ಹೊರಟು ಹೋದಬಳಿಕ ರತನ ಓಡಿಕೊಲೋನ್ ಮತ್ತು ನೀರು ಕೂಡಿಸಿ ಬಟ್ಟೆಯನ್ನು ಅದರಲ್ಲಿ ಅದ್ದಿ ನನ್ನ ತಲೆಯ ಮೇಲೆ ಇಟ್ಟು ಗಾಳಿ ಹಾಕತೊಡಗಿದ ರಾಜಲಕ್ಷ್ಮಿಯು ಅದೇ ಕ್ಷಣ ಬಂದು ಕೇಳಿದಳು "ಏನು ನಾಳೆಯೆ ಊರಿಗೆ ಹೋಗುವಿರಾ?" ನಾನು ಹೋಗಬಯಸಿದುದು ಸತ್ಯ ಆದರೆ ಊರಿಗೆ ನಾನು ಹೋಗುವುದಿರಲಿಲ್ಲ.

ಆದ್ದರಿಂದ ಪ್ರಶ್ನೆಗೆ ಉತ್ತರವನ್ನು ಬೇರೆ ತರಹವಾಗಿ ಕೊಟ್ಟೆ, "ಹೌದು, ನಾಳೆ ಬೆಳಿಗ್ಗೆಯೆ ಹೋಗುವೆ"

"ಬೆಳಿಗ್ಗೆ ಯಾವ ಗಾಡಿಯಿಂದ ಹೋಗುವಿರಿ?"

"ಬೆಳಿಗ್ಗೇ ಹೊರಟುಬಿಡುವೆ—ಯಾವ ಗಾಡಿಯು ಸಿಗುವುದೊ ಆದೇ ಗಾಡಿಯಿಂದ ಹೋಗುವೆ"

"ಒಳ್ಳೇದು, ಗಾಡಿಯು ನಿಶ್ಚಿತ ವೇಳೆ ಬೇಕಾಗಿದ್ದರೆ ಯಾರನ್ನಾದರೂ ಸ್ಟೇಶನಕ್ಕೆ ಕಳಿಸಿ ಟಾಯಿಮ್‌ಟೇಬಲ್ ತರಿಸುವೆ" ಎಂದು ರಾಜಲಕ್ಷ್ಮಿಯು ಹೊರಟುಹೋದಳು

ಬಹಿಕ ರತನ ತನ್ನ ಕಾರ್ಯವನ್ನು ಮುಗಿಸಿಕೊಂಡು ಯಥಾಸಮಯಕ್ಕೆ ಹೊರಟುಹೋದ ಕೆಳಗಿಂದ ಆಳುಮಕ್ಕಳ ಗದ್ದಲವು ಕೇಳಿ ಬರುತ್ತಿದ್ದುದು ನಿಂತಿತು. ಎಲ್ಲರೂ ನಿದ್ರಿಸುವುದಕ್ಕಾಗಿ ತಮ್ಮ ತಮ್ಮ ಹಾಸುಗೆಗೆ ಹೋಗಿರಬೇಕೆಂದು ನಾನು ತಿಳಿದೆ

ಆದರೆ ನನಗೆ ನಿದ್ರೆಯು ಬರಲಿಲ್ಲ ಆಗಾಗ್ಗೆ ತಿರುತಿರುಗಿ ರಾಜ-ಲಕ್ಷ್ಮಿಯು ಕೋಪಿಸಿಕೊಂಡುದು ಏಕೆ? ಎಂಬ ಮಾತೇ ಮನದಲ್ಲಿ ಬರತೊಡಗಿತು ನನ್ನನ್ನು ಕಳುಹಲಿಕ್ಕೆ ಇಷ್ಟು ಆತುರಪಡುವಳೇಕೆ? ನಾನು ಅಂತಹುದನ್ನೇನು ಮಾಡಿರುವೆ? ದೊಡ್ಡವರಿಗೆ ಕ್ರೋಧ ಹೀಗೆಯೆ ಬರುವುದು ಮತ್ತು ಹೀಗೆಯೆ ಹೋಗುವುದು ಎಂದು ರತನ ಹೇಳಿದ್ದ ಇದು ಇನ್ನಿತರ ದೊಡ್ಡ ಮನಷ್ಯರಿಗೆ ಅನ್ವಯಿಸುವುದೊ ಇಲ್ಲವೊ ನನಗೆ ಗೊತ್ತಿಲ್ಲ ಆದರೆ ಪ್ಯಾರಿಗಂತೂ ಇದು ಸರಿಯಾಗಿ ಅನ್ವಯಿಸುವುದಿಲ್ಲ ಆಕೆಯು ಅತ್ಯಂತ ಸಂಯಮನವುಳ್ಳಕೆ, ಬುದ್ಧಿ-ವಂತೆ ಎಂಬುದರ ಪರಿಚಯವು ನನಗೆ ಆಗಾಗ್ಗೆ ದೊರೆತುಹೋಗಿದೆ; ಮತ್ತು ನನ್ನಲ್ಲಿ ಬುದ್ಧಿವಂತಿಕೆಯು ಅಷ್ಟು ಇರಲಿಕ್ಕಿಲ್ಲ, ಆದರೆ ಪ್ರವೃತ್ತಿಯಲ್ಲಿ ಆಕೆಗಿಂತ ನಾನು ಕಡಮೆ ಸಂಯಮಶೀಲನಿಲ್ಲ—ಯಾರಿಗಿಂತಲೂ ಸಂಯಮದ ದೃಷ್ಟಿಯಿಂದ ಕಡಮೆಯಿಲ್ಲವೆಂದು ನಾನು ತಿಳಿದುಕೊಂಡಿರುವೆ ನನ್ನ ಹೃದಯದಲ್ಲಿ ಏನೇ ಇರಲೊಲ್ಲದೇಕೆ, ಮೈಮೇಲಿ ಎಚ್ಚರವು ಇಲ್ಲದಾಗಲೂ ಅದು ನನ್ನ ಬಾಯಿಂದ ಹೊರಬೀಳುವುದು ಸಂಭವನೀಯವಿಲ್ಲ. ವ್ಯವಹಾರದಲ್ಲಿಯೂ ನಾನು ಹಾಗೆ ಮಾಡಿರ

ಬಹುದೇನು? ಅದೂ ನನಗೆ ನೆನಪಿಲ್ಲ ಸ್ವತಃ ಆಕೆಗೆ ತನ್ನ ಯಾವುದೋ ಕೆಲಸದ ನಿಮಿತ್ತದಿಂದ ಹಾಗೆ ನಾಚಿಕೆಯೆನಿಸಿದ್ದರೆ ಆ ಮಾತು ಬೇರೆ. ಆದರೆ, ನನ್ನ ಮೇಲೆ ಕೋಪಿಸಿಕೊಳ್ಳುವುದಕ್ಕೆ ಯಾವ ಕಾರಣವೂ ಇಲ್ಲ. ಆದುದರಿಂದ ಅಗಲಿಕೆಯ ವೇಳೆಯಲ್ಲಿ ಆಕೆಯ ಈ ಉದಾಸೀನ ಭಾವವು ನನಗೆ ದುಃಖವೀಯುತೊಡಗಿತು ಆಗ ನನಗಾಗುವ ದುಃಖವು ಕಡಮೆಯಿರಲಿಲ್ಲ

ಬಹಳ ರಾತ್ರಿಯು ಕಳೆದ ಮೇಲೆ ಒಮ್ಮಿಂದೊಮ್ಮೆಗೆ ನನ್ನ ತಂದ್ರಾವಸ್ಥೆಯು ಮಾಯವಾಯಿತು ನಾನು ಕಣ್ದೆರೆದು ನೋಡಿದೆ. ರಾಜಲಕ್ಷ್ಮಿಯು ಕೋಣೆಯೊಳಗೆ ಬಂದು ಮೇಜಿನ ಮೇಲೆ ಇಟ್ಟ ದೀಪವನ್ನು ಆರಿಸಿ ಬಾಗಿಲಬಳಿಯ ಮೂಲೆಯಲ್ಲಿಟ್ಟಳು ಕಿಡಿಕಿಯು ತೆರೆದಿದ್ದಿತು, ಅದನ್ನು ಮುಚ್ಚಿ, ನನ್ನ ಹಾಸಿಗೆಯ ಬಳಿ ಬಂದುನಿಂತು ಸ್ವಲ್ಪಹೊತ್ತು ಯೋಚಿಸಿದಳು ಬಳಿಕ ಸೊಳ್ಳೆಪರದೆಯೊಳಗೆ ಕೈಹಾಕಿ ನನ್ನ ಹಣೆಯನ್ನು ಮುಟ್ಟಿ ಜ್ವರವನ್ನು ನೋಡಿದಳು. ಬಳಿಕ ಶರ್ಟಿನ ಗುಂಡಿಗಳನ್ನು ಬಿಚ್ಚಿ ಹೃದಯದ ತಾಪನ್ನು ಆಗಾಗ್ಗೆ ನೋಡತೊಡಗಿದಳು ಏಕಾಂತದಲ್ಲಿ ಬಂದು ಸ್ಪರ್ಶಿಸುವ ನಾರಿಯ ಕರಸ್ಪರ್ಶದಿಂದ ನಾನು ಮೊದಲು ಕುಂಠಿತನಾದೆ, ನಾಚಿಕೆಪಟ್ಟುಕೊಂಡೆ, ಆದರೆ ಮರುಕ್ಷಣದಲ್ಲಿಯೆ ಯೋಚಿಸಿದೆ-ರೋಗದಿಂದ ಪೀಡಿತನಾಗಿ ಎಚ್ಚರದಪ್ಪಿದಾಗ ಬಂದು, ನನ್ನ ಪ್ರಾಣಗಳನ್ನು ಮರಳಿತಂದ ನಾರಿಯ ಎದುರಿಗೆ ನಾಚಿಕೆ ಯಾತರದು! ಬಳಿಕ ಸೊಳ್ಳೆಪರದೆಯಂಚನ್ನು ಗಾದಿಯ ಬುಡಕ್ಕೆ ಸರಿಯಾಗಿ ಸೇರಿಸಿ ಅತ್ಯಂತ ಸಾವಧಾನದಿಂದ ಬಾಗಿಲನ್ನು ಮುಚ್ಚಿ ಹೊರಗೆ ಹೋದಳು.

ನಾನು ಎಲ್ಲವನ್ನೂ ನೋಡಿದೆ ಮತ್ತು ಎಲ್ಲವನ್ನೂ ಅರಿತೆ. ಕದ್ದು-ಮುಚ್ಚಿ ಬಂದಾಕೆಯನ್ನು ಕದ್ದು-ಮುಚ್ಚಿಯೇ ಹೋಗಗೊಟ್ಟೆ ಆದರೆ ಆ ನಿರ್ಜನ ಅರ್ಧರಾತ್ರಿಯಲ್ಲಿ ತನ್ನ ತನುವನ್ನು ಎಷ್ಟು ನನ್ನ ಸಮೀಪದಲ್ಲಿ ಬಿಟ್ಟುಹೋದಳೆಂಬುದನ್ನು ಆಕೆಯು ಅರಿಯಳು ನಿದ್ರೆಯಿಂದ ಬೆಳಗ್ಗೆ ಎಚ್ಚತ್ತಾಗ ಜ್ವರ ಬಂದಿದ್ದುವು ಕಣ್ಣು ಮತ್ತು ಮುಖ ಬಿಸಿಬಿಸಿಯಾಗಿದ್ದುವು. ತಲೆಯಂತೂ ದಿಂಬನ್ನು ಬಿಟ್ಟು ಏಳುತ್ತಲೇ ಇರಲಿಲ್ಲ, ಇಷ್ಟು ಭಾರವಾಗಿತ್ತು. ಆದರೂ ನಾನು ಹೊರಡಲೇಬೇಕು. ಇನ್ನು

ಈ ಮನೆಯಲ್ಲಿ ನನ್ನ ಮೇಲೆ ನನಗೇ ವಿಶ್ವಾಸವು ಉಳಿಯದಾಯಿತು, ಯಾವ ಕ್ಷಣದಲ್ಲಿ ಯಾವ ಮೋಸವಾಗುವದೊ ತಿಳಿಯದಾಯಿತು. ಆದರೆ ಈ ಭಯ ನನಗಾಗಿ ಇಲ್ಲಿರಲಿಲ್ಲ ಆದರೆ ರಾಜಲಕ್ಷ್ಮಿಗಾಗಿಯೆ ನಾನು ರಾಜಲಕ್ಷ್ಮಿಯನ್ನು ಬಿಟ್ಟು ಹೋಗಬೇಕಾಗುವುದು. ಇದರಲ್ಲಿ ಇಷ್ಟು ಹಿಂದು ಮುಂದು ನೋಡುವಂತಿರಲಿಲ್ಲ

ಆಕೆಯು ತನ್ನ ಗತಜೀವನದ ಕಷ್ಟನ್ನು ಸಾಕಷ್ಟು ತೊಳೆದು ಬಿಟ್ಟಿರುವಳೆಂದು ಮನದಲ್ಲೇ ಯೋಚಿಸಿ ತಿಳಿದುಕೊಂಡೆ ಅನೇಕ ಮಕ್ಕಳು ಆಕೆಯನ್ನು 'ಅಮ್ಮಾ ಅಮ್ಮಾ' ಎಂದು ಕೂಗುತ್ತವೆ ಈ ಭಕ್ತಿ ಮತ್ತು ಪ್ರೀತಿಯ ಆನಂದಭವನದಿಂದ ಆಕೆಯನ್ನು ಅವಮಾನಗೊಳಿಸಿ ಎಳೆದು ಕೊಂಡು ಹೊರಗೆ ತರಲೆ? ಇಷ್ಟು ಹಿರಿಯ ಪ್ರೀತಿಯ ಸಾರ್ಥಕ್ಯವು ಕೊನೆಗೆ ನನ್ನ ಜೀವನದ ಅಧ್ಯಾಯದಲ್ಲಿ ಚಿರಕಾಲದವರೆಗೆ ಲಿಪಿಬದ್ಧ ವಾಗಿ ಉಳಿಯುವುದೇ?

ಪ್ಯಾರಿಯು ಕೋಣೆಯೊಳಗೆ ಬಂದು " ಈಗ ಹೇಗಿದೆ ಪ್ರಕೃತಿ ? " ಎಂದಳು.

" ಅಷ್ಟೇನೂ ಕೆಟ್ಟಿಲ್ಲ ಹೋಗಬಲ್ಲೆ "

" ಇವೊತ್ತು ಹೋಗದಿದ್ದರೆ ನಡೆಯದೆ? "

" ಇಲ್ಲ, ಇವೊತ್ತು ಹೋಗಲೇಬೇಕು "

" ಹಾಗಾದರೆ, ಮನೆಯನ್ನು ತಲ್ಪುತ್ತಲೇ ಕಾಗದ ಬರೆಯಬೇಕು. ಇಲ್ಲದೆ ಹೋದರೆ ನಮಗೆ ಬಹಳ ಚಿಂತೆಯಾಗುವುದು "

ಆಕೆಯ ಅವಿಚಲಿತ ಧೈರ್ಯವನ್ನು ಕಂಡು ಮುಗ್ಧನಾದೆ ಆಗಲೇ ಒಪ್ಪಿ " ಒಳ್ಳೇದು, ಮನೆಗೇ ಹೋಗುವೆ ಮತ್ತು ಮುಟ್ಟುತ್ತಲೇ ಕಾಗದ ಬರೆದು ತಿಳಿಸುವೆ " ಎಂದೆ

" ಸುರಕ್ಷಿತವಾಗಿ ಮುಟ್ಟಿದ ಬಗ್ಗೆ ಅಗತ್ಯವಾಗಿ ಬರೆಯಬೇಕು. ನಾನೂ ಕಾಗದ ಬರೆದು ಒಂದೆರಡು ವಿಷಯಗಳನ್ನು ಅರಿತುಕೊಳ್ಳುವೆ "

ನಾನು ಹೊರಗೆ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವಾಗ ಎರಡನೆಯ ಅಂತಸ್ತಿನ ಹೊರಭಾಗದಲ್ಲಿ ನಿಂತು ರಾಜಲಕ್ಷ್ಮಿಯು ನೋಡುತ್ತಿದ್ದಳು.

ಎಂಬುದನ್ನು ಕಂಡೆ ಆಕೆಯ ಮುಖವನ್ನು ನೋಡಿ ಆಕೆಯ ಅಂತಃ ಕರಣದಲ್ಲಿ ಏನು ಅಳುತ್ತಿರುವುದೆಂಬುದನ್ನು ತಿಳಿಯದಾದೆ

ನನಗೆ ನನ್ನ ಅನ್ನದಾ ಜೀಜೀಯ ನೆನಹು ಬಂದಿತು. ಬಹಳ ದಿನಗಳ ಹಿಂದೆ ಆಕೆಯೂ ಹೀಗೆಯೇ ಅತ್ಯಂತ ಗಂಭೀರಳಾಗಿ, ಶಾಂತಳಾಗಿ ನಿಂತಿದ್ದಳು ಆಗಿನ ಆಕೆಯ ಆ ಕಣ್ಣುಗಳ ಕರುಣಾದೃಷ್ಟಿಯನ್ನು ನಾನಿಂದಿಗೂ ಮರೆತಿಲ್ಲ. ಆದರೆ ಆ ದೃಷ್ಟಿಯಲ್ಲಿ ಅಗಲಿಕೆಯ ವ್ಯಥೆಯು ಎಷ್ಟು ದಟ್ಟವಾಗಿತ್ತೆಂಬುದನ್ನು ಆಗ ನೋಡದಾಗಿದ್ದೆ! ಇವೊತ್ತು ಅದೇ ಬಗೆಯದೊಂದು ವಸ್ತು ಆ ನೀಲಿಯ ಕಣ್ಣುಗಳಲ್ಲಿ ಇದೆಯೊ ಅಥವಾ ಇಲ್ಲವೊ ಎಂಬುದನ್ನು ತಿಳಿದುಕೊಳ್ಳಲೇನು?

ನೀಳವಾದ ಉಸಿರ್ಗರೆದು ನಾನು ಪಲ್ಲಕ್ಕಿಯಲ್ಲಿ ಕುಳಿತೆ ಹಿರಿಯ ಪ್ರೀತಿಯು ಹತ್ತಿರ ಬರಮಾಡಿಕೊಳ್ಳುವುದಷ್ಟೇ ಅಲ್ಲ, ದೂರ ಕೂಡ ನೂಕುವುದು. ಚಿಕ್ಕಚಿಕ್ಕ ಪ್ರೀತಿಗೆ ಇದು ಸಾಧ್ಯವಿಲ್ಲ ಚಿಕ್ಕ ಪ್ರೀತಿಯು ಈ ಸುಖೈಶ್ವರ್ಯದಿಂದ ತುಂಬಿದ ಸ್ನೇಹ-ಸ್ವರ್ಗದಿಂದ ನನ್ನನ್ನು ನನ್ನ ಹಿತಕ್ಕಾಗಿ, ಕಲ್ಯಾಣಕ್ಕಾಗಿ ಮುಂದೆ ಹೋಗಗೊಡದು. ಬೋಯಿಗಳು ಪಲ್ಲಕ್ಕಿಯನ್ನು ಹೊತ್ತುಕೊಂಡು ಭರದಿಂದ ಸ್ಟೇಶನದ ಕಡೆಗೆ ಹೊರಟರು ಮನದಲ್ಲಿಯೆ ನಾನು ಬಾರಿ ಬಾರಿ ಎನ್ನತೊಡಗಿದೆ "ಲಕ್ಷ್ಮೀ, ದುಃಖಿಸಬೇಡ ನಾನು ನಿನ್ನಲ್ಲಿಂದ ಹೊರಟುದೇ ಚೆನ್ನಾಯಿತು ನಿನ್ನ ಋಣವನ್ನು ತೀರಿಸುವ ಶಕ್ತಿಯು ನನ್ನೀ ಜೀವನದಲ್ಲಿ ಇಲ್ಲ ಆದರೆ ಯಾವ ಜೀವನವನ್ನು ನೀನು ಕೊಟ್ಟಿರುವೆಯೊ ಆ ಜೀವನದ ದುರುಪಯೋಗ ಮಾಡಿಕೊಂಡು ನಾನು ನಿನ್ನ ಅಪಮಾನವನ್ನು ಇನ್ನು ಮಾಡೆ ನಿನ್ನಿಂದ ನಾನು ದೂರವಿದ್ದರೂ ಈ ದಿನ ನಾನು ಮಾಡಿದ ಸಂಕಲ್ಪವನ್ನು ಅಕ್ಷಯವಾಗಿಟ್ಟಿರುವೆ"

---